ಇನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಅನೇಕ ಇಲಾಖೆಗಳು ಸೇರಿವೆ. ಸಾಮಾನ್ಯ ಆಡಳಿತ ಮತ್ತು ಇತರೇ ಇಲಾಖೆಗಳ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈಹೊತ್ತು ಒಂದು ಹೇಳಿಕೆ ನೋಡಿದೆ. ಶ್ರೀಮಾನ್ ಎನ್. ಟಿ. ರಾಮರಾವ್ ಅವರು ಆಂಧ್ರಪ್ರದೇಶದಲ್ಲಿ ಸೆಲ್ಫ್ ರೆಸ್ಟ್ರಿಕ್ಟ್ ಮಾರ್ಟ್‌ಗೇಜ್ ಮಾಡುವುದರ ಬಗ್ಗೆ ಹೇಳಿದ್ದಾರೆ. ಈ ವಿಚಾರದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಂದ ಸರಿಯಾದ ಹೇಳಿಕೆ ಬಾರದೇ ಹೋದರೆ ಕಷ್ಟ. ಅದಕ್ಕೆ ನಾನು ಇದನ್ನು ಎತ್ತಬೇಕಾಗಿದೆ. ನಾನು ಹೇಳುವುದೇನೆಂದರೆ, The Hon'ble Chief Minister must get

up and say that he is not prepared to mortgage the interests of the people of Karnataka to Andhra Pradesh. ಹೀಗೆ ಹೇಳಬೇಕು. If there is anything against the State interest ಆಗ ಸಂಘರ್ಷಣೆ ಆಗುತ್ತದೆ. ಆವಾಗ ನಾವು our projected self-respect or projected interest of the State—ಇದಕ್ಕೆ ಸಂಘರ್ಷಣೆ ಮಾಡಿದಾಗ I think in the larger interest of the nation, the interest of the State will have to be upheld. ಇದು ನಡೆಯಬೇಕು. ಏತಕ್ಕೆಂದರೆ ಈವೊತ್ತು ಈ ತೆಲುಗು-ಗಂಗಾ ಯೋಜನೆ ಬಗ್ಗೆ ಲೋಕಸಭೆಯಲ್ಲಿ ಡಿಬೇಟ್ ನಡೆಯುತ್ತಾ ಇದೆ. ಇದರಲ್ಲಿ ನಮ್ಮ ಕರ್ತವ್ಯ ನಾವು ಮಾಡಬೇಕು. ಕೇಂದ್ರ ಸರ್ಕಾರದಲ್ಲಿ ನೀರಾವರಿ ಸಚಿವರು ನಮ್ಮ ಕರ್ನಾಟಕದವರೇ ಆಗಿದ್ದಾರೆ. ಅವರು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. that makes the case of Telugu Ganga or the right of Karnataka very clear. ಇದರಲ್ಲಿ ಏನಾಗಿದೆ ಎಂದರೆ, ಈ ಬಚಾವತ್ ಕಮೀಷನ್‌ನಲ್ಲಿ ತೆಲುಗು-ಗಂಗಾ ಯೋಜನೆಯಲ್ಲಿ ಇರ್ರಿಗೇಷನ್ ಕಾಂಪೊನೆಂಟ್‌ಗೆ ಅವಕಾಶ ಇಲ್ಲ ಎಂದು ಹೇಳುತ್ತಿದ್ದಾರೆ, There is no irrigation component. ಆದುದರಿಂದ ನಾವು ಇದನ್ನು ಕ್ಲಿಯರ್ ಮಾಡುವುದಕ್ಕೆ ಆಗುತ್ತಾ ಇಲ್ಲ. ಇದರ ಬಗ್ಗೆ ಕಾರಣವನ್ನೂ ಸಹ ಆಂಧ್ರ ಪ್ರದೇಶದವರು ಕೊಡುತ್ತಾ ಇಲ್ಲ. ಅದರಲ್ಲಿ ಸ್ಪಷ್ಟವಾಗಿ ಕಾಣಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸದನದಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಅವರು ಹಾಗೆ ಇವರು ಹೀಗೆ ಅನ್ನುವುದು ಬೇಡ. ಬಚಾವತ್ ಕಮೀಷನ್ ರಿಪೋರ್ಟ್‌ನಲ್ಲಿ ಇದು ರಿಕಾರ್ಡ್ ಆಗಿದೆ. Irrigation component is not a right given to him either temporarily or permanently. ಎಂದು. Surplus water ಬಗ್ಗೆ ಸೆಂಟ್ರಲ್ ವಾಟರ್ ಪವರ್ ಬೋರ್ಡ್ ಕಮೀಷನ್‌ನವರು ಏನು ಹೇಳಿದ್ದಾರೆ ಎಂದರೆ Unless you agree for it. I don't think our Hon. Chief Minister will agree for it. ಅಂತ ಹೇಳಿದ್ದಾರೆ. ಈ ವಿಚಾರವನ್ನು ಅಷ್ಟಕ್ಕೇನೇ ನಿಲ್ಲಿಸಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ವಿಚಾರ ಹೇಳುತ್ತೇನೆ. ನನಗೆ ಕೆಲವು ವಿಚಾರಗಳು ತಿಳಿದುಬಂದಿದೆ ನನಗೆ ಅಸಿಸ್ಟೆಂಟ್ ಕಮೀಷನರ್ಸ್ ಪ್ರಮೋಷನ್ ಬಗ್ಗೆ ಕೆಲವು ವಿಚಾರ ತಿಳಿದುಬಂದಿದೆ. ಅದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಆದರೆ ಈ ವಿಚಾರವನ್ನು ಅಷ್ಟು ಸುಲಭವಾಗಿ ತಾವು ಪರಿಗಣನೆಗೆ ತೆಗೆದುಕೊಳ್ಳಬಾರದು. ಇದರಲ್ಲಿ ಬಹಳ ಗಂಭೀರವಾದ ವಿಚಾರ ಇದೆ. ಇದು ಸರ್ಕಾರದ ಒಂದು ಮೂಲಭೂತ ಪ್ರಶ್ನೆ ಮಾತ್ರವಲ್ಲದೆ It will reflect on the character of this Government. This much I must say. ೧೯೭೪ನೇ ಇಸವಿಯಲ್ಲಿ ಏನಾಯಿತು ಅನ್ನುವುದು ತಮಗೆ ಗೊತ್ತಿದೆ. ಬಹುಶಃ ಮಾನ್ಯ ಅಧ್ಯಕ್ಷರು ಆವಾಗ ಈ ಮನೆಯ ಸದಸ್ಯರು ಆಗಿರಲಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು. ನಾನು ಬಂದದ್ದು ೧೯೭೭ರ ಡಿಸೆಂಬರ್‌ನಲ್ಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ —೧೯೭೪ರಲ್ಲಿ ಒಂದು ರಿಕ್ರೂಟ್‌ಮೆಂಟ್ ಆಯಿತು. ಹಾವನೂರು ರಿಪೋರ್ಟ್ ರೆಕಮೆಂಡೇಷನ್ ಪ್ರಕಾರ ಅದನ್ನು ಜಾರಿಗೆ ಕೊಟ್ಟಿದ್ದಾರೆ. ಆ ಪ್ರಿನ್ಸಿಪಲ್ ಪ್ರಕಾರ ಅದನ್ನು ಇಂಪ್ಲಿಮೆಂಟ್ ಮಾಡಿದ ಮೇಲೆ ೧೯೭೯ರ ಮೇಲೆ ಇದರ ಬಗ್ಗೆ ಒಂದು ರಿಕ್ರೂಟ್‌ಮೆಂಟ್ ಆಯಿತು. Government Order dated 29th October 1974 ರಲ್ಲಿ Objective ಬಗ್ಗೆ ಈ ರೀತಿ ಇದೆ.

Karnataka Combined Civil Services Competitive Examination—Recruitment of Gazetted Probatitioners for next five years

ಂತ ಇದೆ. ಇದರಲ್ಲಿ ಆಬ್ಜೆಕ್ಟೀವ್ ಏನು ಇದೆ ಎಂದರೆ ಅದು ಈ ರೀತಿ ಇದೆ.—
Objective......

"Government have decided that hereafter, the recruitment under these rules should be done regularly in every calendar year in accordance with a fixed programme in order to ensure that;

i) the intending candidates have a clear idea as to when such examinations are likely to be held;

ii) the in-take of direct recruits to the State Services and infusion of young person is regularly and evenly spread out;

iii) the ratio between direct recruits and promotees is maintained according to the Cadre and Recruitment Rules; and

iv) the reservations in favour of Scheduled Tribes/Schedule Castes/other Backward Classes are effectively implemented.

This is the purpose of G.O. ಈ ಜಿ.ಒ. ನಲ್ಲಿ ಯಾವ ಒಂದು ಉದ್ದೇಶ ಇದೆ ಅದು ೧೯೭೮ರ ಬ್ಯಾಚ್‌ನಿಂದ ಎಫೆಕ್ಟೀವಾಗಿ ಜಾರಿಗೆ ಬಂತು. First recruitment took place in 1978. ಇದರ ಬಗ್ಗೆ ವಾದವಿವಾದ ಮಾಡಲಿಕ್ಕೆ ಇಲ್ಲವೇ ಹೆಚ್ಚು ವಿಶ್ಲೇಷಣೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಆದರೆ ಈ ಕಡಲಿ ಜಡ್ಜ್‌ಮೆಂಟ್ ಪ್ರಸ್ತಾಪ ಬರುತ್ತಾ ಇದೆ. ಆ ಕಡಲಿ ಜಡ್ಜ್‌ಮೆಂಟ್ ಪ್ರಕಾರ ೧೯೭೮ರಲ್ಲಿ ಏನು ಡೈರೆಕ್ಟ್ ರೆಕ್ರೂಟ್ ಆಗಿದ್ದಾರೋ ಆ ಡೈರೆಕ್ಟ್ ರೆಕ್ರೂಟೀಸ್‌ಗೆ ಪೂರ್ತಿ ನ್ಯಾಯ ಮಾಡಲಿಲ್ಲ, ಅದರಲ್ಲಿ ನ್ಯಾಯ ಸಿಗಲಿಲ್ಲ. ಆ ಕಡಲಿ ಜಡ್ಜ್‌ಮೆಂಟ್ ಮೇಲೆ ಕೂಡ ಸರ್ಕಾರದವರು ಡಿವಿಜನಲ್ ಬೆಂಚ್‌ಗೆ ಅಪೀಲ್ ಮಾಡಿದ್ದಾರೆ, ಅದು ರಿಜೆಕ್ಟ್ ಆಗಿದೆ. ಇತ್ತೀಚೆಗೆ ಕಡಲಿ ಜಡ್ಜ್‌ಮೆಂಟ್ ಪ್ರಕಾರ ಯಾವ ಪ್ರಿನ್ಸಿಪಲ್ ಇದೆ, ದಟ್ ಮೀನ್ಸ್ ಆ ಮೂರು ವರ್ಷದ ಯಾವ ರೂಲ್ ಇದೆ, Limitations for carry forward of vacancies. ಏನಿದೆ ಅದರ ಬಗ್ಗೆ ಡಿವಿಜನಲ್ ಬೆಂಚ್ ಕೂಡ ಫುಲ್ ಬೆಂಚ್‌ಗೆ ರೆಫರ್ ಮಾಡಿದೆ, ಆದರೂ ಕೂಡ ಕಡಲಿ ಜಡ್ಜ್‌ಮೆಂಟ್ ಪ್ರಕಾರ ಅವತ್ತು ಪ್ರಮೋಷನ್ ಕೊಟ್ಟಿದ್ದಾರೆ. ಎಲ್ಲಿಯವರೆಗೆ ಅಂದರೆ ೧೯೭೭ರ ಬ್ಯಾಚ್‌ನವರಿಗೆ ಪ್ರಮೋಷನ್ ಸಿಕ್ಕಿದೆ. ೧೯೭೭ ಬ್ಯಾಚ್‌ನವರಿಗೆ ಪ್ರಮೋಷನ್ ಸಿಕ್ಕಿದ ಮೇಲೆ ೧೯೭೮ ಬ್ಯಾಚ್ ಬಂದ ಕೂಡಲೇ ಅದನ್ನು ನಿಲ್ಲಿಸಿಬಿಟ್ಟರು. ೧೯೭೭ನೇ ಬ್ಯಾಚ್ ಸರಿ ಎಂದು ಪ್ರಮೋಷನ್ ಕೊಡುವಂಥ ಪ್ರಿನ್ಸಿಪಲನ್ನು ಒಪ್ಪಿಕೊಂಡಿರಿ. ಅವರಿಗೆ ನೀವು ಪ್ರಮೋಷನ್ ಕೊಟ್ಟಿರಿ. ೧೯೭೮ ಬ್ಯಾಚ್‌ನವರು ಬಂದಾಗ ಏಕೆ ನಿಲ್ಲಿಸಿಬಿಟ್ಟಿದ್ದೀರಿ, ಈ ಪ್ರಶ್ನೆ ಇವತ್ತು ಇರತಕ್ಕಂಥಾದ್ದು. ಇದನ್ನು ನಿಲ್ಲಿಸಿದ ಮೇಲೆ ಸುಮಾರು ವರ್ಷದಿಂದ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿಲ್ಲ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಹೇಳಿಕೆ ಕೊಟ್ಟರು. ಆ ಹೇಳಿಕೆ ಪ್ರಕಾರ ಏನು ಹೇಳಿದ್ದಾರೆಂದರೆ :—

"When Mr. Havanur demanded to know why the kadili judgment was ignored when the promotions were made in 1983 Mr. Hegde pointed out the Gradation List wasprepared then on 1st January 1983 by the previous Government."

ಎಂದು ಸನ್ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಟ್ಟರು. ಆದರೆ ಆ ಉತ್ತರ ಸರಿಯಲ್ಲ. ಏಕೆಂದರೆ, ಅದರ ನೋಟಿಫಿಕೇಷನ್ ಕೊಟ್ಟಿರತಕ್ಕಂಥಾದ್ದು ಏಪ್ರಿಲ್ ೧೯೮೩ರಲ್ಲಿ ಗ್ರೆಡೇಷನ್ ಲಿಸ್ಟ್ ತಯಾರು ಮಾಡಿದ್ದು ಹಿಂದಿನ ಸರ್ಕಾರ ಅಲ್ಲ, ನಿಮ್ಮ ಸರ್ಕಾರ 18th April 1983 ರಲ್ಲಿ ಮಾಡಿದ್ದು. I have got a photostate Copy of this order. ಇದರ ಪ್ರಕಾರ ೨೨೧ ಮಂದಿ ಅಂದರೆ ಇಷ್ಟು ಸೀರಿಯಲ್ ನಂಬರ್‌ವರೆಗೆ ಬಂದಿದೆ. ಅದು ೧೯೭೭ನೇ ಬ್ಯಾಚ್. ೧೯೭೮ರ ಬ್ಯಾಚ್‌ನಲ್ಲಿ ೨೨೨ ನಂಬರ್‌ಗೆ ಇಲ್ಲ. ಇದರಲ್ಲಿ ಬಸವಣ್ಣಾಚಾರ್ಯ, ಎನ್. ರಾಮಸ್ವಾಮಿ, ಅವರ ಹೆಸರೆಲ್ಲಾ ಇದೆ, ಅವರದ್ದು ಬಿಟ್ಟು ಬಿಟ್ಟರು. ಇದು ಆದ ಮೇಲೆ ಅವರ ಪ್ರಮೋಷನ್ ಸ್ಟಾಪ್ ಆಯಿತು. ೧೯೭೭ರಲ್ಲಿ ತಾವು ಪ್ರಮೋಟ್ ಮಾಡಿದ್ದು ಆಫ್ಟರ್ ಆಲ್ ರಿಸರ್ವೇಷನ್ ಈಸ್ ದೇರ್. ಇದರ ಪ್ರಕಾರ ೧೯೭೭ರ

ಬ್ಯಾಚ್‌ನಲ್ಲಿ ಪ್ರಮೋಟೀಸ್ ೩೦ ಮಂದಿ ಇದ್ದರು. ಅದರಲ್ಲಿ ಬ್ರಾಹ್ಮಣರು ೧೧, ಲಿಂಗಾಯತ್ಸ್ ೮, ಷೆಡ್ಯೂಲ್ಡ್ ಕ್ಯಾಸ್ಟ್ ೫, ಕೂರ್ಗಿ ೧, ಬೆಸ್ತರ್ ೧, ರೆಡ್ಡಿ ೧, ಅದರ್ಸ್ ೩, ೩೦ ಜನರ ಬ್ಯಾಚ್. ೧೯೭೮ರ ಬ್ಯಾಚ್‌ನಲ್ಲಿ ಬ್ರಾಹ್ಮಿನ್ಸ್ ೨, ಲಿಂಗಾಯತ್ಸ್ ೪, ಒಕ್ಕಲಿಗಾಸ್ ೪, ಮುಸ್ಲಿಮ್ಸ್ ೩, ಷೆಡ್ಯೂಲ್ಡ್ ಕ್ಯಾಸ್ಟ್ ೪, ವಿಶ್ವಕರ್ಮ ೩, ಅರಸ್ ೧, ನಾಡವರ್ ೧, ಗೌಡರ್ ೧, ಕೂರ್ಗಿ ೧, ಕುರುಬ ೧, ದೇವಾಂಗ ೧, ಬೆಸ್ತರ್ ೨, ಜೈನ್ಸ್ ೨, ಇದು ೧೯೭೮–೭೯ರ ಬ್ಯಾಚ್. ೧೯೭೭ರಲ್ಲಿ ತಾವು ಸ್ವಾಪ್ ಮಾಡಿದಿರಿ. ೧೯೭೮–೭೯ನವರೆಗೆ ಈ ಹಕ್ಕನ್ನು ಏಕೆ ನಿರಾಕರಣೆ ಮಾಡಿದಿರಿ. It will reflect on the character of the total approach. ಏಕೆಂದರೆ ಯಾವ ಪ್ರಿನ್ಸಿಪಲನ್ನು ತಾವು ೧೯೭೭ರಲ್ಲಿ ಒಪ್ಪಿಕೊಂಡಿದ್ದೀರಿ, ಮತ್ತೆ ಯಾವ ಪ್ರಿನ್ಸಿಪಲನ್ನು ತಾವು ಒಪ್ಪಿಕೊಂಡು ಆ ಪ್ರಮೋಷನ್ ಮಾಡಿದಿರಿ ಅದನ್ನು ಬಿಟ್ಟು ಬಿಟ್ಟಿರಿ. ಬೇರೆ ರೀತಿಯಿಂದ ಪ್ರಮೋಟೀಸ್‌ಗೆ ಅವತ್ತು ಪ್ರಮೋಷನ್ ತಾವು ಕೊಟ್ಟಿದ್ದೀರಿ. ಇದರಿಂದ ಪರಿಣಾಮ ಏನಾಗಿದೆಯೆಂದರೆ, According to these promotions ಬ್ರಾಹ್ಮಿನ್ಸ್ ೮, ಲಿಂಗಾಯತ್ಸ್ ೪, ಷೆಡ್ಯೂಲ್ಡ್ ಕ್ಯಾಸ್ಟ್ ೧, ರೆಡ್ಡಿ ೧, ಅದರ್ಸ್ ೨ ಒಟ್ಟು ೧೬. which is now effected by you on 5-3-1986. ೧೯೭೮ ಬ್ಯಾಚ್‌ನವರಿಗೆ ಕೊಟ್ಟಿದ್ದರೆ, ಬ್ರಾಹ್ಮಿನ್ಸ್ ೧, ಲಿಂಗಾಯತ್ಸ್ ೧, ಷೆಡ್ಯೂಲ್ಡ್ ಕ್ಯಾಸ್ಟ್ ೩, ಬಿಸಿಎಂ ಇನ್‌ಕ್ಲೂಡಿಂಗ್ ಮೈನಾರಿಟೀಸ್ ೧೧ ಟೋಟಲ್ ೧೬. It would have changed the total character. ಅವರಿಗೆ ಕಾನೂನು ಪ್ರಕಾರ ಪ್ರಮೋಷನ್ ಕೊಡಿ. ಆದರೆ ಜಡ್ಜ್‌ಮೆಂಟ್, ಕಾನೂನು ಪ್ರಕಾರ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ತಾವು ಪ್ರಮೋಷನ್ ವಿಚಾರದಲ್ಲಿ ವ್ಯತ್ಯಾಸ ಮಾಡಲಿಲ್ಲವೇ, ಪಕ್ಷಪಾತ ಧೋರಣೆ ಮಾಡಲಿಲ್ಲವೇ. ಯಾವ ಉದ್ದೇಶದಿಂದ ಇದನ್ನು ಮಾಡಿದಿರಿ. ಇವತ್ತು ಇದು ಫುಲ್ ಬೆಂಚ್‌ಗೆ ಹೋಗುತ್ತಿದೆ. ಇವತ್ತು ಇದರಿಂದ ಸಂಪೂರ್ಣವಾದಂಥ ಒಂದು ಅನ್ಯಾಯ ಕಾನೂನಿಗೆ ವಿರುದ್ಧವಾಗಿ ತಾವು ಮಾಡುತ್ತಿದ್ದೀರಿ ಎಂಬುದನ್ನು ತಾವು ಮನಗಂಡು ಅವನ್ನು ಸರಿಯಾಗಿ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಜಡ್ಜ್‌ಮೆಂಟ್ ಪ್ರಕಾರ ಅನ್ಯಾಯವನ್ನು ಸರಿಪಡಿಸಬೇಕು. This has happened in many cases. ಏಕೆಂದರೆ ಅನ್ಯಾಯ ಆದ ಆಫೀಸರ್ಸ್ ಹೈಕೋರ್ಟ್‌ಗೆ ಹೋಗುತ್ತಾರೆ. ಹೈಕೋರ್ಟಿಗೆ ಹೋದಾಗ ಅವರಿಗೆ ಹೈಕೋರ್ಟ್ ನ್ಯಾಯ ದಯಪಾಲಿಸುತ್ತದೆ. ಇದು ಒಂದೇ ಕೇಸ್ ಅಲ್ಲ. ಯೂನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಇದೇ ಪರಿಸ್ಥಿತಿ ಬಂತು. ಅಲ್ಲಿ ಏನಾಗಿದೆಯೆಂದರೆ ಸುಮಾರು ೧೪ ಮಂದಿ ರೀಡರ್ಸ್, ಲೆಕ್ಚರರ್ಸ್ ಎಲ್ಲಾ ಹೈಕೋರ್ಟಿಗೆ ಹೋದರು. ಸ್ಟ್ಯಾಚ್ಯೂಟ್ ಚೇಂಜ್ ಮಾಡಬೇಕು, ಸ್ಟ್ಯಾಚ್ಯೂಟ್ ಮಾಡಿಕೊಂಡು ಪ್ರಮೋಷನ್ ಕೊಡಬೇಕು ಎಂದು ತೀರ್ಪು ಕೊಟ್ಟರು. ಅದನ್ನು ಸರ್ಕಾರ ಇಂಪ್ಲಿಮೆಂಟ್ ಮಾಡಲಿಲ್ಲ. ಪುನಃ ಹೈಕೋರ್ಟಿಗೆ ಹೋದರು ಸ್ಟ್ಯಾಚ್ಯೂಟ್ ಚೇಂಜ್ ಮಾಡುತ್ತೇವೆ ಎಂದು ಸರ್ಕಾರದವರು ವಾಗ್ದಾನ ಕೊಟ್ಟರು. ಆದರೆ ಅದನ್ನು ಬದಲಾವಣೆ ಮಾಡುವ ಬದಲು ಇವತ್ತು ಕಾನೂನನ್ನೇ ಬದಲಾವಣೆ ಮಾಡಿಕೊಂಡು ಯಾರಿಗೂ ನ್ಯಾಯ ಸಿಗದೆ ಅದನ್ನೇ ಅಪಹರಿಸತಕ್ಕ ಪ್ರಯತ್ನ ಇವತ್ತು ನಡೆಯುತ್ತಿದೆ ಇದರಿಂದ ಜನಗಳಿಗೆ ಏನು ಅಭಿಪ್ರಾಯ ಬರುತ್ತದೆ ಎಂದರೆ, It will reflect on your Government. ಯೂನಿವರ್ಸಿಟಿಯ ಇಂಜಿನಿಯರ್ಸ್ ಯಾರು ಕೋರ್ಟಿಗೆ ಹೋಗಿದ್ದಾರೆ ಅವರಲ್ಲಿ ನಾನ್ ಬ್ರಾಹ್ಮಿನ್ಸ್ ಇದ್ದಾರೆ. ಅವರಿಗೆ ಸರ್ಕಾರದಿಂದ ನಮಗೆ ನ್ಯಾಯ ಸಿಗುವುದಿಲ್ಲ ಎಂದು ಗೊತ್ತಾಗಿದೆ ಮೈನಾರಿಟಿ ಕಾರ್ಪೊರೇಷನ್‌ಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದಿರಿ. Whether you like it or not many of these people are non-Brahmins. ತಾವು ಏನು ವಚನ ಕೊಟ್ಟಿದ್ದೀರಿ, ಅದರ ಪ್ರಕಾರ ನಡೆದುಕೊಳ್ಳತಕ್ಕ ಪ್ರಯತ್ನ ತಾವು ಮಾಡಬೇಕು, ನ್ಯಾಯವಾಗಿ ಕೆಲಸ ಮಾಡಿ. ಹೈಕೋರ್ಟ್ ಅಪ್‌ಹೆಲ್ಡ್ ಮಾಡುತ್ತದೆ. ಕಾನೂನು ಪ್ರಕಾರ ಇದೆ. ಔಟ್ ಆಫ್ ದಿ ವೇ ಮಾಡಬೇಕು ಎಂದು ನಾನು ಹೇಳುತ್ತಾ ಇಲ್ಲ. ಆದುದರಿಂದ ಕಾನೂನು ಜಾರಿ ಮಾಡಬೇಕು ಎಂದು ಹೇಳಲಿಕ್ಕೆ ಬಯಸುತ್ತೇನೆ ಆದುದರಿಂದ ತಾವು ಈ ಬಗ್ಗೆ ಸರಿಯಾದ ನೀತಿಯನ್ನು ಇವತ್ತು ಅಳವಡಿಸಬೇಕಾಗುತ್ತದೆ. ಆದುದರಿಂದ ಒಂದು ಬ್ಯಾಲೆನ್ಸ್ ಮೇಂಟೈನ್ ಮಾಡಿ, ಅದನ್ನು ಡಿಸ್ಪ್ಯಾಚ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ನನಗೆ ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ. ಈ ಒಂದು ವಿಷಯದ ಬಗ್ಗೆ ನಾನು ಕೆಲವು ವಿಚಾರಗಳನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿದ್ಯುತ್ ಮಂತ್ರಿಗಳೂ ಕೂಡ ಈ ವಿಚಾರದಲ್ಲಿ ಸರಿಯಾದಂಥ ಒಂದು ವಿಶ್ಲೇಷಣೆ ಮಾಡಬೇಕು. ಆದರೆ ಉತ್ತರ ಕೊಡುವಾಗ ತಮ್ಮ

ಧೋರಣೆಯಿಂದ ತಾವು ಮಾಡಿದ್ದೇ ಸರಿ ಎನ್ನುವ ವಾದ ಮುಂದಿಡುತ್ತೀರಿ, ಅಂಕಿಸಂಖ್ಯೆ ಕೊಟ್ಟು ಇನ್ನೊಂದು ರೂಪದಲ್ಲಿ ಕೊಟ್ಟು ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಿ. ಆ ಪ್ರಯತ್ನದಿಂದ ಜನಗಳಿಗೆ ಕ್ಷೇಮವಾಗುವುದಿಲ್ಲ, ಕರ್ನಾಟಕ ರಾಜ್ಯಕ್ಕೂ ಕ್ಷೇಮವಾಗುವುದಿಲ್ಲ ಎಂದು ಹೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

೧೧-೦೦ ಎ. ಎಂ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ) — ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ಡಿಮ್ಯಾಂಡುಗಳ ಮೇಲೆ ಕೆಲವು ಸಲಹೆಗಳನ್ನು ಕೊಡಲು ನಾನು ಇಷ್ಟಪಡುತ್ತೇನೆ. ನಿನ್ನೆ ಮಧ್ಯಾಹ್ನದಿಂದ ಸುಮಾರು ೧೦-೧೨ ಜನ ಮಾನ್ಯ ಸದಸ್ಯರುಗಳ ಭಾಷಣವನ್ನು ಹಾಗೂ ಅವರು ಮಾಡಿದತಕ್ಕಂತಹ ಟೀಕೆಗಳನ್ನು ಕೇಳುತ್ತಿದ್ದೇನೆ. ಅದರಲ್ಲಿ ಅನೇಕ ಮಾನ್ಯ ಸದಸ್ಯರುಗಳು ಇವರಿಗೆ ಆಫೀಸರ್‌ಗಳಿಂದ ಕೆಲಸ ಮಾಡಿಸಿಕೊಳ್ಳುವುದಕ್ಕೆ ಬರುವುದಿಲ್ಲ. ನಿಮಗೆ ಅವರು ಹೆದರುವುದಿಲ್ಲ, ಅವರದ್ದೇ ಆದ ಬೇರೆ ವರ್ಗ ಇದೆಯೆಂದು ಹೇಳಿದ್ದನ್ನು ಕೇಳಿದೆ. ನನಗಾದರೂ ಆಶ್ಚರ್ಯವಾಗುತ್ತದೆ ಏನೆಂದರೆ ಈ ಮೂರು ಪರ್ಸೆಂಟ್ ಇರತಕ್ಕಂತಹ ಜನಗಳು ಇಷ್ಟೊಂದು ಬಲಿಷ್ಠರೇ ಎಂದು? ಇವರಿಗೆ ನೀವು ಇಷ್ಟು ಹೆದರಿಕೊಳ್ಳುತ್ತಿದ್ದೀರಾ ಎಂದು ನನಗೆ ಆಶ್ಚರ್ಯವಾಗುತ್ತದೆ. ನಾನೂ ಕೂಡ ಒಬ್ಬ ದೊಡ್ಡ ಅಧಿಕಾರಿಯ ಮಗಳು ಹಾಗೂ ದೊಡ್ಡ ರೈತನಾಪಿ, ರಾಜಕಾರಣಿ ಮನೆಯ ಸೊಸೆ. ನನಗೆ ಎರಡರ ಅನುಭವವೂ ಇದೆ. ಹಿಂದೆ ಅಡ್ಮಿನಿಸ್ಟ್ರೇಷನ್ ಹೇಗೆ ಇತ್ತು ಎಂದರೆ ಯಾವ ಕೆಲಸವೂ ಕೂಡ ವಿಳಂಬವಾಗುತ್ತಿರಲಿಲ್ಲ. ಕೆಳಗಿನವರೂ ಹಾಗೇ ಇರುತ್ತಿದ್ದರು, ಮೇಲಿನವರು ಹಾಗೇ ಇರುತ್ತಿದ್ದರು. ಅವರೂ ಕೂಡ ತಮ್ಮ ಕೈಕೆಳಗಿನವರನ್ನು ಹಾಗೆಯೇ ನಡೆಸಿಕೊಳ್ಳುತ್ತಿದ್ದರು. ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಾಗಲೀ, ಇಂಜಿನೀಯರ್‌ಗಳಾಗಲೀ, ಡಾಕ್ಟರ್‌ಗಳಾಗಲೀ, ಜಡ್ಜ್‌ಗಳಾಗಲೀ ಇಲ್ಲವೇ ಬೇರೆ ಟಾಪ್ ಅಧಿಕಾರಿಗಳಾಗಲೀ ಇಲ್ಲವೇ ಬೇರೆ ವರ್ಗದ ಜನಗಳಾಗಲೀ, ಅವರಿಗೆ ತಮ್ಮ ತಮ್ಮ ಕೆಲಸದಲ್ಲಿ ಆಸಕ್ತಿ ಮತ್ತು ನ್ಯಾಯ ಇರುತ್ತಿತ್ತು. ತಾವು ಮಾಡಿದ ಕೆಲಸವನ್ನು ಬೇರೆ ಯಾರೂ ಬೊಟ್ಟು ಮಾಡಿ ತೋರಿಸಬಾರದೆನ್ನುವ ಒಂದು ಛಲ ಅವರಲ್ಲಿತ್ತು, ತಿಂದ ಸಂಬಳಕ್ಕೆ ದ್ರೋಹ ಮಾಡಬಾರದೆಂಬ ನಿಷ್ಠೆ ಅವರಲ್ಲಿ ಇರುತ್ತಿತ್ತು. ತಾವು ಮಾಡಿದ ಕೆಲಸಕ್ಕೆ ರೆಕಾಗ್ನಿಷನ್ ಇತ್ತೆಂದು ಅವರಿಗೆ ಗೊತ್ತಿತ್ತು. ಅವರ ಸಬಾರ್ಡಿನೇಟ್ ಆಫೀಸರ್‌ಗಳನ್ನೂ ಹಾಗೆಯೇ ತಯಾರು ಮಾಡುತ್ತಿದ್ದರು. ಈಗ ಏನಾಗುತ್ತಿದೆಯೆಂದರೆ, ಇನ್‌ಫ್ಲೂಯೆನ್ಸ್, ಕರ್‌ಪ್ಷನ್, ಜಾತೀಯತೆ, ಹಾಗೂ ಗೊಂದಲಗಳು ಇವೆ. ಆಗ ಇವೆಲ್ಲಾ ಇರುತ್ತಿರಲಿಲ್ಲ. ಅಲ್ಲದೆ ಎಲ್ಲಕ್ಕಿಂತ ಹೆಚ್ಚಾಗಿ ಇಂಟರ್‌ಫಿಯರೆನ್ಸ್ ಇರುತ್ತಿರಲಿಲ್ಲ. ಏನಾದರೂ ಒಂದು ಪಾಲಿಸಿಯನ್ನು ಮಾಡಿ ಆಫೀಸರ್‌ರವರಿಗೆ ಒದಗಿಸಿದರೆ ಅದನ್ನು ನಿಯಮಿತ ಕಾಲದಲ್ಲಿ ಅದು ಆಗಬೇಕಾಗಿತ್ತು. ಅದರಂತೆ ಆಗ ಆಗುತ್ತಿತ್ತು. ಒಂದು ವೇಳೆ ಆಗದಿದ್ದರೆ ಅವರು ಶಿಕ್ಷೆಗೆ ಒಳಪಡುತ್ತಿದ್ದರು. ಆದರೆ ಈಗ ಏನಾಗುತ್ತಿದೆ, ಒಂದು ಪಾಲಿಸಿ ಆಗುತ್ತದೆ ಅದನ್ನು ಆಫೀಸರ್‌ರವರಿಗೆ ಒಪ್ಪಿಸಿದ ಮೇಲೆ ಅಷ್ಟಕ್ಕೇ ಬಿಡುತ್ತೀರಾ? ೧೦೮ ಸಲ ಅದರಲ್ಲಿ ಇಂಟರ್‌ಫಿಯರೆನ್ಸ್ ಆಗುತ್ತದೆ. ೨೫ ಜನ ಅದಕ್ಕೆ ಯಜಮಾನರು, ಇದರ ಜೊತೆಗೆ ಚಾಡಿ ಹೇಳುವ ಅಧಿಕಾರಿಗಳು. ಆಫೀಸರ್‌ಗಳು ಯಾರ ಮಾತನ್ನು ಕೇಳಬೇಕು ಯಾರ ಮಾತನ್ನು ಬಿಡಬೇಕು ಎಂಬ ಪರಿಸ್ಥಿತಿ ಬಂದಿದೆ. ಹೀಗಾಗಿ ಎಫಿಷಿಯೆನ್ಸಿ ಎನ್ನುವುದೆಲ್ಲಾ ಮಣ್ಣುಗೂಡಿ ಹೋಯಿತು. ಶಿಕ್ಷೆಯೂ ಅಷ್ಟೇ ಒಬ್ಬರಿಗೆ ಕೊಡುತ್ತೀರಿ, ಮತ್ತೊಬ್ಬರಿಗೆ ಕೊಡುವುದಿಲ್ಲ. ಇನ್ನು ಕೆಲವರು ಕೂತುಕೊಂಡರೂ ತಪ್ಪು, ನಿಂತುಕೊಂಡರೂ ತಪ್ಪು. ಹೀಗಾಗಿ ಅಧಿಕಾರಿಗಳಲ್ಲಿ ಮೊರೇಲ್ ಎಲ್ಲಿ ಉಳಿದಿದೆ, ಅದು ಉಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರನ್ನು ಕೆಲಸ ಮಾಡಿ ಎಂದರೆ ಏನು ಮಾಡುತ್ತಾರೆ? ಯಾವ ಕೆಲಸವನ್ನೂ ಮಾಡುವುದಿಲ್ಲ. ಅದರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಫಿಕ್ಸ್ ಮಾಡಿಕೊಂಡು ಹೋದರೆ ಸಾಕಾಗಿದೆ. ಉದಾಹರಣೆಗೆ ಹೇಳಬೇಕೆಂದರೆ ಪ್ರೈಮರಿ ಟೀಚರ್ಸ್‌ನ ಅನ್ನೇ ತೆಗೆದುಕೊಳ್ಳೋಣ. ಅವರು ನಮ್ಮ ಪುಟ್ಟ ಪುಟ್ಟ ಮಕ್ಕಳನ್ನು ವಿದ್ಯಾವಂತರನ್ನಾಗಿ ತಯಾರು ಮಾಡಬೇಕು. ಅವರಿಗೆ ಅ ಕಾರ ಬರುವುದಿಲ್ಲ 'ಹ ಕಾರ ಬರುವುದಿಲ್ಲ.' ಇಂತಹವರು ನಮ್ಮ ಮಕ್ಕಳಿಗೆ ಟೀಚ್ ಮಾಡಬೇಕು. ನಮ್ಮ ಮಕ್ಕಳನ್ನು ತಯಾರು ಮಾಡಬೇಕು. ಟೀಚರ್ಸ್‌ಗಳನ್ನು ಸೆಲೆಕ್ಟ್ ಮಾಡುವಾಗ ಬರೀ ರಾಜಕೀಯವಿರುತ್ತದೆ, ನಮ್ಮ ಜಾತಿಯವರಿಗೆ ಇಷ್ಟು, ನಿಮ್ಮ ಜಾತಿಯವರಿಗೆ ಇಷ್ಟು ಎಂದು. ಈ ತರಹವಾದರೆ ಟೀಚರ್ಸ್‌ಗಳು ಏನು ಹೇಳಿಕೊಡುತ್ತಾರೆ? ಇನ್ನು

ಮಿಡಲ್ ಸ್ಕೂಲ್ ಟೀಚರ್ಸ್ ಅನ್ನೇ ತೆಗೆದುಕೊಳ್ಳಿ, ಅವರಿಗೆ ನಾಲ್ಕು ಸೆಂಟೆನ್ಸ್ ತಪ್ಪಿಲ್ಲದೆ ಬರೆಯುವುದಕ್ಕೆ ಬರುವುದಿಲ್ಲ, ಕಡೆಗೆ ಲೀವ್ ಲೆಟರ್ ಬರೆಯುವುದಕ್ಕೆ ಕೂಡ ಬರುವುದಿಲ್ಲ. ಇಂತಹವರು ನಮ್ಮ ಮಕ್ಕಳಿಗೆ ಪಾಠ ಹೇಳಿಕೊಟ್ಟು ಅವರನ್ನು ಕಾಲೇಜಿಗೆ ಕಳಿಸಬೇಕು ಆ ಮಕ್ಕಳು ಇಂಜಿನಿಯರ್ಸ್ ಆಗಬೇಕು, ಡಾಕ್ಟರ್ಸ್ ಆಗಬೇಕು, ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳಾಗಬೇಕು. ಎಲ್ಲಾ ಕಡೆಗಳಲ್ಲಿ ರೋಸ್ಟರ್ ಸಿಸ್ಟಮ್‌ನಲ್ಲಿ ವಶೀಲಿಯಾಗಿದೆ. ನಾನೇನೂ ಪರಿಶಿಷ್ಟ ಜಾತಿಯವರನ್ನು, ವರ್ಗದವರನ್ನು, ಹಿಂದುಳಿದ ವರ್ಗದವರನ್ನು ಮುಂದಕ್ಕೆ ತರಬೇಡಿ ಎಂದು ಹೇಳುವುದಿಲ್ಲ ಅವರಲ್ಲೂ ಕೂಡ ಬುದ್ಧಿವಂತರು ಇಲ್ಲವೇ? ಬುದ್ಧಿವಂತರಾದವರನ್ನು ಸೆಲೆಕ್ಟ್ ಮಾಡಿದರೆ ಎಲ್ಲಾ ಸರಿ ಹೋಗುತ್ತದೆ. ಬುದ್ಧಿವಂತಿಕೆಯೇನು ಬ್ರಾಹ್ಮಣರ ಗಂಟೇ, ಒಕ್ಕಗರ ಗಂಟೇ, ಲಿಂಗಾಯಿತರ ಗಂಟೇ, ಅದೇನು ಅವರ ಮನಾಪಲಿಯೇ? ಈ ದೇಶದಲ್ಲಿ ಜಾತಿ ಗೊಂದಲ ಹೋಗುವವರೆಗೂ ಇದು ಸರಿ ಹೋಗುವುದಿಲ್ಲ. ನಮ್ಮಲ್ಲಿ ಇರುವ ಜಾತಿ ಗೊಂದಲ ಪ್ರಪಂಚದಲ್ಲಿ ಬೇರೆ ಯಾವ ಕಡೆಗಳಲ್ಲೂ ಇಲ್ಲ. ಬೇರೆ ಕಡೆಯಿಂದ ತಜ್ಞರು ಬರುತ್ತಾರೆ. ಅವರೆಲ್ಲರೂ ಟೆಕ್ನಿಕಲ್ ಫೀಲ್ಡ್, ಸೈನ್‌ಟಿಫಿಕ್ ಫೀಲ್ಡ್‌ನಲ್ಲಿ ನಮಗೆ ಗೈಡೆನ್ಸ್ ಕೊಡುವುದಕ್ಕೆ ಬರುತ್ತಾರೆ. ಅವರೆಲ್ಲರೂ ಬ್ರಾಹ್ಮಣರೇ. ಲಿಂಗಾಯಿತರೇ ಇಲ್ಲವೇ ಮುಂದುವರಿದ ಜಾತಿಯವರೇ? ಎಲ್ಲಿಯವರೆಗೆ ಈ ವಿದ್ಯಾವಂತ ಜನರನ್ನು ತುಳಿದು ಸೋಮಾರಿ ಜನಗಳು, ದಡ್ಡ ಜನಗಳು ಅಧಿಕಾರಿಗಳಾಗಿ ಕೆಲಸ ಮಾಡುವುದಕ್ಕೆ ಬಯಸುವುದನ್ನು ಬಿಡುತ್ತಾರೋ ಅಲ್ಲಿಯವರೆಗೆ ಇದು ಹೀಗೇ ನಡೆಯುವುದು, ನಾವು ಈ ಪನಿಷ್‌ಮೆಂಟನ್ನು ಅನುಭವಿಸಬೇಕು, ಈ ಶಾಪ ನಮ್ಮಿಂದ ದೂರ ಹೋಗುವುದಿಲ್ಲ. ಅವರು ಬಲಾಢ್ಯರಾಗುತ್ತಾರೆ. ದುಡ್ಡು ಇರುವವರಿಗೆ ಎಲ್ಲಾ ನಡೆಯುತ್ತದೆ. ಸ್ವಲ್ಪ ಹುಷಾರಿಲ್ಲದಿದ್ದರೆ ತಕ್ಷಣ ಖಾಸಗೀ ನರ್ಸಿಂಗ್ ಹೋಮಿಗೆ ಹೋಗುತ್ತಾರೆ. ಒಳ್ಳೆಯ ಟೀಚರ್ಸ್ ಇರುವ ಸ್ಕೂಲುಗಳಿಗೆ ಪ್ರೈವೇಟ್ ಸ್ಕೂಲುಗಳಿಗೆ ಅವರ ಮಕ್ಕಳನ್ನು ಕಳಿಸುತ್ತಾರೆ. ಯಾವ ಕಡೆ ದುಡ್ಡು ಕೊಟ್ಟರೆ ಸೀಟು ಸಿಗುತ್ತದೆಂದು ಗೊತ್ತಾದರೆ ಹೇಗೋ ದುಡ್ಡು ಮಾಡಿ ಕೊಟ್ಟು ಸೀಟು ಗಿಟ್ಟಿಸಿಕೊಳ್ಳುತ್ತಾರೆ. ನಮ್ಮೆಲ್ಲರ ತಪ್ಪೂ ಇದರಲ್ಲಿ ಇಲ್ಲವೇ? ಇದನ್ನು ಮಾಡುವವರು ಯಾರು? ನಮ್ಮ ರಾಜ್ಯದಲ್ಲಿ ಎಲ್ಲಾದಕ್ಕೂ ಬೆಲೆ ಇದೆ ಜೀವವೊಂದಕ್ಕೆ ಬೆಲೆ ಇಲ್ಲ. ಮನುಷ್ಯರ ಪ್ರಾಣಕ್ಕೆ ಬೆಲೆ ಇಲ್ಲ. ಕಲಬೆರಕೆ ಆಹಾರ, ವಿಷಪೂರಿತ ಆಹಾರ, ಕೆಟ್ಟ ಗಾಳಿ ಇವೆಲ್ಲಾ ಇರುವುದರಿಂದ ಕ್ಯಾನ್ಸರ್ ಭೇದಿ ಹೀಗೆ ನಾನಾ ತರಹದ ರೋಗಕ್ಕೆ ಅನುವು ಮಾಡಿಕೊಟ್ಟಿದೆಯೆಂದು ತಜ್ಞರು ಹೇಳುತ್ತಿದ್ದಾರೆ. ಆಹಾರ ಮಂತ್ರಿಗಳಾದ ಶ್ರೀ ಬಸವಣ್ಣೆಪ್ಪನವರು ಇದನ್ನೆಲ್ಲಾ ಕೇಳುತ್ತಿದ್ದಾರೆ. ಇವತ್ತು ಅರಿಶಿನದಿಂದ ಹಿಡಿದು, ಮೆಣಸಿನ ಪುಡಿಯವರೆಗೂ ಕಲಬೆರಕೆ ಆಹಾರವೇ. ನಾನು ಕಲ್ಕತ್ತಾಗೆ ಹೋದರೆ ಗಂಟಲು ನೋವು ಬರುತ್ತದೆ. ಈಗ ಅದೇ ಸ್ಥಿತಿ ಬೆಂಗಳೂರಿನಲ್ಲೂ ಬರುತ್ತಿದೆ. ನಮ್ಮ ಮನೆಯಿಂದ ಬರುತ್ತಾ ವೃಷಭಾವತಿ ನದಿ ಮತ್ತು ಬಸ್ಸು ಲಾರಿಗಳಿಂದ ಬರತಕ್ಕ ಹೊಗೆ ಹೀಗಾಗಿ ಅಲ್ಲ ಒಂದು ಚೂರು ಒಳ್ಳೆಯ ಗಾಳಿ ಇಲ್ಲ. ಇನ್ನು ಮಾಂಸದ ಅಂಗಡಿಗಳನ್ನು ನೋಡಬೇಕು. ಮಾಂಸ ತಿನ್ನುವವರಿಗೆ 'ತಿನ್ನಬೇಡಿ' ಎಂದು ಹೇಳುವುದಿಲ್ಲ. ಆ ಅಂಗಡಿಗಳನ್ನು ನೋಡಿದರೆ ಮಾಂಸ ತಿನ್ನುವವರಿಗೆ ಹೇಗೆ ಮನಸ್ಸು ಬರುತ್ತದೋ ಎಂದು ಅನಿಸುತ್ತದೆ. ಅಲ್ಲಿ ಎದುರಿಗೆ ಅದನ್ನು ತೂಗಿ ಹಾಕಿರುತ್ತಾರೆ. ಅದರ ಮೇಲೆ ನೊಣಗಳ ಹಿಂಡು ಕೂತಿರುತ್ತವೆ, ಲಾರಿ ಬಸ್ಸಿನ ಧೂಳು ಎಲ್ಲಾ ಕೂತಿರುತ್ತದೆ, ಅದನ್ನೇ ತೆಗೆದುಕೊಂಡು ಬಂದು ತಿನ್ನುತ್ತಾರೆ. ಅದನ್ನು ತಿನ್ನುವುದಕ್ಕೆ ಹೇಗೆ ಮನಸ್ಸು ಬರುತ್ತದೋ ನನಗೆ ಗೊತ್ತಿಲ್ಲ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ, ಮೋರಿ ಪೈಪುಗಳು ಒಡೆದು ಆ ನೀರು ಶುದ್ಧ ನೀರಿಗೆ ಸೇರಿಕೊಂಡರೆ ಅದೇ ನೀರನ್ನು ಜನರು ಕುಡಿದು ಕಾಮಾಲೆ ಇನ್ನು ಮುಂತಾದ ರೋಗಗಳಿಂದ ನರಳುತ್ತಾರೆ. ಇನ್ನು ಟ್ಯಾಂಕರ್‌ನಲ್ಲಿ ಸಪ್ಲೈ ಮಾಡುವಂತಹ ನೀರು ಎಷ್ಟು ಸ್ವಚ್ಛವಾಗಿದೆಯೋ ಗೊತ್ತಿಲ್ಲ. ನಮ್ಮ ಜೀವದ ಬೆಲೆ ಎಷ್ಟು ಎನ್ನುವುದು ನಮಗೇ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಸೈನ್ಸ್, ಟೆಕ್ನಾಲಜಿ ಡಿಪಾರ್ಟ್‌ಮೆಂಟಿನ ಮೇಲೆ ಬಹಳ ಆಸಕ್ತಿ ಹಾಗೂ ಅಸ್ಥೆಯನ್ನು ತೋರಿಸಿದ್ದಾರೆ. ಆದರೆ ನಮ್ಮ ಜೆ. ಹೆಚ್. ಪಟೇಲ್‌ರವರಿಗೆ ಹಾಗೂ ಇತರ ಮಂತ್ರಿಗಳಿಗೆ ಇದು ಆಗುವುದಿಲ್ಲ ಅವರು ಗಾಂಧಿವಾದಿಗಳು. ಚಮ್ಮಾರ ಚಮ್ಮಾರನಾಗಿಯೇ ಇರಬೇಕು, ಕಮ್ಮಾರ ಕಮ್ಮಾರನಾಗಿಯೇ ಇರಬೇಕು, ಕುಂಬಾರ ಕುಂಬಾರನಾಗಿಯೇ ಇರಬೇಕು ಎಂದು ಹೇಳುವವರು ಆದರೆ ಯುಗ ಬಂದಿದೆ. ಅವರಿಗೆ ಮೆಕಾನಿಸಮ್, ಕಂಪ್ಯೂಟರ್ಸ್, ಟೆಕ್ನಾಲಜಿ, ರೀಸರ್ಚ್ ಇವೆಲ್ಲವನ್ನು ಕಂಡರೆ ಆಗದು ಒಂದು ದಿವಸ ಏನೋ ಮಾತನಾಡುತ್ತಿದ್ದಾಗ ಈ ಮುಂದಿನ ಪೀಳಿಗೆಯನ್ನು, ಯಾರು ಪ್ರಪಂಚವನ್ನು ಆಳುತ್ತಾರೆ

ಎಂದರೆ ಯಾರು ಲೇಸರ್ ಹಾಗೂ ಎಲೆಕ್ಟ್ರಾನಿಕ್ ಅನ್ನು ಯಾರು ವಶಪಡಿಸಿಕೊಂಡಿರುತ್ತಾರೆ, ಅವರೇ ಮುಂದಕ್ಕೆ ಈ ಪ್ರಪಂಚವನ್ನು ಆಳುವವರು ಎಂದಿದ್ದಕ್ಕೆ, ಜಾಲಪ್ಪನವರು ಎದ್ದು ಬಿಟ್ಟರು. ನಾನೇನೋ ಹೊಟ್ಟೆ ತುಂಬಿದವಳಂತೆ, ನನಗೆ ಹಳ್ಳಿ ಗೊತ್ತಿಲ್ಲವಂತೆ, ನಾನು ಹಳ್ಳಿಗಳನ್ನು ಸುತ್ತಿಲ್ಲವಂತೆ, ಬೇಕಾದರೆ ಸ್ಪೇಸ್‌ಗೆ ಹೋಗಿ ಬರಬಹುದು ಎಂದು ನನಗೆ ಬುದ್ಧಿವಾದದ ಮಾತನ್ನು ಹೇಳಿದರು. ನಾನೇನೋ ಹೊಟ್ಟೆ ತುಂಬಿದವಳು. ದೇವರು ನನಗೆ ಕೊರತೆ ಮಾಡಿಲ್ಲ. ಆದರೆ ನನ್ನ ಹಳ್ಳಿಯಲ್ಲಿನ ಲೇಔಟನ್ನು, ಅಲ್ಲಿರುವ ಅನುಕೂಲವನ್ನು ಇವರು ಬಂದು ನೋಡಿ ಮಾತನಾಡಿದ್ದರೆ ಚೆನ್ನಾಗಿತ್ತು. ತಾವು ದಯವಿಟ್ಟು ಅವರಿಗೆ ಹೇಳಿ. ಮಾನ್ಯ ಜಾಲಪ್ಪನವರು ಹಳ್ಳಿಗಳನ್ನು ನೋಡಿದ್ದಾರೆ. ಆದರೆ ನಮ್ಮ ಮುಖ್ಯಮಂತ್ರಿಗಳು ಬಂದು ನೋಡಿಲ್ಲ. ಯಾವಾಗಲಾದರೂ ಒಂದು ಸಾರಿ ಅವರು ಬಂದು ನಮ್ಮ ಹಳ್ಳಿಯನ್ನು ನೋಡಬೇಕು. ಇಂತಹ ಮಂತ್ರಿಗಳು ಇಷ್ಟು ಹಣ ಖರ್ಚಾಗಿರುವುದನ್ನು ನೋಡಿ ಹೇಗೆ ಸುಮ್ಮನಿದ್ದರೋ ನನಗೆ ಗೊತ್ತಿಲ್ಲ. ಶ್ರೀ ಜೆ. ಹೆಚ್. ಪಾಟೀಲ್ ಅಂತಹ ಮಂತ್ರಿಗಳು ಸುಮ್ಮನೆ ಇದ್ದಾರಲ್ಲಾ? ಇದನ್ನೆಲ್ಲಾ ಗಾಣಿಗರಿಗೆ, ಚಮ್ಮಾರರಿಗೆ, ಕುಂಬಾರರಿಗೆ ಕೊಡಿಸಿ ಬಿಟ್ಟಿದ್ದರೆ ಚೆನ್ನಾಗಿತ್ತು. ಮುಖ್ಯಮಂತ್ರಿಗಳು ಅವರ ಮಾತನ್ನು ಒಪ್ಪಲಿಲ್ಲವೆಂದು ಕಾಣುತ್ತದೆ. ಮಾನ್ಯ ಮಂತ್ರಿಗಳು ನಾನಾ ತರಹದ ಟೀಕೆಗಳನ್ನು ಇನ್ನೂ ಜಮಾಯಿಸುತ್ತಾ ಇದ್ದಾರೆ. ಮುಂದಿನ ಪ್ರಜೆಗಳ ಅಭಿವೃದ್ಧಿಗಾಗಿ ನಮ್ಮ ಹೊಟ್ಟೆಯನ್ನು ಸುಡುತ್ತಿದ್ದಾರೆ. ವಾಹನಗಳ ತೆರಿಗೆ ವಾಣಿಜ್ಯ ತೆರಿಗೆ, ಮನರಂಜನಾ ತೆರಿಗೆ ಅಬಕಾರಿ ತೆರಿಗೆ ಹೀಗೆ ನಾನಾ ತೆರಿಗೆಗಳಿಂದ ಬರುವ ಸಂಪನ್ಮೂಲಗಳನ್ನು ಜಾಸ್ತಿ ಮಾಡಿ ಮುಂದಿನ ಜನಾಂಗ ಸುಖವಾಗಿ ಇರಬೇಕೆಂದು ಹೇಳಿ ಪ್ರಾಜೆಕ್ಟ್, ಸ್ಕೂಲ್, ಹಾಸ್ಟೆಲ್, ಇಂಡಸ್ಟ್ರೀಸ್ ಹೀಗೆ ಎಲ್ಲವನ್ನು ಬೆಳೆಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದರಲ್ಲಿ ಅಬಕಾರಿ ತೆರಿಗೆ ಬಹಳ ಮುಖ್ಯವಾದುದು. ನಮ್ಮ ಜಿಗಜಣಗಿ ಸಾಹೇಬರು ಇದರಿಂದ ಬಹಳ ದುಡ್ಡು ಬರುತ್ತದೆಂದು ಹೇಳುತ್ತಿದ್ದಾರೆ. ಅಧ್ಯಕ್ಷರೇ, ತಾವು ಮಾನ್ಯ ಮುಖ್ಯಮಂತ್ರಿಗಳು ನನ್ನ ಜೊತೆಯಲ್ಲಿ ಬನ್ನಿ, ಇಲ್ಲಿಂದ ನಮ್ಮ ಮನೆಗೆ ೧೨ ಕಿಲೋಮೀಟರ್ ಆಗುತ್ತದೆ. ಮೈಸೂರು ರೋಡಿನಲ್ಲಿ ಬರೋಣ. ನಮ್ಮ ಮನೆಯಿಂದ ಹೊರಟರೆ ಮೈಸೂರು ರೋಡಿನಲ್ಲಿ ಸುಮಾರು ೧೫-೨೦ ಬಾರ್‌ಗಳು ಸಿಗುತ್ತವೆ. ಒಂದರ ಪಕ್ಕದಲ್ಲಿ ಒಂದು ಬರುತ್ತದೆ. ಈಗ ಹಳ್ಳಿಹಳ್ಳಿಯಲ್ಲೂ ಬಾರ್ ಇದೆ. ಈ ಬಾರ್‌ಗಳ ತುಂಬಾ ಜನರು ಇರುತ್ತಾರೆ. ಜನ ಎಂದರೆ ದೊಡ್ಡವರು, ವಯಸ್ಸಾದವರು ಅಲ್ಲ. ಸಣ್ಣ ಸಣ್ಣ ಹುಡುಗರೂ ಇರುತ್ತಾರೆ. ನನಗೇನೂ ಮಕ್ಕಳಿಲ್ಲ. ಆದರೆ ಇರುವ ಮಕ್ಕಳೆಲ್ಲಾ ನನ್ನದೆ. ನೀವೆಲ್ಲಾ ಮಕ್ಕಳನ್ನು ಹೊಂದಿರುವವರು. ಈ ಮಕ್ಕಳು ದೇಶದ ಮುಂದಿನ ವಾರಸುದಾರರು. ಮಕ್ಕಳು ಹೀಗೆ ಬಾರ್‌ನಲ್ಲಿ ತುಂಬಿಕೊಂಡು ಕುಡಿದು ಅಲ್ಲಿಯೇ ಕುಪ್ಪಳಿಸಿ, ಓಲಾಡಿಕೊಂಡು ಬರುವುದನ್ನು ನೋಡಿದರೆ ನಿಮ್ಮ ಮನಸ್ಸಿಗೆ ಏನೂ ಅನಿಸುವುದಿಲ್ಲವೇ? ಯಾರಿಗೋಸ್ಕರ ಈ ಅಭಿವೃದ್ಧಿಯ ಕೆಲಸ? ಈ ಮಕ್ಕಳ ಬುದ್ಧಿಶಕ್ತಿ ಎಷ್ಟಾಗಿರುತ್ತದೆ? ಇವರ ಆರೋಗ್ಯ ಭಾಗ್ಯ ಎಷ್ಟರ ಮಟ್ಟಿಗೆ ಚೆನ್ನಾಗಿರುತ್ತದೆ? ಬದುಕಿನಲ್ಲಿ ಏನು ಆಸಕ್ತಿ ಇರುತ್ತದೆ? ಇಂತಹ ಮಕ್ಕಳಿಗೋಸ್ಕರ ನಾವು ಅರೇ ಬಟ್ಟೆ ಹುಟ್ಟುಕೊಂಡು, ಅರೇ ಹೊಟ್ಟೆಯನ್ನು ತುಂಬಿಕೊಂಡು ಈ ಅಭಿವೃದ್ಧಿಯ ಕೆಲಸಗಳಿಗೆ ದುಡ್ಡು ಕೊಡಬೇಕೇ? ಈ ಮಕ್ಕಳಿಗೋಸ್ಕರ ಮುಂದಿನ ಪ್ರಜೆಗಳಿಗೋಸ್ಕರ ನಾವು ಇಷ್ಟೆಲ್ಲಾ ಸುಂಕವನ್ನು ಕೊಡಬೇಕೇ? ಯಾರ ಉದ್ಧಾರಕ್ಕೋಸ್ಕರ ಈ ಇಂಡಸ್ಟ್ರಿ? ಮುಂದಿನ ಪ್ರಜೆಗಳ ಲೆಕ್ಕಾಚಾರ ಇಲ್ಲದೆ ಇರುವಾಗ ಯಾರಿಗೋಸ್ಕರ ಅರೇ ಹೊಟ್ಟೆ, ಈ ಅರೇ ಬೆತ್ತಲೆ? ಹೊಟ್ಟೆ ಬಟ್ಟೆ ಕಟ್ಟಿ ನಿಮಗೆ ಸುಂಕ ಕೊಡಬೇಕೇ?

ಇನ್ನು ಕೊನೆಯದಾಗಿ ಆಫೀಸಿಗೆ ಹೋಗುವ ಹೆಣ್ಣು ಮಕ್ಕಳು ನನ್ನ ಹತ್ತಿರ ಬಂದು ಅವರ ಕಷ್ಟವನ್ನು ತೋಡಿಕೊಂಡರು. ಆಫೀಸರುಗಳಿಗೆ ಸಂಬಳ ಸಾಲಿಗೆ ವ್ಯವಸ್ಥೆ ಎಲ್ಲಾ ಸರಿಯಾಗಿರುತ್ತದೆ. ಆಫೀಸ್ ಕೆಲಸಕ್ಕೆ ಹೋಗುವವರಿಗೆ ಯಾವ ಕಷ್ಟ ಇರುವುದಿಲ್ಲ. ಅವರಲ್ಲೂ ಈ ಕಷ್ಟ ಕಾಲದಲ್ಲಿ ಊಟ, ಬಟ್ಟೆ, ಮಕ್ಕಳ ಓದು ಇವುಗಳಿಗೆ ಅವರ ಸಂಬಳ ಅಲ್ಲಿಗಲ್ಲಿಗೆ ಸರಿಹೋಗುತ್ತದೆ. ಅದರಲ್ಲೂ ದೊಡ್ಡ ದೊಡ್ಡ ಕಾಯಿಲೆಗಳಿಗೆ ಏನಾದರೂ ತುತ್ತಾದರೆ, ಅವರಿಗೆ ಮೊದಲು ರಜಾ ಇರುವಷ್ಟರ ಮಟ್ಟಿಗೆ ರಜಾ ಕೊಡುತ್ತಾರೆ. ಅದು ಮುಗಿದು ಹೋದ ಮೇಲೆ ಅವರಿಗೆ ಸಂಬಳ ಕೊಡುವುದಿಲ್ಲವಂತೆ. ಟಿ.ಬಿ. ಕ್ಯಾನ್ಸರ್, ಪ್ಯಾರಾಲೀಸಿಸ್ ಈ ರೋಗಗಳು ವಾಸಿಯಾಗುವುದಕ್ಕೆ ಒಂದು ವರ್ಷ ಅಥವಾ ಅದಕ್ಕಿಂತಲೂ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಈ ಸಮಯದಲ್ಲಿ ಅವರ ಮನೆಯ ನಿರ್ವಹಣೆ ಹೇಗೆ? ಅವರ ಹೆಂಡತಿ ಮಕ್ಕಳ ಊಟ ಹೇಗೆ? ಇದರ ಬಗ್ಗೆ ಯೋಚನೆ ಮಾಡಬೇಡವೇ? ಸಸ್‌ಪೆನ್ಸ್‌ನಲ್ಲಿ ಇಟ್ಟವರಿಗೆ ಮುಕ್ಕಾಲು ಭಾಗ ಸಂಬಳ ಕೊಡುತ್ತಾರಂತೆ. ಆರು ತಿಂಗಳೊಳಗೆ ಪುನರ್‌ನೇಮಕ ಮಾಡ

ಲಿಲ್ಲವೆಂದರೆ ೮೦ ಪರ್ಸೆಂಟ್ ಸಂಬಳ ಕೊಡುತ್ತಾರೆ ಯಾರೇ ಆಗಲೀ ರೋಗ ಬರಲಿಯೆಂದು ದೇವರಿಗೆ ಅರ್ಜಿ ಹಾಕಿಕೊಳ್ಳುವುದಿಲ್ಲ. ಯಾರೂ ದೇವರನ್ನು ಕೇಳಿಕೊಳ್ಳುವುದಿಲ್ಲ. ನನ್ನ ಗಂಡನಿಗೆ ಕಾಯಿಲೆ ಬರಲಿ ಅಂತ ಯಾವ ಹೆಂಡತಿಯಾದರೂ ದೇವರನ್ನು ಬೇಡುವುದಿಲ್ಲ ಪೂರ್ವಾರ್ಜಿತ ಕರ್ಮದ ಫಲವಾಗಿ ಯಾರಿಗಾದರೂ ರೋಗ ಬಂದು ನರಳುತ್ತಾ ಇದ್ದರೆ ಅವರ ಮನೆಯವರನ್ನು ಉಪವಾಸ ಕೂರಿಸು ವುದು ಸರಿಯೇ ? ನಮ್ಮ ಲಕ್ಷ್ಮೀಸಾಗರ್ ಅವರು ಈ ಬಗ್ಗೆ ಮೊದಲೇ ಯೋಜನೆ ಮಾಡಿ ಅರ್ಧ ಮುಕ್ಕಾಲು ಸಂಬಳ ಎತ್ತಿ ಇಡಬೇಕಾಗಿತ್ತು ಎನ್ನುತ್ತಾರೆ ಅವರಿಗೆ ತಾಪತ್ರಯ ಗೊತ್ತಿಲ್ಲ. ಅವರಿಗೆ ಹೆಂಡತಿ ಮಕ್ಕಳ ಯೋಚನೆ ಇಲ್ಲ. ಸಂಸಾರ ಅಂದರೇನೆಂಬುದು ಗೊತ್ತಿಲ್ಲ.

ಮತ್ತೊಂದು ವಿಷಯವೇನೆಂದರೆ, ನನ್ನ ತಾಲ್ಲೂಕು ಮೂರು ರಾಜ್ಯಗಳಿಗೆ ಸೇರಿದೆ. ಒಂದು ಕಡೆ ಕರ್ನಾಟಕಕ್ಕೆ ಸೇರಿದೆ. ಮತ್ತೊಂದು ಕಡೆ ತಮಿಳುನಾಡಿಗೆ ಸೇರಿದೆ, ಇನ್ನೊಂದು ಕಡೆ ಕೇರಳಕ್ಕೆ ಸೇರಿದೆ. ಈ ಸ್ಥಳದಲ್ಲಿ ಸಾಕಷ್ಟು ಆಫೀಸರ್‌ಗಳು ಇದ್ದಾರೆ. ಅವರು ತಮ್ಮ ಮಕ್ಕಳಿಗೆ ಒಂದು ಇಂಗ್ಲೀಷ್ ಶಾಲೆ ಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಏಕೆಂದರೆ ಅವರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ವಾಗುತ್ತಾ ಇರುತ್ತದೆ. ೮೭-೮೮ರಲ್ಲಿ ಕ್ಯಾಬಿನೆಟ್ ತೀರ್ಮಾನವಾಗಿದೆಯಂತೆ. ಆ ಕ್ಯಾಬಿನೆಟ್ ತೀರ್ಮಾನ ಇವರಿಗೆ ಬೈಬಲ್. ಆ ಕ್ಯಾಬಿನೆಟ್ ತೀರ್ಮಾನ ಬಿಟ್ಟು ಇವರು ಏನು ಮಾಡುವುದಕ್ಕೂ ಆಗುವುದಿಲ್ಲವೆ? ಯಾರ ಮಕ್ಕಳೇ ಆಗಲಿ, ಅಧಿಕಾರಿ ಮಕ್ಕಳೆ ಆಗಲಿ, ಅವರ ಮಕ್ಕಳು ಮುಂದಕ್ಕೆ ಬರುವುದಕ್ಕೆ ಒಂದು ಓದು ಇಲ್ಲದೆ ಹೋದರೆ ಅವರೆಲ್ಲರೂ ನಮಗೆ ಬೇರೆ ಕಡೆ ವರ್ಗ ಮಾಡಿಸಿಕೊಡಿ ಎಂದು ಸಾಲಾಗಿ ಬರುತ್ತಾರೆ. ನಮ್ಮ ಮಕ್ಕಳಿಗೆ ಇಲ್ಲಿ ಓದಲು ಸ್ಕೂಲ್ ಇಲ್ಲ. ಇದರ ಬಗ್ಗೆ ಏನಾದರೂ ಮಾಡಿಕೊಡಿಯೆಂದು ಹೇಳುತ್ತಾರೆ. ನಾನು ಗೋವಿಂದಗೌಡರನ್ನು ಕೇಳಿದೆ. ಅವರು ಅಷ್ಟೇ ಸೌಮ್ಯದಿಂದ ಎ.ಇ.ಒ. ಹತ್ತಿರ ಏನಾದರೂ ಅರ್ಜಿ ಕೊಟ್ಟಿದ್ದರೆ ಅದನ್ನು ಶನ್ನಿ ಮಾಡಿಕೊಡುತ್ತೇನೆಂದು ಹೇಳಿದರು ಶ್ರೀ ಲಕ್ಷ್ಮೀಸಾಗರ್ ಅವರನ್ನು ಕೇಳಿದರೆ ಅವರು ಹೇಳುತ್ತಾರೆ. "ಅವರು ಮಕ್ಕಳಾಗುವುದಕ್ಕಿಂತ ಮುಂಚೆಯೇ ಯೋಚನೆ ಮಾಡಬೇಕಾಗಿತ್ತು" ಎಂದು. ಇಂಥವರಿಗೆ ಏನು ಹೇಳುವುದು. ನನ್ನ ಕ್ಷೇತ್ರದಲ್ಲಿ ಇವರಿಗೆ ಓದುವುದಕ್ಕೆ ಅವಕಾಶವಿಲ್ಲ. ಅವಕಾಶ ಇಲ್ಲದೆ ಇರುವುದರಿಂದ ಅವರು ವರ್ಗ ಮಾಡಿಸಿಕೊಳ್ಳುವುದಕ್ಕೆ ಬರುತ್ತಾರೆ. ಯಾವ ಶಬ್ದದಿಂದ ಮಂತ್ರಿಗಳನ್ನು ವರ್ಣನೆ ಮಾಡಲಿ? ಯಾವ ತರಹ ವರ್ಣನೆ ಮಾಡಿದರೆ ಇವರಿಗೆ ಜ್ಞಾನೋದಯವಾಗುತ್ತದೆ? ಲಕ್ಷ್ಮೀಸಾಗರ್‌ರವರಿಗೆ ಹೇಳಿದರೆ ಪ್ರಯೋಜನವಾಗುವುದಿಲ್ಲ. ಹಾಗೆ ಸಂಬಳ ಕೊಡುವ ವಿಚಾರದಲ್ಲೂ ಆ ಹೆಣ್ಣು ಮಕ್ಕಳಿಗೆ ಸಹಾಯವಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ಹೋದ ಸಾರಿ ನಾನು ಹೆಣ್ಣು ಮಕ್ಕಳ ಸ್ಥಾನ ಯಾವುದು? ಆ ಹೆಣ್ಣು ಮಕ್ಕಳು ಯಾರು? ಆ ಹೆಣ್ಣು ಮಕ್ಕಳ ಸ್ಥಿತಿಗತಿಗಳ ಬಗ್ಗೆ ಸ್ವಲ್ಪ ಹೇಳಿಯೆಂದು ನಾನು ಕೇಳಿಕೊಂಡೆ. ಈ ಹೆಣ್ಣು ಮಕ್ಕಳ ಕ್ಯಾಟಗರಿ ಎಲ್ಲಿಗೆ ಬಂದು ನಿಲ್ಲುತ್ತದೆ? ಆದರೆ ಅವರು ಉತ್ತರ ಹೇಳುವುದಕ್ಕೆ ಬಿಡಲಿಲ್ಲ. ಮಧ್ಯೆ ಯಾರ್ಯಾರು ಬಂದು ಬಿಟ್ಟು ಅದಕ್ಕೆ ಸರಿಯಾದ ಉತ್ತರ ಸಿಗಲಿಲ್ಲ. ನಾನು ತಮಗೆ ಕೇಳಬೇಕೆಂದಿದ್ದೇನೆ, ಮುಂದಿನ ವಾರಸುದಾರರಾದ ಪ್ರಜೆಗಳ ಬಗ್ಗೆ ಮಕ್ಕಳ ಬಗ್ಗೆ ಏನು ಮಾಡುತ್ತೀರಿ? ಇವರ ಹಿತಾಸಕ್ತಿಯನ್ನು ಇಟ್ಟುಕೊಂಡು ಮಾಡಿ. ಬರೀ ಹಣದ ಮುಖವನ್ನು ನೋಡದೆ ಕೆಲಸ ಮಾಡಿ. ಈ ಹಣ ಯಾರಿಗೋಸ್ಕರ ಎಂಬುದನ್ನು ಯೋಚನೆ ಮಾಡಿ. ನೀವು ಮಾಡತಕ್ಕ ಇತರ ಕೆಲಸಗಳನ್ನು ಕಡಿಮೆ ಮಾಡಿ. ಸದೃಢವಾದ, ಚೆನ್ನಾದ, ಬುದ್ಧಿವಂತರಾದಂತಹ ಆರೋಗ್ಯ ಮಕ್ಕಳನ್ನು ಇಲ್ಲಿ ಬೆಳೆಸು ವುದಕ್ಕೆ ನೀವು ಮನಸ್ಸು ಮಾಡಿ ತಾವು ಇಟ್ಟಿರತಕ್ಕ ಈ ಹಣಕ್ಕೆ ನಾವು ಮಂಜೂರಾತಿಕೊಡುವಾಗ ಅದನ್ನು ನ್ಯಾಯವಾಗಿ ಬಳಸಿ, ಅನ್ಯಾಯವಾಗಿ ಖರ್ಚು ಮಾಡಬಾರದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ, ತಮ್ಮ ಮೂಲಕ ಕೆಲವು ವಿಷಯಗಳನ್ನು ಸಭೆಯ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ, ವಿದ್ಯುತ್ ಬಗ್ಗೆ ಕೆಲವು ವಾಕ್ಯಗಳನ್ನು ಹೇಳಬಯಸುತ್ತೇನೆ. ಇದನ್ನು ನಾನು ಏಕೆ ಹೇಳುತ್ತಿದ್ದೇ ನೆಂದರೆ, ಈ ರಾಜ್ಯದಲ್ಲಿ ಈ ವಿದ್ಯುತ್ತಿನ ಕೊರತೆ ಎಷ್ಟು ದೊಡ್ಡ ಪ್ರಮಾಣದಲ್ಲಿದೆ ಹಾಗೂ ಈ ಭೀಕರವಾದ ವಿದ್ಯುತ್ ಕೊರತೆಯಿಂದಾಗಿ, ಮುಂದೆ ರಾಜ್ಯದ ಭವಿಷ್ಯ ಏನು ಎಂಬುದರ ಬಗ್ಗೆ ವಿವೇಚಿಸಿದರೆ, ನಮ್ಮ ಕಣ್ಣ ಮುಂದೆ ಕಾಣುವುದು ಕತ್ತಲೆ ಮತ್ತು ಭಯ. ಅಷ್ಟು ದೊಡ್ಡ ಕೊರತೆ ಮುಂದೆ ಬರಬಹುದು. ಈ ರೀತಿಯಾದ ಕೊರತೆಯನ್ನು ಎದುರಿಸುವುದಕ್ಕೆ ನಾವು ಏನು ಮಾಡಬೇಕು ಎಂಬುದನ್ನು ಈ

ವರ್ಷಗಳ ಕಾಲ ಆಡಳಿತವನ್ನು ನಡೆಸಿಕೊಂಡು ಬಂದಿರತಕ್ಕ ಸರ್ಕಾರ ಏನೂ ಯೋಚಿಸಿಲ್ಲ. ಕೈಗಾ ಅಣು ವಿದ್ಯುತ್ ಯೋಜನೆ ನಮ್ಮ ರಾಜ್ಯಕ್ಕೆ ಬಂದೀತೆಂಬುದನ್ನು ಬಿಟ್ಟರೆ, ನಮ್ಮ ರಾಜ್ಯದಲ್ಲಿ ನಮ್ಮದೇ ಆದ ಹೊಸ ವಿದ್ಯುತ್ ಯೋಜನೆಗಳನ್ನು ಪ್ರಾರಂಭಿಸುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡಲಿಲ್ಲ, ಆ ಬಗ್ಗೆ ಯೋಚನೆಯನ್ನೂ ಮಾಡಿಲ್ಲ. ಈ ಹಿಂದಿನ ಸರ್ಕಾರ ಬೇಡ್ತಿ ಯೋಜನೆಯನ್ನು ಕಾರ್ಯಗತ ಮಾಡಬೇಕೆಂಬ ಉದ್ದೇಶದಿಂದ ಸುಮಾರು ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತು. ಆದರೆ ಕೆಲವು ಬೇರೆ ಬೇರೆ ಕಾರಣಗಳ ಮೂಲಕ ಬೇಡ್ತಿ ಯೋಜನೆ ಸ್ಥಗಿತಗೊಂಡಿತು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಕೆಳಮನೆಯಲ್ಲಿ ಒಂದು ಹೇಳಿಕೆ ಕೊಟ್ಟರು. ಬೇಡ್ತಿ ಯೋಜನೆ ಕಾರ್ಯಗತವಾಗಲಿಲ್ಲ ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲವೋ, ಅಥವಾ ತಜ್ಞರ ಒಪ್ಪಿಗೆ ಇಲ್ಲವೋ ಎಂಬ ಬಗ್ಗೆ ಸರಿಯಾದ ಮಾಹಿತಿಯನ್ನು ಅವರು ಒದಗಿಸಲಿಲ್ಲ. ಬೇಡ್ತಿ ಅಥವಾ ಅಘನಾಶಿನಿ ಹೊಳೆ ಸಹ್ಯಾದ್ರಿ ಬೆಟ್ಟದಲ್ಲಿ ಹುಟ್ಟಿ ಸಮುದ್ರ ಸೇರುತ್ತದೆ. ಆದರ ಕತೆ ಅಲ್ಲಿಗೆ ಮುಗಿಯಿತು. ಆದರೆ ಈ ಬೇಡ್ತಿಯ ಪರಿಸರದಲ್ಲಿ ಬೇಡ್ತಿ ಯೋಜನೆ ಬೇಡ ಎನ್ನುವ ಜನರು ಕ್ಷೇತ್ರದಿಂದ ಹುಟ್ಟಿದ ಜನರು ಬೆಂಗಳೂರು ಅಥವಾ ದೆಹಲಿ ಅಥವಾ ಅಮೆರಿಕಾದಲ್ಲಿಯೂ ಇದ್ದಾರೆ. ಅವರಿಗೆ ಬಾಯಿ ಇದೆ. ಅವರು ವಿದ್ಯಾವಂತರಾಗಿದ್ದಾರೆ. ಅವರು ಈ ಬೇಡ್ತಿ ನದಿಯಿಂದ ಪ್ರಾರಂಭ ಮಾಡಿ ಇಡೀ ದೇಶಕ್ಕೆ ಈ ಬೇಡ್ತಿ ಯೋಜನೆ ಬೇಡ, ಪರಿಸರದ ಇಂಬ್ಯಾಲೆನ್ಸ್ ಆಗುತ್ತದೆ ಎಂಬ ಪ್ರಚಾರ ಕೊಟ್ಟು ಕೊಟ್ಟೂ, ಇನ್ನೂ ಏನೇನೋ ಕಾರಣಗಳನ್ನು ಕೊಟ್ಟು ಈ ಯೋಜನೆ ಆಗದಿರುವ ಹಾಗೆ ಮಾಡಿದ್ದಾರೆ. ಈಗ ಕೈಗಾ ಅಣು ವಿದ್ಯುತ್ ಯೋಜನೆ ಜಾರಿಯಲ್ಲಿ ಬಂದಿದೆ ಆದ್ದರಿಂದ ಒಂದು ಯೂನಿಟ್ ಎಲೆಕ್ಟ್ರಿಸಿಟಿ ಉತ್ಪತ್ತಿ ಮಾಡಿದಾಗ ಅದಕ್ಕೆ ಎಷ್ಟು ಖರ್ಚು ಆಗುತ್ತದೆ ಮತ್ತು ಈ ಬೇಡ್ತಿ ಯೋಜನೆಯಿಂದ ಉಂಟಾಗುವ ವಿದ್ಯುತ್‌ನ ಒಂದು ಯೂನಿಟಿಗೆ ಎಷ್ಟು ಖರ್ಚಾಗುತ್ತದೆ ಎಂದು ಯೋಚಿಸಿದರೆ, ಬೇಡ್ತಿ ಯೋಜನೆ ಆಗಲೇಬೇಕು. ನೀರಿನಿಂದ ಹುಟ್ಟಿದಂತಹ ವಿದ್ಯುತ್ತಿಗೆ ಕಡಿಮೆ ಖರ್ಚಾಗುತ್ತದೆ ಎಂಬ ವಿಚಾರವಿದೆ. ಹಾಗೆ ಬೇಡ್ತಿ ಯೋಜನೆಯನ್ನು ಪರಿಸರ ತಜ್ಞರ ಕೈಗೆ ಹಾಕಿ ಸರ್ಕಾರ ಸುಮ್ಮನೇ ಕುಳಿತುಕೊಳ್ಳಬಾರದು. ಮರುಪರಿಶೀಲನೆ ಮಾಡಬೇಕು ತಜ್ಞರ ಸಮಿತಿ ಒಂದನ್ನು ನೇಮಕ ಮಾಡಿ ಬೇಡ್ತಿ ಯೋಜನೆಯನ್ನು ಪೂರೈಸಬೇಕೆಂದು ಕೋರುತ್ತೇನೆ. ಬೇಡ್ತಿ ಯೋಜನೆಯನ್ನು ಕೆಲವಾರು ಕಾರಣಗಳಿಂದ, ಕೆಲವರು ಸ್ಥಗಿತಗೊಳಿಸಿರಬಹುದು. ಆದರೆ, ಉತ್ತರ ಕನ್ನಡದಲ್ಲಿ ಈ ಬಗ್ಗೆ ಚಳುವಳಿಯನ್ನು ಏಕೆ ಹೂಡಬಾರದು ಎಂದು ನಾವು ವಿಚಾರ ಮಾಡಿದ್ದೇವೆ, ಬಹುಶಃ ರಾಜ್ಯದ ಅಥವಾ ದೇಶದ ಯೋಜನೆಗಾಗಿ ಒಂದು ಸಣ್ಣ ಅರಣ್ಯ ಮುಳುಗಿಹೋದರೆ ಅದು ದೊಡ್ಡ ವಿಷಯವಲ್ಲ. ವಿದ್ಯುತ್ ಉತ್ಪಾದನೆಗಾಗಿ ಸ್ವಲ್ಪ ಜಮೀನು ಮುಳುಗಿಹೋದರೆ ಅದು ದೊಡ್ಡ ವಿಚಾರವಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿದುಕೊಂಡು, ಇನ್ನೊಮ್ಮೆ ಈ ಬಗ್ಗೆ ವಿಚಾರ ಮಾಡುತ್ತಾರೆಂದು ನಾನು ಬಯಸುತ್ತೇನೆ. ಅಲ್ಲದೆ, ವಿದ್ಯುತ್ ಹುಟ್ಟಿಸುವುದಕ್ಕೆ ಇನ್ನೂ ಎಲ್ಲೆಲ್ಲಿ ಯಾವ ಯಾವ ಸಾಧ್ಯತೆಗಳಿವೆ ಎಂಬುದನ್ನು ಯೋಚಿಸಬೇಕು. ಗೇರುಸೊಪ್ಪೆ ಮೇಲೆ ಒಂದು ಡ್ಯಾಮ್ ಹಾಕಿದರೆ, ಹೆಚ್ಚು ವಿದ್ಯುತ್ ಉತ್ಪಾದಿಸಬಹುದು. ಬೇರೆ ಬೇರೆ ಜಿಲ್ಲೆಗಳಲ್ಲಿ ಜಲ ವಿದ್ಯುತ್‌ನ್ನು ಹುಟ್ಟಿಸುವುದಕ್ಕೆ ಯಾವ ಯಾವ ಸಾಧ್ಯತೆಗಳಿವೆ ಎಂಬುದರ ಬಗ್ಗೆ ಸರ್ವೆ ನಡೆಸಬೇಕೆಂಬುದರ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ದೇಶಮುಖ್‌ರವರು ಯೋಚಿಸುತ್ತಾರೆಂದು ನಾನು ಬಯಸುತ್ತೇನೆ, ಈ ವಿದ್ಯುತ್ ಸಂಪರ್ಕ ಕಲ್ಪಿಸುವುದಕ್ಕೆ ಒಂದು ಅಡತಡೆ ಇದೆ. ಹಳ್ಳಿಗಳಿಗೆ 20 ಪರ್ಸೆಂಟ್ ವಿದ್ಯುತ್ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೂ ಸಹ, ರಾಜ್ಯದ ಎಷ್ಟೋ ಬಡ ಜನಗಳಿಗೆ ವಿದ್ಯುತ್ ಸಿಕ್ಕಿಲ್ಲ, ಈ ಬಗ್ಗೆ ಸರ್ವೆ ಮಾಡಿ, ಬೇರೆ ಬೇರೆ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈಗ ವಿದ್ಯುತ್ ಖಾತೆಯು ಹಾಗೂ ಅರಣ್ಯ ಖಾತೆಯ ಮಧ್ಯೆ ಖಾಯಮ್ಮಾಗಿ ಒಂದು ಜಗಳ ಇದೆ. ಅವರು ವಿದ್ಯುತ್ ಲೈನ್ ಹಾಕಲು ಹೋದರೆ, ಅರಣ್ಯ ಖಾತೆಯವರ ತಕರಾರು ಶುರುವಾಗುತ್ತದೆ. ಆಗ ಇವರು ನಿಲ್ಲಿಸಬೇಕಾಗುತ್ತದೆ. ಕೆಲಸ ತಪ್ಪಿಸಿಕೊಳ್ಳುವುದಕ್ಕೆ ಇದು ಒಂದು ಕುಂಟು ನೆಪದ ಹಾಗೆ ಆಗಿದೆ. ಲೈನ್ ಎಳೆಯಲು ಎಷ್ಟು ಜಾಗ ಬೇಕು ? ಅದಕ್ಕಾಗಿ ಇಡಿ ಅಡವಿಯೇ ಹೋಗುತ್ತದೆಯೇ ? ಈ ಬಗ್ಗೆ ಅರಣ್ಯ ಮಂತ್ರಿಗಳು ಮತ್ತು ವಿದ್ಯುತ್ ಮಂತ್ರಿಗಳು ವಿಚಾರ ವಿನಿಮಯ ಮಾಡಬೇಕು ಎಂದು ಕೋರುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಯವರ ಬೇಟಿಕೆಯ ಬಗ್ಗೆ ಬರುವುದಾದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ಮುಖ್ಯಮಂತ್ರಿ ಸ್ಥಾನವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಅವರು ತಮ್ಮ ಪಕ್ಷದ ಪ್ರಚಾರಾರ್ಥವಾಗಿ ಹೊನ್ನಾವರಕ್ಕೆ ಹೋದಾಗ, ಅಲ್ಲಿ ಒಂದು ಮಾತನ್ನು ಹೇಳಿದರು, ತಾವು ಅಧಿಕಾರಕ್ಕೆ ಬಂದರೆ ಎಂತಹ

ಸರ್ಕಾರವನ್ನು ಕೊಡುತ್ತೇವೆಂಬ ಬಗ್ಗೆ ಹೇಳಿದರು. ಬರುವ ಸರ್ಕಾರ ವೀಣೆ ನುಡಿಸಿದ ಹಾಗೆ ಇರಬೇಕು, ಅಂದರೆ ವೀಣೆಯ ತಂತಿಯ ಒಂದು ತಂದಿಯನ್ನು ಮೀಟಿದರೆ, ಅದರ ಇನ್ನೊಂದು ತಂದಿಗೆ ಆ ಕಂಪನ ಹೋಗಿ ಒಳ್ಳೆಯ ನಾದ ಬರಬೇಕು, ಆ ರೀತಿಯ ಸರ್ಕಾರ ಕೊಡುತ್ತೇವೆಂದು ಹೇಳಿದರು. ಅಂದರೆ, ರಾಜ್ಯದ ಒಂದು ಮೂಲೆಯಲ್ಲಿರುವ ಬಡವನಿಗೆ ನೋವಾದರೆ, ಕೆಲವೇ ಕ್ಷಣಗಳಲ್ಲಿ ವಿಧಾನಸೌಧ ದಲ್ಲಿರುವ ಮುಖ್ಯಮಂತ್ರಿಗಳಿಗೆ ಅದು ಗೊತ್ತಾಗಬೇಕು. ಇದೀ ಸರ್ಕಾರ ಬಡವನ ಉದ್ಧಾರಕ್ಕೆ ನೆರವಾಗುವಂತಹ ಸರ್ಕಾರವನ್ನು ಕೊಡುತ್ತೇವೆಂದು ಹೇಳಿದರು. ಆದರೆ ಇಂದು ಅಂತಹ ಸರ್ಕಾರ ವನ್ನು ನಿರ್ಮಾಣ ಮಾಡಿದ್ದಾರೆಯೇ ? ನೀವು ಬೆಂಗಳೂರಿನಲ್ಲಿ ಸುಖದ ಟ್ಯಾಂಕನ್ನು ಕಟ್ಟಿದರೆ, ರಾಜ್ಯದ ಪ್ರತಿಯೊಂದು ಹಳ್ಳಿಯವರೂ ಟ್ಯಾಪ್‌ನ್ನು ತಿರುಗಿಸಿದರೆ, ಅವರಿಗೆ ಸುಖದ ರವಾನೆಯಾಗ ಬೇಕು. ಅಧ್ಯಕ್ಷರೆ, ಯಾವ ರೀತಿಯಲ್ಲಿ ಈ ಸರ್ಕಾರ ನಡೆದುಕೊಂಡು ಬಂದಿದೆ ಎಂದರೆ, ಶಾಸಕರು ಮತ್ತು ಅಧಿಕಾರಿಗಳ ಸಂಬಂಧ, ಸಂಪರ್ಕ ಹೇಗೆ ಇದೆಯೆಂದು ಹೇಳುತ್ತೇನೆ. ಸುಮಾರಾಗಿ ೨ ವರ್ಷಗಳು ಆಗಿರಬಹುದು, ನಾನು ಒಂದು ಸಲ ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗಿದ್ದೆ.

೧೧–೩೦ ಎ.ಎಂ.

ಆಗ ಹತ್ತಾರು ಮಂದಿ ಶಾಸಕರು ಮುಂಜಾನೆ ಹೊತ್ತಿನಲ್ಲಿ ಅವರಿಗಾಗಿ ಕಾದಿದ್ದರು. ಜೊತೆಗೆ ಇನ್ಯಾರೋ ಬೇರೆ ಜನರು ಬಂದಿದ್ದರು. ಕಂಟ್ರಾಕ್ಟರುಗಳು ಬಂದಿದ್ದರು, ಬಡವರು ಬರಲಿಲ್ಲವೆಂದಲ್ಲ, ಅವರು ಕೂಡ ಬಂದಿದ್ದರು. ಮುಖ್ಯ ಮಂತ್ರಿಗಳು ತಮ್ಮ ಜೊತೆಯಲ್ಲಿ ಇದ್ದವರೊಡನೆ ಮಾತಾಡುತ್ತಾ ಮೇಲಿಂದ ಇಳಿದು ಬಂದರು. ಕೂಡಲೇ ಶಾಸಕರು ಹೋಗಿ ಅವರನ್ನು ಮುತ್ತಿಕೊಂಡರು. ನಂತರ ಕಂಟ್ರಾಕ್ಟುದಾರರು, ಬಾಕಿ ಜನರು, ಬಡವರು ಎಲ್ಲರೂ ಹೋಗಿ ಮುತ್ತಿಕೊಂಡರು, ಬಡವರ ಕೆಲಸ ಮಾಡಿಸಬೇಕೆಂದು ಹೋಗಿದ್ದ ನಮ್ಮ ಪಕ್ಷದ, ಬಹುಶಃ ಬೇರೆಬೇರೆ ಪಕ್ಷದವರು ಅಲ್ಲಿ ಇದ್ದರು, ಬಿ.ಜೆ ಪಿ. ಯವರು ಇದ್ದರು. ಅವರು ಮುಖ್ಯ ಮಂತ್ರಿಯವರನ್ನು ಕಾಣುವುದಕ್ಕೆ ಪರದಾಡಬೇಕಾಯಿತು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರ ಮನೆಯಲ್ಲಿ ಒಬ್ಬ ಶಾಸಕನ ಸ್ಥಾನ ಗುಂಪಿನಲ್ಲಿ ಗೋವಿಂದ ಇದ್ದ ಹಾಗೆ ಹೊರತು ಬೇರೆ ಏನು ಅಲ್ಲ. ಹೀಗಾದರೆ, ಬಡವರ ನೋವು ಏನಿದೆ, ಅವರ ಸಂಕಷ್ಟಗಳು ಏನಿವೆ, ಅವುಗಳನ್ನು ಹೇಳಿಕೊಳ್ಳಲು ಅವರು ಮಾನ್ಯ ಮುಖ್ಯ ಮಂತ್ರಿಗಳನ್ನು ಹೇಗೆ ನೋಡಬಹುದು ?

ಅಧ್ಯಕ್ಷರು.—ನಾಯಕರೇ, ಹನ್ನೊಂದೂವರೆ ಗಂಟೆ ಆಯಿತು. ಇನ್ನು ಐದು ನಿಮಿಷಗಳಲ್ಲಿ ನೀವು ಮುಗಿಸಿಬಿಡಬೇಕು.

ಶ್ರೀ ಆರ್. ಎನ್. ನಾಯಕ್.—ಆಗಲಿ ಅಧ್ಯಕ್ಷರೇ, ಬಡವರ ನೋವನ್ನು ನೀವು ಇನ್ನು ಯಾವಾಗ ಕೇಳುತ್ತೀರಿ ? ನಾನು ಮುಖ್ಯ ಮಂತ್ರಿಯವರ ಮನೆಗೆ ಹೋಗುವುದು ತೀರಾ ಕಡಿಮೆ. ನಮ್ಮ ಪಕ್ಷದ ಶಾಸಕರನ್ನು ಗುಂಪಿನಲ್ಲಿ ಗೋವಿಂದ ಮಾಡಿದರೆ, ಎಷ್ಟು ಸಲ ನಾವು ಸ್ವಾಭಿಮಾನ ಇಟ್ಟುಕೊಂಡು ಅಲ್ಲಿಗೆ ಹೋಗಲಿಕ್ಕೆ ಸಾಧ್ಯವಿದೆ ? ಹೀಗಾದರೆ ಜನರ ಮತ್ತು ಶಾಸಕರ ಸ್ಥಾನಮಾನ ಏನಾಯಿತು ? ಇನ್ನು ಅಧಿಕಾರಿಗಳು ಮತ್ತು ಶಾಸಕರ ಸಂಬಂಧ. ಪ್ರತಿಸಲ ನಾವು ಅಧಿಕಾರಿಗಳನ್ನು ನೋಡ ಬೇಕಾಗುತ್ತದೆ. ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ರೆವಿನ್ಯೂ ಕಮೀಶನರ್‌ವರೆಗೆ ನೋಡ ಬೇಕಾಗುತ್ತದೆ, ಅವರನ್ನು ನೋಡಕೂಡದು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಯಾವರೀತಿ ಅಧಿಕಾರಿಗಳು ನಮ್ಮನ್ನು ನೋಡಿಕೊಳ್ಳುತ್ತಾರೆ ಎನ್ನುವುದು ಸಹ ಬಹಳ ಪ್ರಾಮುಖ್ಯವಾದ ವಿಷಯ. ವಿಧಾನಸಭೆಯಲ್ಲಿ ಈ ಬಗ್ಗೆ ಪ್ರಶ್ನೆ ಹಾಕಿದಾಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಅವರು ಉತ್ತರಿಸಿದ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಳ್ಳುವುದಿಲ್ಲ. ನಿನ್ನೆ ಯಾವುದೋ ಪೇಪರ್‌ನಲ್ಲಿ ಓದಿದೆ. ಪೋಲೀಸ್ ಅಧಿಕಾರಿ ಶಾಸಕರಿಗೆ ಶುಭಾಶಯಗಳನ್ನು ಕಳಿಸಿದ್ದಾರೆ ಎಂದು. ನಮಗೂ ಗೊತ್ತು. ನಾವು ಕೂಡ ಅವರಿಗೆ ಹೇಗೆ ಶುಭಾಶಯಗಳನ್ನು ಕಳಿಸಬೇಕೆಂದು. ನಮ್ಮ ಕ್ಷೇತ್ರದಲ್ಲಿ ಇದೇ ತರಹ ಇದೆ. ಇಲ್ಲಿ ನಾನು ಅದನ್ನು ಹೇಳುವುದಿಲ್ಲ. ಅದನ್ನು ಹೇಳುವ ಅವಶ್ಯಕತೆ ಕೂಡ ಇಲ್ಲ. ನಮಗೂ ದೇವರು ತಲೆಯನ್ನು ಕೊಟ್ಟಿದ್ದಾನೆ. ನಾವು ಕೂಡ ಅವರಿಗೆ ಶುಭಾಶಯಗಳನ್ನು ಕಳಿಸುವುದಕ್ಕೆ ಬರುತ್ತದೆ. ಶಾಸಕರೊಡನೆ ಹೇಗೆ ವರ್ತಿಸಬೇಕೆಂದು ಅವರಿಗೆ ಎಚ್ಚರಿಕೆ ಕೊಡಬೇಕಾಗುತ್ತದೆ. ಅಧಿಕಾರಿಗಳಿಗೆ ರಾಜ್ಯದಲ್ಲಿ ಸಂಬಳ ಎಷ್ಟು ಕೊಡುತ್ತಿದ್ದೀರಿ ?

ನಮ್ಮ ರಾಜ್ಯದ ಬಡ್ಜೆಟ್ ಸುಮಾರು ೩,೬೬೮ ಕೋಟಿಗಿಂತ ಹೆಚ್ಚು. ಅದರಲ್ಲಿ ೭೦೨ ಕೋಟಿ ರೂಪಾಯಿ ಸರ್ಕಾರಿ ಅಧಿಕಾರಿಗಳ ಮತ್ತು ಉಳಿದ ನೌಕರರ ಪಗಾರಕ್ಕಾಗಿ ತೆಗೆದಿಟ್ಟಿದ್ದಾರೆ. ಇದು ಒಂದು ದೃಷ್ಟಿಯಿಂದ ಹೆಚ್ಚು. ಏಕೆಂದರೆ ಸರ್ಕಾರಿ ನೌಕರರನ್ನು ಮತ್ತು ಸರ್ಕಾರಿ ನೌಕರಿಯಲ್ಲಿ ಇಲ್ಲದೇ ಇರುವವರನ್ನು ಹೋಲಿಸಿ ನೋಡಿದರೆ, ಸರ್ಕಾರಿ ನೌಕರರಲ್ಲದವರು ಬಹಳ ಕಷ್ಟದಲ್ಲಿದ್ದಾರೆ. ಸರ್ಕಾರಿ ನೌಕರಿಯಲ್ಲಿ ಇರುವವರು ಸುಖದಲ್ಲಿದ್ದಾರೆ. ಉಳಿದ ಜನತೆ ಕಷ್ಟದಲ್ಲಿದ್ದಾರೆ. ಸರ್ಕಾರಿ ನೌಕರರನ್ನು, ಅಧಿಕಾರಿಗಳನ್ನು ಯಾವರೀತಿ ನೋಡಿಕೊಳ್ಳಬೇಕು, ಯಾವರೀತಿ ಅವರಿಂದ ಕೆಲಸ ತೆಗೆದುಕೊಳ್ಳಬೇಕು ಎನ್ನುವುದು ಅಡ್ಮಿನಿಸ್ಟ್ರೇಶನ್‌ನಲ್ಲಿ ಬರುವುದು ಮತ್ತು ಇವತ್ತಿನ ಬೇಡಿಕೆಯಲ್ಲಿ ಇರುವ ವಿಚಾರ. ಇಷ್ಟೊಂದು ಸಂಬಳ ತೆಗೆದುಕೊಂಡು ಇರುವ ಹೇಗೆ ಕೆಲಸ ಮಾಡುತ್ತಾರೆನ್ನುವುದಕ್ಕೆ ಇಲ್ಲಿ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಹತ್ತು ನಿಮಿಷ ಆಯಿತು. ಐದು ನಿಮಿಷ ನಿಮಗೆ ಸ್ಪೆಶಲ್ ಆಗಿ ಕೊಟ್ಟಿದ್ದೇನೆ. ಬೇಗ ಮುಗಿಸಿ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ನಾನು ಎರಡು-ಮೂರು ಉದಾಹರಣೆಗಳನ್ನು ಕೊಡಬೇಕಾಗಿದೆ, ನಮ್ಮ ಜಿಲ್ಲೆಯ ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ತರಬೇಕಾಗುತ್ತದೆ. ನಿನ್ನೆ ರಾತ್ರಿ ನನಗೆ ಟೆಲಿಗ್ರಾಂ ಬಂದಿದೆ, ಏನೆಂದರೆ ಭಟ್ಕಲ್ ಇಂಜಿನಿಯರಿಂಗ್ ಕಾಲೇಜಿನ ಕೆಲವು ಹುಡುಗರನ್ನು ೪೮ ತಾಸುಗಳ ಕಾಲ ಸಬ್ ಇನ್‌ಸ್ಪೆಕ್ಟರ್ ಅವರು ಒಳಗೆ ಇಟ್ಟುಕೊಂಡಿದ್ದಾರೆ. ಈ ಬಗ್ಗೆ ಅವರು ಕಾನೂನು ಪ್ರಕಾರ ಕೋರ್ಟಿನ ಅನುಮತಿಯನ್ನು ತೆಗೆದುಕೊಂಡಿದ್ದಾರೆಯೇ ? ಅನುಮತಿ ತೆಗೆದುಕೊಳ್ಳಲಿಕ್ಕೆ ಅವರಿಗೆ ಏನು ತೊಂದರೆ ಇದೆ ಎಂದು ನಾನು ಕೇಳುತ್ತೇನೆ ? ಈ ಟೆಲಿಗ್ರಾಂ ಅನ್ನು ತಮಗೆ ಕಳಿಸಿಕೊಡುತ್ತೇನೆ. ಇದನ್ನು ತಾವು ದರಸ್ತಿ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ವಿಚಾರ ಮಾಡೋಣ.

ಶ್ರೀ ಆರ್. ಎನ್. ನಾಯಕ್.—ಅವರನ್ನು ಬಿಡುಗಡೆ ಮಾಡಿಬಿಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಅವರನ್ನು ಕೋರ್ಟಿಗೆ ಹಾಜರು ಮಾಡದೇ ಇದ್ದರೆ ಹೇಗೆ ? ಕೋರ್ಟಿಗೆ ಹಾಜರು ಮಾಡುವುದಕ್ಕೆ ಟೈಮ್ ಬೇಕಾದರೆ ತೆಗೆದುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಅದನ್ನು ತಾವು ನನಗೆ ಕಳಿಸಿಕೊಟ್ಟರೆ ನಾನು ವಿಚಾರಿಸಿ ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಆಮೇಲೆ ಕುಮಟಾದಲ್ಲಿ ಒಂದು ಟಿ.ಸಿ.ಹೆಚ್. ಕಾಲೇಜು ಇದೆ. ಅದರಲ್ಲಿ ರಾಜಕಾರಣ ಮಿತಿಮೀರಿ ಹೋಗಿದೆ. ಏಳೆಂಟು ತಿಂಗಳ ಹಿಂದೆ ಒಬ್ಬರನ್ನು ಪ್ರಿನ್ಸಿಪಾಲ್‌ರಾಗಿ ನೇಮಕ ಮಾಡಿದ್ದಾರೆ. ಅಡ್ಮಿನಿಸ್ಟ್ರೇಶನ್ ವಿಷಯದಲ್ಲಿ ಅವರು ಬಹಳ ಕಟ್ಟುನಿಟ್ಟಾಗಿ ವರ್ತಿಸಿದ್ದೇ ತಪ್ಪಾಯಿತು. ಶ್ರೀ ಗಜಾನನ ಹೆಗಡೆ ಎನ್ನುವವರು ನಿಮ್ಮ ವರ್ಗದ ಹೆಸರು ಹೇಳಿ ಸೀಟನ್ನು ಗಿಟ್ಟಿಸಿಕೊಂಡರು. ಇದನ್ನು ಪತ್ತೆಹಚ್ಚಿ ಈ ಪ್ರಿನ್ಸಿಪಾಲರು ಮೇಲಿನವರಿಗೆ ಬರೆದರು. ಅಲ್ಲಿಂದ ಪ್ರಾರಂಭವಾಯಿತು ನೋಡಿ ಸ್ಟ್ರಗಲ್ ಸ್ಟಾರ್ಟ್ ಆಯಿತು. ಅವರಿಗೆ ತೊಂದರೆ ಕೊಡಲು ಪ್ರಾರಂಭವಾಯಿತು. ಮೊದಲನೆಯದಾಗಿ ಅವರು ಸ್ಟ್ರಿಕ್ಟ್ ಇದ್ದದ್ದು, ಎರಡನೆಯದು ಈ ಪ್ರಕರಣವನ್ನು ಪತ್ತೆಹಚ್ಚಿದ್ದು. ಇದರಿಂದ ಅವರು ತೊಂದರೆಗೆ ಬಿದ್ದರು. ಈ ಟಿ.ಸಿ.ಹೆಚ್. ಕಾಲೇಜಿನ ಆಡಳಿತ ವೈಖರಿಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಸಾಮಾನ್ಯವಾಗಿ ಎಷ್ಟು ವರ್ಷಗಳವರೆಗೆ ಒಂದು ಟಿ.ಸಿ.ಹೆಚ್. ಕಾಲೇಜಿನಲ್ಲಿ ಶಿಕ್ಷಕರನ್ನು ಇಡಬಹುದು ? ನಾನು ಬಹಳ ಸಲ ಶ್ರೀ ಗೋವಿಂದ ಗೌಡರಿಗೆ ಮತ್ತು ಶ್ರೀ ರಘುಪತಿಯವರಿಗೆ ಹೇಳಿದ್ದೇನೆ. ಉತ್ತರ ಕನ್ನಡ ಜಿಲ್ಲೆಯಲ್ಲಿ, ಹತ್ತಾರು ವರ್ಷಗಳಿಂದ ಅದೇ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವರು ಕೆಲಸ ಮಾಡುತ್ತಿದ್ದಾರೆ. ಕಳೆದ ಸಂದರ್ಭದಲ್ಲಿ ಕೂಡ ಇದನ್ನು ಹೇಳಿದ್ದೆ. ಅವರಲ್ಲಿ ಒಬ್ಬರು ಶ್ರೀ ಗಾವಂಕರ್ ಅಂತ, ೬ ವರ್ಷ ೭ ತಿಂಗಳಿಂದ ಇದ್ದಾರೆ, ಎಂ. ಎಂ ನಾಯಕ್ ೭ ವರ್ಷಗಳಿಂದ ಇದ್ದಾರೆ, ಬಿ. ವಿ. ನಾಯಕ್ ೬ ವರ್ಷಗಳಿಂದ ಇದ್ದಾರೆ, ಶ್ರೀ ಮಣ್ಣೂರು ಎನ್ನುವವರು ೧೫ ವರ್ಷಗಳಿಂದ ಇದ್ದಾರೆ. ಶ್ರೀ ಎಂ. ಪಿ, ಭಟ್ ಐದು ವರ್ಷಗಳಿಂದ ಇದ್ದಾರೆ, ಹೆಚ್ ಪಿ. ನಾಯಕ್ ೭ ವರ್ಷಗಳಿಂದ ಇದ್ದಾರೆ. ಎಲ್ಲರೂ ಕುಮಟಾ ತಾಲ್ಲೂಕಿನವರು, ರಾಜಕೀಯವನ್ನು ಬಳಸಿಕೊಂಡಿದ್ದಾರೆ. ಈ ಪ್ರಿನ್ಸಿಪಾಲರು ಸ್ಟ್ರಿಕ್ಟ್ ಆಗಿದ್ದಕ್ಕೆ ಅವರ ಮೇಲೆ ಯಾವುದೋ ನೆಪ ಹಾಕಿ ಅವರ ಮೇಲೆ ಆಪಾದನೆಗಳನ್ನು ಮಾಡಿದ್ದಾರೆ. ಮುಖ್ಯ ಮಂತ್ರಿಗಳ

ಆಫೀಸಿನಿಂದ, ಅವರಿಗೆ ರಜೆಯ ಮೇಲೆ ಹೋಗುವುದಕ್ಕೆ ಟೆಲಿಗ್ರಾಂ ಮೂಲಕ ಆರ್ಡರ್ ಹೋಯಿತು. ಈಗ ಅವರು ರಜೆಯಲ್ಲಿ ಇದ್ದಾರೆ. ಈಗ ಶ್ರೀ ಜಿ. ಎನ್. ಹೆಗಡೆ ಎನ್ನುವ ಒಬ್ಬ ಅಧಿಕಾರಿಯನ್ನು ಪರೀಕ್ಷೆ ನಡೆಸುವುದಕ್ಕೆ ಇನ್‌ಚಾರ್ಜ್ ಪ್ರಿನ್ಸಿಪಾಲ್‌ರಾಗಿ ನೇಮಿಸಿದ್ದಾರೆ.

ಅಧ್ಯಕ್ಷರು.—ಅದನ್ನು ನೀವು ಬರೆದು ಕಳಿಸಬಹುದಲ್ಲ ?

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಸಮಯ ಕಳೆದು ಹೋಗುತ್ತಿದೆ, ನನಗೆ ಗೊತ್ತಿದೆ. ಆದರೆ ಇದನ್ನು ನಾವು ಈ ಸಂದರ್ಭದಲ್ಲಿ ಅಲ್ಲದೆ, ಬೇರೆ ಸಂದರ್ಭದಲ್ಲಿ ಯಾರ ಮುಂದೆ ಹೋಗಿ ಹೇಳಬೇಕು? ನಿಮ್ಮ ವರ್ಗದ ಸರ್ಟಿಫಿಕೇಟ್ ಪಡೆದುಕೊಂಡು ಸೀಟು ಗಿಟ್ಟಿಸಿದವರನ್ನು ಪತ್ತೆ ಹಚ್ಚಿದ ಒಬ್ಬ ಸ್ಟ್ರಿಕ್ಟ್ ಅಧಿಕಾರಿಯ ಮೇಲೆ ಕೆಲವರು ಒತ್ತಡ ತಂದರು. ಈ ಕೆಲಸ ಮಾಡಿದ್ದಕ್ಕೆ ಅವರು ರಜೆಯ ಮೇಲೆ ಹೋಗಬೇಕಾ ನಿಮ್ಮ ಸರ್ಕಾರದಲ್ಲಿ? ಅದೂ ಮುಖ್ಯ ಮಂತ್ರಿಯವರ ಆದೇಶದ ಮೇರೆಗೆ ? ಇದು ಸರಿಯಲ್ಲ. ಇದನ್ನು ಪರಿಶೀಲಿಸಿ ಕೂಡಲೇ ಅವರು ಅದೇ ಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ಹೇಳಬೇಕು. ಅವರದ್ದು ಏನಾದರೂ ತಪ್ಪಿದ್ದರೆ ಶಿಕ್ಷೆ ಕೊಡುವ ಹಕ್ಕು ನಿಮಗೆ ಇದೆ. ನಾನು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ ನೀವು ಕೂಡಲೇ ಈ ಬಗ್ಗೆ ಆದೇಶವನ್ನು ಕೊಡಬೇಕು. ತಪ್ಪು ಆಗಿದೆ ಎಂದರೆ, ನೀವು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು,

ಮುಖ್ಯವಾಗಿ ಈ ರಾಜ್ಯದ ಅತಿದೊಡ್ಡ ಆಫೀಸಿನಿಂದ ಇಂತಹ ಸಣ್ಣ ಆದೇಶಗಳು ಹೋಗಬಾರದೆಂಬುದು ನಮ್ಮ ಕಳಕಳಿ. ಅದರ ಜೊತೆಗೆ ಇಷ್ಟೆಲ್ಲ ವರ್ಷ ರಾಜಕಾರಣ ಮಾಡಿಕೊಂಡು ಖಾಯಂವಾಗಿ ಒಂದೇ ಜಾಗದಲ್ಲಿ ಕೂತಿರುವ ಕೆಲವರಿಗೆ ಏನು ಮಾಡುತ್ತೀರಿ ? ಈ ಕೆಟ್ಟ ರಾಜಕಾರಣದ ಜನರಿಗೆ 20 ವರ್ಷ ಸರ್ವಿಸ್ ಆದರೂ ಟ್ರಾನ್ಸ್‌ಫರ್ ಮಾಡುತ್ತೀರೋ ಇಲ್ಲವೋ ? ನಾಳೆನೇ ನೀವು ಟ್ರಾನ್ಸ್‌ಫರ್ ಮಾಡಿಸಿ. ಆಗ ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ 10 ಮಿನಿಟ್ಸ್‌ನಲ್ಲಿ ಮುಗಿಸಿದರು. ನಿಮಗೂ ಅಷ್ಟೇ ಸಮಯ ಕೊಟ್ಟಿದ್ದೇನೆ. ಜಾಗ್ರತೆ ಮುಗಿಸಿ.

ಶ್ರೀ ಆರ್. ಎನ್. ನಾಯಕ್.—ಹೊನ್ನಾವರದ ಡಿ. ಎಫ್. ಒ, ಅವರದ್ದು ಜನವರಿ ತಿಂಗಳಲ್ಲಿ ಪುತ್ತೂರಿಗೆ ಟ್ರಾನ್ಸ್‌ಫರಾಯಿತು. ಆದರೇ ಈ ಸರ್ಕಾರದ ಸಚಿವರಾದ ಶ್ರೀ ದೇಶಪಾಂಡೆಯವರು ಮಧ್ಯೆ ಪ್ರವೇಶ ಮಾಡಿ ಆ ಟ್ರಾನ್ಸ್‌ಫರ್‌ನ್ನು ರದ್ದು ಮಾಡಿಸಿದರು. ಹಾಗಿದ್ದರೆ ಟ್ರಾನ್ಸ್‌ಫರ್‌ನ್ನು ಏಕೆ ಮಾಡಬೇಕಾಗಿತ್ತು ? ಅದರ ಅವಶ್ಯಕತೆ ಇರಲಿಲ್ಲವಲ್ಲ ? ಅದರ ಬಗ್ಗೆ ನಾನು ಕೇಳಿದ್ದಕ್ಕೆ ಇಲ್ಲಿ ಉತ್ತರ ಏನೆಂದು ಬಂದಿದೆ ಎಂದರೆ 'ಕೈಲಿರುವ ಕೆಲಸವನ್ನು ಮುಗಿಸುವುದಕ್ಕಾಗಿ' ಅವರ ಟ್ರಾನ್ಸ್‌ಫರನ್ನು ರದ್ದು ಮಾಡಲಾಯಿತು ಎಂದು. ಮುಖ್ಯವಾಗಿ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಯನ್ನೇ ಮರೆತು ಬಿಟ್ಟಿದ್ದಾರೆ. ದಯವಿಟ್ಟು ಹಾಗೆ ಮಾಡಬೇಡಿ.

ಅಧ್ಯಕ್ಷರು.—ಆಯಿತು, ಮತ್ತೆ ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿಬಿಡಿ.

ಶ್ರೀ ಆರ್. ಎನ್. ನಾಯಕ್.—ಬೆಂಗಳೂರಿನಿಂದ ಉತ್ತರ ಬಂದಿರುವುದು ಏನೆಂದರೆ, ಕೈಲಿರುವ ಕೆಲಸವನ್ನು ಮುಗಿಸುವುದಕ್ಕಾಗಿ ಮಾರ್ಚಿ ತಿಂಗಳ ಅಂತ್ಯದವರೆಗೆ ಅವರ ಟ್ರಾನ್ಸ್‌ಫರನ್ನು ತಡೆಹಿಡಿಯಲಾಗಿದೆ ಎಂದು. ಈ ದೇಶದಲ್ಲಿ ಮುಖ್ಯ ಮಂತ್ರಿ, ಮಂತ್ರಿ, ಶಾಸಕರು ಯಾರೂ ಇಲ್ಲದಿದ್ದರೂ ಆಡಳಿತ ಸುಸೂತ್ರವಾಗಿ ನಡೆಯುತ್ತದೆ. ಆದರೆ ಈ ಪ್ರಭು ಎನ್ನುವ ಡಿ. ಎಫ್. ಒ. ಇಲ್ಲದಿದ್ದರೆ ಹೊನ್ನಾವರದ ಆಡಳಿತ ನಡೆಯುತ್ತಿರಲಿಲ್ಲವೇ ? ಅಧ್ಯಕ್ಷರೇ, ಇದರಲ್ಲಿ ಸೂಕ್ಷ್ಮವಾದ ವಿಚಾರ ಅಡಗಿದೆ. ಇಂತಹ ಹಲವಾರು ಪ್ರಕರಣಗಳು ನಮ್ಮಲ್ಲಿವೆ.

ದಯವಿಟ್ಟು ನಮ್ಮ ಜಿಲ್ಲಾ ಮಂತ್ರಿಗಳು ಇಂಥಾದ್ದರಲ್ಲಿ ಸಿಕ್ಕಿಹಾಕಿಕೊಂಡು ತಲೆಹಾಕುತ್ತಿದ್ದಾರೆ ಹಾಗೂ ಕೈಹಾಕುತ್ತಿದ್ದಾರೆ. ಮುಖ್ಯ ಮಂತ್ರಿಗಳು ಇದಕ್ಕೆ ಅವಕಾಶ ಕೊಡಬಾರದು. ಆ ಮಂತ್ರಿಗಳು ಯುವಕರಿರಬಹುದು. ಆದರೆ ಅವರು ವಿವೇಚನೆಯಿಲ್ಲದೆ ಕೆಲಸ ಮಾಡಿದರೆ ಅವರಿಗೆ ನಾವು ಹೇಗೆ ಸಹಕಾರ ಕೊಡುವುದು ? ಈ ರೀತಿಯಾಗಿ ಎಲ್ಲ ತಮಗೆ ಬೇಕಾದ ಜನಗಳನ್ನೇ ಇವರು ಇಟ್ಟುಕೊಳ್ಳಲು ಪ್ರಾರಂಭ ಮಾಡುವುದಾದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ನಾವೂ ಶಾಸಕರು, ನಮ್ಮ ಹತ್ತಿರವೂ

ಜನಗಳು ಕಷ್ಟ ನಿವಾರಣೆಗೆಂದು ಬರುತ್ತಾರೆ. ಇದೇ ರೀತಿ ಇವರು ಮುಂದುವರಿದರೆ ನಾವು ಅವರಿಗೆ ಕೋಆಪರೇಷನ್ ಕೊಡುವುದಕ್ಕಾಗುವುದಿಲ್ಲ. ಏಕೆ ಕೊಡಬೇಕು ?

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರಂಥ ಹಿರಿಯ ನಾಯಕರು ೨೦ ನಿಮಿಷದಲ್ಲಿ ಭಾಷಣ ಮುಗಿಸಿದ್ದಾರೆ. ನೀವು ಇನ್ನೂ ಮುಂದುವರಿಯುತ್ತಿದ್ದೀರಿ. ಈಗ ನೀವು ಭಾಷಣ ನಿಲ್ಲಿಸದಿದ್ದರೆ ನಾನು ಮಂತ್ರಿಗಳಿಗೆ ಉತ್ತರ ಕೊಡಲು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಇನ್ನೊಂದು ವಿಷಯ ಹೇಳುತ್ತೇನೆ, ಇದೆಲ್ಲವನ್ನೂ ಇನ್ಯಾರ ಹತ್ತಿರ ಎಲ್ಲಿ ಹೇಳುವುದು ನಾವು ? ಅಂಕೋಲಾದಲ್ಲಿ ನಾಲ್ಕೈದು ವರ್ಷದಿಂದ ಒಬ್ಬರು ತಹಸೀಲ್ದಾರ್ ಇದ್ದಾರೆ. ಅವರು ಎಷ್ಟು ಜನತಾ ಪಾರ್ಟಿಗೆ ಹತ್ತಿರದವರೆಂದರೆ ಇತರ ಪಕ್ಷದವರನ್ನು ಮಾತ ನಾಡಿಸುವುದೇ ಇಲ್ಲ. ಅವರ ಮೇಲೆ ನೂರೆಂದು ಅಲಿಗೇಷನ್. ಮೊನ್ನೆ ಯಾರೋ ಪಾಪ, ಅನೆಂಪ್ಲಾಯ್ಡ್ ಗ್ರಾಜುಯೇಟ್ ಶೆಟ್ಟಿಗೆರೆ ಎಂಬಲ್ಲಿ ಮಿಲ್ ಹಾಕಬೇಕೆಂದು ಲೈಸೆನ್ಸ್ ಕೇಳಿದರೆ, ಅದಕ್ಕೆ ಲೈಸೆನ್ಸ್ ಕೊಡಲಿಲ್ಲ. ತಕರಾರು ಮಾಡಿದರು. ಪಕ್ಷಭೇದ ಮಾಡಿದರು. ಇನ್ನೊಂದು ವಿಚಾರ.

ಅಧ್ಯಕ್ಷರು.—ಈಗೇನು ತಾವು ನಿಲ್ಲಿಸುತ್ತೀರೋ ಇಲ್ಲ ನಾನೇ ಶ್ರೀ ದೇಶಮುಖರಿಗೆ ಉತ್ತರ ಆರಂಭಿಸಲು ಕರೆಯಲೋ ?

ಶ್ರೀ ಆರ್. ಎನ್. ನಾಯಕ್.—ಟೀಕೆ ಟಿಪ್ಪಣಿಗಳ ವಿಚಾರ, ಇದರಲ್ಲಿ......

ಅಧ್ಯಕ್ಷರು.—ಮಾನ್ಯ ದೇಶಮುಖರೇ, ನೀವು ಆರಂಭಿಸಿ.

ಶ್ರೀ ಆರ್. ಎನ್. ನಾಯಕ್.—ರಾಜಕಾರಣದಲ್ಲಿ ಟೀಕೆ ಟಿಪ್ಪಣಿಗಳು ಬರುತ್ತವೆ. ಮಾನ್ಯ ಮುಖ್ಯ ಮಂತ್ರಿಗಳು ರಾಜಕೀಯದಲ್ಲಿ ಬಹಳ ದೊಡ್ಡ ಹಾಗೂ ಉದ್ದ ದಾರಿಯಿಂದ ನಡೆದು ಬಂದಿದ್ದಾರೆ.

ಅಧ್ಯಕ್ಷರು.—ಈಗ ನೀವು ದಾರಿ ತಪ್ಪುತ್ತಿದ್ದೀರಿ. ದೇಶ್‌ಮುಖ್ ಅವರೇ, ನೀವು ಉತ್ತರಿಸಿ.

ಶ್ರೀ ಎಸ್. ಬಂಗಾರಪ್ಪ.—ಮುಕ್ತಾಯ ಮಾಡಲಿ, ಬಿಡಿ.

ಅಧ್ಯಕ್ಷರು.—ಅವರು ಆಗಲೇ ಆಯಿತು ಎಂದು ಕೂತಿದ್ದರು.

ಶ್ರೀ ಆರ್. ಎನ್. ನಾಯಕ್.—ಮುಗಿಸುತ್ತೇನೆ. ದೂರದ ಹಾದಿ ನಡೆಯುವಾಗ ನೋವು ನಲಿವು ಎಲ್ಲ ಇರುತ್ತವೆ. ಕೆಲವು ಸಲ ತಪ್ಪಾಗಿರಬಹುದು, ಟೀಕೆ ಟಿಪ್ಪಣಿಗಳು ಬಂದೇ ಬರುತ್ತವೆ.

ಅಧ್ಯಕ್ಷರು —ನಾಯಕರೇ ನೀವು ಕುಳಿತುಕೊಂಡುಬಿಡಿ.

ಶ್ರೀ ಆರ್. ಎನ್. ನಾಯಕ್.—ಆಯಿತು, ಕುಳಿತುಬಿಡುತ್ತೇನೆ.

ಅಧ್ಯಕ್ಷರು.—ಈಗ ವಿದ್ಯುತ್ ಖಾತೆ ಮಂತ್ರಿಗಳು ಉತ್ತರ ನೀಡುತ್ತಾರೆ.

ಶ್ರೀ ಜಿ. ಎಸ್. ದೇಶಮುಖ್ (ಗಣಿ, ಭೂವಿಜ್ಞಾನ ಮತ್ತು ವಿದ್ಯುತ್ ಮಂತ್ರಿಗಳು).—ಮಾನ ಅಧ್ಯಕ್ಷರೇ ಇವತ್ತಿನ ನನ್ನ ಇಲಾಖೆಯ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಾ ನನ್ನ ವಿದ್ಯುತ್ ಇಲಾಖೆಗೂ ಮತ್ತು ಕೈಗಾರಿಕೆ ಇಲಾಖೆಗಳೊಡನೆ ಒಂದಕ್ಕೊಂದು ಸಂಬಂಧ ಇರುವುದರಿಂದ ನನ್ನ ಖಾತೆಗೆ ಹೆಚ್ಚಿನ ಹಣವನ್ನು ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆಂದು ಹೇಳಲು ನನಗೆ ತುಂಬಾ ಸಂತೋಷವಾಗುತ್ತದೆ. ಅದಕ್ಕಾಗಿ ನನ್ನ ಕೃತಜ್ಞತೆಗಳನ್ನು ಮುಖ್ಯ ಮಂತ್ರಿಗಳಿಗೆ ಅರ್ಪಿಸುತ್ತೇನೆ. ಅದೇ ರೀತಿ ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡಿ ಅಮೂಲ್ಯವಾದ ಸಲಹೆ ಹಾಗೂ ಅಭಿಪ್ರಾಯಗಳನ್ನು ಕೊಟ್ಟ ಈ ಮನೆಯ ಸದಸ್ಯರಿಗೂ ನನ್ನ ಇಲಾಖೆಯನ್ನು ಸುಗಮವಾಗಿ ನಡೆಸುವಲ್ಲಿ ಸಹಕರಿಸಿದ ಅಧಿಕಾರಿಗಳಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸದನದ ಮಾನ್ಯ ಸದಸ್ಯರು ರಾಜ್ಯದಲ್ಲಿಯ ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಸರಬರಾಜಿನ ಪರಿಸ್ಥಿತಿಯ ಬಗ್ಗೆ ಬಹಳ ಆಸಕ್ತಿಯಿಂದ ಮಾತನಾಡಿದ್ದಾರೆ. ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯ ಬಗ್ಗೆ ಸರ್ಕಾರವು ಸಹ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುತ್ತದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ೧೯೮೦–೮೧ರಲ್ಲಿ ೧೫೫೦ ಮೆಗಾವ್ಯಾಟ್ಸ್ ಇದ್ದುದ್ದು ಈಗ ೨,೫೩೦ ಮೆಗಾವ್ಯಾಟ್ಸ್‌ಗಳಿಗೆ ಹೆಚ್ಚಿರುತ್ತದೆ. ಆದರೆ ಹೆಚ್ಚು ಸಂಖ್ಯೆಯಲ್ಲಿ ನೀರಾವರಿ ಪಂಪುಗಳನ್ನು

ವಿದ್ಯುದ್ದೀಕರಣಗೊಳಿಸುವುದರಿಂದಾಗಿಯೂ ಮತ್ತು ಗ್ರಾಮೀಣ ವಿದ್ಯುದ್ದೀಕರಣಗಳಿಸುವುದರಿಂದಾಗಿಯೂ ಬೇಡಿಕೆಯು ಸಹ ಅದೇ ರೀತಿ ಹೆಚ್ಚುತ್ತಿದೆ. ಬೇಡಿಕೆಯು ಹೆಚ್ಚಲು ಇನ್ನೊಂದು ಮುಖ್ಯವಾದ ಕಾರಣವೆಂದರೆ ಸರ್ವ ವಿದ್ಯುತ್ ಗೃಹಗಳು ಈ ಪಂಗಡದಲ್ಲಿ ಈ ವರ್ಷ ೫೦,೦೦೦ ಕ್ಕಿಂತಲೂ ಹೆಚ್ಚು ಕನೆಕ್ಷನ್‌ಗಳನ್ನು ಕೊಡಲಾಗಿದೆ. ಇದಲ್ಲದೆ ಎಲ್. ಟಿ. ಪವರ್ ಘಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿತಗೊಳ್ಳುತ್ತಿದ್ದು ಪ್ರತಿವರ್ಷ ೧೦,೦೦೦ಕ್ಕಿಂತಲೂ ಹೆಚ್ಚು ಘಟಕಗಳು ಸ್ಥಾಪಿತಗೊಳ್ಳುತ್ತಿವೆ. ಈ ರೀತಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಸರ್ಕಾರವು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ದಿಕ್ಕಿನಲ್ಲಿ ಗ್ರಾಮೀಣ ಕೈಗಾರಿಕೆಗಳನ್ನು ಮತ್ತು ವಿದ್ಯುತ್ ಹೆಚ್ಚಾಗಿ ಬಳಸದ ಕೈಗಾರಿಕೆಗಳನ್ನು ಉತ್ತೇಜಿಸಲು ಕೈಗಾರಿಕಾ ನೀತಿಯನ್ನು ಸರ್ಕಾರವು ತಳೆದಿರುತ್ತದೆ. ವಿದ್ಯುತ್ ಉತ್ಪಾದನೆಯಲ್ಲಿ ಪಾಲ್ಗೊಳ್ಳಲು ಖಾಸಗಿ ಉದ್ಯಮ ವಲಯಕ್ಕೆ ಪ್ರೋತ್ಸಾಹ ಕೊಟ್ಟು ಅವರನ್ನು ಕ್ಯಾಪ್ಟೀವ್ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೆ ಈ ಬಗ್ಗೆ ಡೀಸಲ್ ಮತ್ತು ಡೀಸಲ್ ಘಟಕಗಳ ಮೇಲೆ ಮಾರಾಟ ತೆರಿಗೆಯನ್ನು ವಿನಾಯಿತಿ ನೀಡಲಾಗಿರುತ್ತದೆ. ಇದಲ್ಲದೆ ಕರ್ನಾಟಕ ವಿದ್ಯುತ್ ಮಂಡಲಿಯು ಸಾಗಾಣಿಕೆ ಮತ್ತು ವಿತರಣೆಯಲ್ಲಿ ಆಗುತ್ತಿರುವ ನಷ್ಟವನ್ನು ಕಡಿಮೆಗೊಳಿಸಲು ವಿತರಣಾ ವ್ಯವಸ್ಥೆಯನು ಬಲಪಡಿಸುತ್ತಿದೆ.

ರಾಜ್ಯದಲ್ಲಿ ಸಾಗಾಣಿಕೆ ಮತ್ತು ವಿತರಣೆಯಿಂದ ನಷ್ಟವು ಸುಮಾರು ಶೇಕಡ ೨೨ರಷ್ಟಿದ್ದು ಅದು ರಾಷ್ಟ್ರೀಯ ಸರಾಸರಿಯಾದ ಶೇಕಡ ೨೧ಕ್ಕಿಂತ ಸ್ವಲ್ಪ ಹೆಚ್ಚಿರುತ್ತದೆ. ಉತ್ಪಾದನಾ ಕೇಂದ್ರಗಳು ಗ್ರಾಹಕ ಕೇಂದ್ರಗಳಿಗಿಂತ ಅತಿ ದೂರವಿರುವುದೇ ಇದಕ್ಕೆ ಮುಖ್ಯವಾದ ಕಾರಣ. ಆಗಿದ್ದರೂ ಈ ನಷ್ಟವನ್ನು ಇನ್ನು ಕಡಿಮೆಗೊಳಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಹೊಸ ಸಾಗಾಣಿಕೆ ಲೈನ್‌ಗಳನ್ನು ಸ್ಥಾಪಿಸುವುದು.

೨) ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸುವುದು.

೩) ವಿದ್ಯುತ್ ವಾಹಕಗಳ ಗಾತ್ರವನ್ನು ಹೆಚ್ಚಿಸುವುದು.

೪) ಟ್ರಾನ್ಸ್‌ಫಾರ್ಮರ್ ಕೇಂದ್ರಗಳನ್ನು ಪುನರ್ವಿಂಗಡಣೆ ಮಾಡುವುದು ಮತ್ತು

೫) ಕ್ಯಾಪಾಸಿಟರ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವುದು.

ಚರ್ಚೆಯ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಈ ಕೆಳಗಿನ ಮುಖ್ಯವಾದ ಅಂಶಗಳನ್ನು ಪ್ರಸ್ತುತ ವಿದ್ಯುಚ್ಛಕ್ತಿ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಿಸುತ್ತಾರೆ.

೧) ವಿದ್ಯುತ್ ಉತ್ಪಾದನೆಗಾಗಿ ಸರ್ಕಾರವು ಸಾಕಷ್ಟು ಹಣವನ್ನು ಒದಗಿಸಿರುವುದಿಲ್ಲ,

೨) ಉಪ ಗ್ರಾಮಗಳ (ಮಜಿರೆಗಳು)ನ್ನು ವಿದ್ಯುದ್ದೀಕರಣಗೊಳಿಸಲು ಪ್ರಾಮುಖ್ಯತೆ ಕೊಡಬೇಕು.

೩) ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವಲ್ಲಿ ಆದ್ಯತೆ ನೀಡಬೇಕು. ಮತ್ತು ಮೀಟರ್‌ಗಳನ್ನು ತೆಗೆದುಹಾಕಬೇಕು.

೪) ಗ್ರಾಮೀಣ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಮಾಡುವ ಬಗ್ಗೆ.

ವಿದ್ಯುತ್ ಉತ್ಪಾದನಾ ವಿಭಾಗದಲ್ಲಿ ಹೆಚ್ಚಿನ ಹಣ ತೊಡಗಿಸಬೇಕೆಂಬುದನ್ನು ಮನಗಂಡು ಈ ವಿಭಾಗಕ್ಕೆ ರೂ. ೨೧೦.೭೯ ಕೋಟಿಗಳನ್ನು ೧೯೮೬–೮೭ನೇ ಸಾಲಿನಲ್ಲಿ ಕೊಡಲಾಗಿದೆ, (ರೂ.೧೭೫ ಕೋಟಿ ಪ್ಲಾನ್ ಮತ್ತು ರೂ. ೩೫.೭೯ ಕೋಟಿ ನಾನ್ ಪ್ಲಾನ್) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ). ೧೯೮೦–೮೧ರಲ್ಲಿ ಈ ಬಗ್ಗೆ ಕೇವಲ ೧೦೨.೭೧ ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು.

೧೯೮೫–೮೬ನೇ ಸಾಲಿನಲ್ಲಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆ ಕೆಳಗೆ ೯೮೩ ಗ್ರಾಮಗಳನ್ನು ಹಾಗೂ ೨೫೦ ಉಪ ಗ್ರಾಮಗಳನ್ನು ವಿದ್ಯುದ್ದೀಕರಣಗೊಳಿಸಲು ಯೋಜನೆಯಿತ್ತು. ಇದರ ಪೈಕಿ ೮೪೨ ಗ್ರಾಮಗಳನ್ನು ಮತ್ತು ಗುರಿಮೀರಿ ೩೭೦ ಉಪ ಗ್ರಾಮಗಳನ್ನು ಈ ವರ್ಷದ ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ ವಿದ್ಯುದ್ದೀಕರಣಗೊಳಿಸಲಾಗಿದೆ. ಇದರಿಂದಾಗಿ ಗುರಿಯಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿ ಗ್ರಾಮೀಣ ವಿದ್ಯುದ್ದೀಕರಣವಾಗಿರುವುದನ್ನು ಗಮನಿಸಬಹುದು, ಭಾರತ ಸರ್ಕಾರವು

೨೦ ಅಂಶ ಕಾರ್ಯಕ್ರಮದಲ್ಲಿ ಆದ ಪ್ರಗತಿಯನ್ನು ವಿಮರ್ಶಿಸುವುದಾಗಿ ಜನಗಣತಿ ಗ್ರಾಮಗಳನ್ನು ಮಾತ್ರ ವಿದ್ಯುದೀಕರಣಕ್ಕಾಗಿ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆಯೇ ಹೊರತು, ಉಪ ಗ್ರಾಮಗಳನ್ನಲ್ಲ ಎಂದು ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಈಗಾಗಲೇ ೨೬,೮೨೬ ಗ್ರಾಮಗಳ ಪೈಕಿ ೨೩,೧೬೨ (೮೬.೭೩ ಪರ್ಸೆಂಟ್) ಗ್ರಾಮಗಳನ್ನು ವಿದ್ಯುದ್ಧೀಕರಣ ಗೊಳಿಸಲಾಗಿದೆ. ಉಳಿದ ಗ್ರಾಮಗಳನ್ನು ಮತ್ತು ೬,೩೩೪ ಉಪ ಗ್ರಾಮಗಳನ್ನು ವಿದ್ಯುದ್ಧೀಕರಣ ಗೊಳಿಸಲಾಗಿದೆ. ೧೯೮೦-೮೧ನೇ ಸಾಲಿನಲ್ಲಿ ಕೇವಲ ೧೫೦ ಉಪಗ್ರಾಮಗಳನ್ನು ವಿದ್ಯುದ್ಧೀಕರಣ ಗೊಳಿಸಿದ್ದು. ೧೯೮೩-೮೪ನೇ ಸಾಲಿನಲ್ಲಿ ಈ ಸಂಖ್ಯೆಯು ೬೪೧ಕ್ಕೆ ಹೆಚ್ಚಿದ್ದು. ೧೯೮೪-೮೫ನೇ ಸಾಲಿನಲ್ಲಿ ಅದು ೮೪೭ಕ್ಕೆ ಏರಿರುತ್ತದೆ. ಹಣದ ಸೌಲಭ್ಯವನ್ನು ಅವಲಂಬಿಸಿ ಹೆಚ್ಚಿನ ಸಂಖ್ಯೆಯಲ್ಲಿ ಉಪ ಗ್ರಾಮಗಳನ್ನು ಅಂದರೆ ಮಜರೆ ಗ್ರಾಮಗಳನ್ನು ವಿದ್ಯುದ್ಧೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು,

ಇನ್ನು ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ಧೀಕರಣಗೊಳಿಸುವಲ್ಲಿ ೧೯೮೪-೮೫ನೇ ಸಾಲಿನಲ್ಲಿ ಗುರಿ ೩೭,೩೦೦ ಇದ್ದು, ಈ ವರ್ಷದ ಫೆಬ್ರುವರಿ ತಿಂಗಳ ಅಂತ್ಯದೊಳಗಾಗಿ ೪೧,೯೧೩ ಪಂಪುಸೆಟ್ಟುಗಳನ್ನು ವಿದ್ಯುದ್ಧೀಕರಣಗೊಳಿಸಲಾಗಿದೆ. ಬರಗಾಲದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ಧೀಕರಣಗೊಳಿಸಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ, ೧೯೮೫-೮೬ನೇ ಸಾಲಿನಲ್ಲಿ ೪೪,೦೦೦ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ಧೀಕರಣಗೊಳಿಸುವ ಸಾಧ್ಯತೆಯಿದೆ. ೧೦ ಅಶ್ವಶಕ್ತಿಯ ಮತ್ತು ಅದಕ್ಕಿಂತ ಕಡಿಮೆ ಶಕ್ತಿಯ ಪಂಪುಸೆಟ್ಟುಗಳಿಗೆ ವಿತರಿಸಿದ ಜೋಡಣೆಯಿಲ್ಲದೆ ಫ್ಲ್ಯಾಟ್ ದರದ ಮೇಲೆ ಪ್ರತಿ ಅಶ್ವಶಕ್ತಿಗೆ ವರ್ಷಕ್ಕೆ ರೂಪಾಯಿ ೬೬ರಂತೆ ೫ ಅಶ್ವಶಕ್ತಿಯವರೆಗೂ. ಮತ್ತು ೫ ಅಶ್ವಶಕ್ತಿಯಿಂದ ೧೦ ಅಶ್ವಶಕ್ತಿಯವರೆಗೆ ವರ್ಷಕ್ಕೆ ಪ್ರತಿ ಅಶ್ವಶಕ್ತಿಗೆ ರೂಪಾಯಿ ೭೫ರಂತೆಯೂ ದರ ವಸೂಲಿ ಮಾಡಲಾಗುವುದು. ೧೧ ಮತ್ತು ಅದಕ್ಕಿಂತ ಹೆಚ್ಚಿನ ಅಶ್ವಶಕ್ತಿಯ ಪಂಪುಸೆಟ್ಟುಗಳಿಗೆ ಉಪಯೋಗಿಸಿದ ಪ್ರತಿ ಯೂನಿಟ್ಟಿಗೆ ೨೨ ಪೈಸೆಯಂತೆ, ಮತ್ತು ಕನಿಷ್ಟ ದರ ಪ್ರತಿ ಅಶ್ವಶಕ್ತಿಗೆ ವರ್ಷಕ್ಕೆ ೧೦೦ ರೂಪಾಯಿಯಂತೆ ವಸೂಲು ಮಾಡಲಾಗುವುದು. ನೀರಾವರಿ ಉಪಯೋಗಕ್ಕೆ ರಿಯಾಯಿತಿ ದರದ ಮೇಲೆ ಯೂನಿಟ್ಟಿಗೆ ರೂಪಾಯಿ ೧-೨೫ ರಂತೆ ವಿದ್ಯುತ್ ಸರಬರಾಜು ಮಾಡುತ್ತಿದ್ದು, ಇದಕ್ಕಿಂತಲೂ ಕಡಿಮೆ ದರದಲ್ಲಿ ಸರಬರಾಜು ಮಾಡಲು ಸಾಧ್ಯವಿರುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ, ವಿದ್ಯುತ್ ಅಭಾವವನ್ನು ಸರಿದೂಗಿಸಲೋಸುಗ ಬೆಳಿಗ್ಗೆ ೬ ಗಂಟೆಯಿಂದ ೧೨ರ ಮಧ್ಯಾಹ್ನದವರೆಗೆ ಅಥವಾ, ಮಧ್ಯಾಹ್ನ ೧೨ ರಿಂದ ಸಾಯಃಕಾಲ ೬ ಗಂಟೆಯವರೆಗೆ ವಿದ್ಯುತ್ ತಡೆಯನ್ನು ಮಾಡಲಾಗುವುದು. ಆದರೆ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕಡಿತವಿರುವುದಿಲ್ಲ. ಬೆಳಗಾಂ, ದಾವಣಗೆರೆ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯಿಂದಾಗಿ ಒಮ್ಮೊಮ್ಮೆ ಸಂಪರ್ಕವನ್ನು ಕಡಿಯಲಾಗುವುದು. ಈ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯು ಬಹಳ ಭರದಿಂದ ಸಾಗಿದ್ದು ಸಧ್ಯದಲ್ಲೇ ಪರಿಸ್ಥಿತಿಯು ಸುಧಾರಣೆಯಾಗುವ ಭರವಸೆಯಿದೆ.

ಕಾಳಿನದಿ ಜಲವಿದ್ಯುತ್ ಯೋಜನೆಯ ೨ನೇ ಹಂತದ ಕದ್ರಾ ಡ್ಯಾಮಿನ ಬಗ್ಗೆ ಟೆಂಡರ್‌ಗಳನ್ನು ಒಪ್ಪಿಕೊಳ್ಳುವುದರಲ್ಲಿ ತಡವಾಗಿರುತ್ತದೆಯೆಂದು ಸಹಾ ಶ್ರೀ ಬಂಗಾರಪ್ಪನವರು ಪ್ರಸ್ತಾಪಿಸಿರುತ್ತಾರೆ. ಯೋಜನೆಯನ್ನು ಕಾರ್ಯಗತಗೊಳಿಸಲು ಹಣದ ಅಭಾವದಿಂದ, ವಿದ್ಯುತ್ ನಿಗಮವು, ಹಣಕ್ಕಾಗಿ ಕುವೈತ್ ಫಂಡ್ ಮತ್ತು ವಿಶ್ವಬ್ಯಾಂಕುಗಳನ್ನು ಕೇಳಿಕೊಂಡಿತು. ಮತ್ತು ಈ ಎರಡು ಸಂಸ್ಥೆಗಳೊಡನೆ ಸಮಾಲೋಚನೆಯನ್ನು ಸಹಾ ವಿದ್ಯುತ್ ನಿಗಮವು ನಡೆಸಿರುತ್ತದೆ. ಈ ಸಂಸ್ಥೆಗಳು ತಾವು ಇನ್ನು ಕೆಲಸ ಶುರುವಾಗದೆಯಿರುವ ಯೋಜನೆಗಳಿಗೆ ಮಾತ್ರ ಹಣ ಒದಗಿಸುವುದಾಗಿ ಷರತ್ತು ಹಾಕಿ, ಟೆಂಡರ್ ಕಾಗದಪತ್ರಗಳನ್ನು ಈ ಸಂಸ್ಥೆಗಳು ಪರಿಶೀಲನೆ ಮಾಡಿ, ಒಪ್ಪಿಕೊಳ್ಳಲು ಸಮಯ ತೆಗೆದುಕೊಂಡಿದ್ದರಿಂದಾಗಿ ಟೆಂಡರನ್ನು ೧೯೮೪ನೇ ಇಸವಿಯಲ್ಲಿಯೇ ಪಡೆದಿದ್ದರೂ ಸಹಾ, ನಿರ್ಣಯ ತೆಗೆದುಕೊಳ್ಳುವುದರಲ್ಲಿ ತಡವಾಗಿರುತ್ತದೆ. ಕದ್ರಾ ಡ್ಯಾಮಿಗೆ ತಗಲುವ ಖರ್ಚಿನ ಪೈಕಿ ರೂಪಾಯಿ ೨೯.೧೫ ಕೋಟಿಗಳನ್ನು ಭರಿಸಲು ಕುವೈತ್ ಫಂಡ್ ಈಗ ಮುಂದೆ ಬಂದಿರುತ್ತದೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಸದರಿ ಸಂಸ್ಥೆಯು ಟೆಂಡರ್ ಕಾಗದಪತ್ರಗಳನ್ನು ಸಹಾ ಅನುಮೋದಿಸಿದ್ದು, ಸಧ್ಯದಲ್ಲಿಯೇ ಸಿವಿಲ್ ಕೆಲಸಗಳನ್ನು ವಹಿಸಿಕೊಡಲು ಒಂದು ನಿರ್ಣಯವನ್ನು ಕೈಗೊಳ್ಳಲಾಗುವುದು. ಈ ಯೋಜನೆಯನ್ನು ಶುರುಮಾಡಲು ಅರಣ್ಯ ಸಂರಕ್ಷಣೆ ಮತ್ತು ಪರಿಸರ ಕಾಯಿದೆ ೧೯೮೦ರ ಕೆಳಗೆ ಭಾರತ ಸರ್ಕಾರದಿಂದ ಅನುಮತಿ ಬೇಕಾಗಿರುತ್ತದೆ. ಈ ಬಗ್ಗೆ ಭಾರತ ಸರ್ಕಾರದೊಂದಿಗೆ ಹೆಚ್ಚಿನ

ತ್ರುದ್ಧೆಯಿಂದ ವ್ಯವಹಾರ ನಡೆಯುತ್ತಿದ್ದು, ಸಧ್ಯದಲ್ಲಿಯೇ ಪರವಾನಗೆ ಸಿಗುವ ಸಾಧ್ಯತೆಯಿರುತ್ತದೆ. ಸಮಯವನ್ನು ಉಳಿಸಲೋಸುಗ ಮೂಲ ಸೌಲಭ್ಯ ಕೆಲಸಗಳಾದ ಗೃಹನಿರ್ಮಾಣ, ಇನ್ನಿತರ ಕೆಲಸಗಳು ಈಗಾಗಲೇ ಶುರುಹಾಗಿರುತ್ತದೆ.

ಇನ್ನು ಪುನರ್ವಸತಿಯು ಬಗ್ಗೆ ಹೇಳಬೇಕಾದರೆ, ಚಕ್ರಾ ಯೋಜನೆಯಿಂದಾಗಿ ತೊಂದರೆ ಗೊಳಗಾದವರನ್ನು ಪುನರ್ವಸತಿಗೊಳಿಸಲು ಕರ್ನಾಟಕ ವಿದ್ಯುತ್ ನಿಗಮವು ಹೈಹೊಳೆ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಿದ್ದು, ಈ ಬಗ್ಗೆ ಭೂಸ್ವಾಧೀನತೆಗಾಗಿ ಪರಿಹಾರ ರೂಪದಲ್ಲಿ ೨.೭೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಭೂಮಿ ಕಳೆದುಕೊಂಡವರಿಗೆ ಹಂಚಲೋಸುಗ ೧,೨೪೦ ಎಕರೆ ಭೂಮಿಯನ್ನು ಈಗಾಗಲೇ ನಿಗದಿಪಡಿಸಲಾಗಿದ್ದು, ಕಂದಾಯ ಇಲಾಖೆಯು ಭೂಮಿಯನ್ನು ಅರ್ಹರಿಗೆ ಹಂಚುವ ಕೆಲಸವನ್ನು ಮಾಡುತ್ತದೆ. ವರಾಹಿ ಬಲವಿದ್ಯುತ್ ಯೋಜನೆಯಲ್ಲಿ ಮುಳುಗಡೆ ಯಾಗುವ ಭೂಮಿ ಹಾಗೂ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲು ವಿದ್ಯುತ್ ನಿಗಮವು ಈಗಾಗಲೇ ೯.೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಭೂಮಿ ಕಳೆದುಕೊಂಡವರಿಗೆ ಬದಲಾಗಿ ಬೇರೆ ಭೂಮಿಯನ್ನು ಮಂಜೂರು ಮಾಡಲು ಸರ್ಕಾರವು ಇತ್ತೀಚೆಗೆ ನಿರ್ಣಯ ತೆಗೆದುಕೊಂಡಿದ್ದು ಆ ರೀತಿ ಭೂಮಿಯು ಲಭ್ಯವಿಲ್ಲದೇ ಇರುವಲ್ಲಿ ಪುನರ್ವಸತಿಗಾಗಿ ಒಂದು ಕುಟುಂಬಕ್ಕೆ ೧೦ ಸಾವಿರ ರೂಪಾಯಿಂದ, ೩೫ ಸಾವಿರ ರೂಪಾಯಿಗಳವರೆಗೆ ಧನಸಹಾಯ ಮಾಡಿಕೊಡಲು ನಿರ್ಧರಿಸಲಾಗಿರುತ್ತದೆ.

ಮಾನ್ಯ ವಿರೋಧಪಕ್ಷದ ನಾಯಕರು ದಾಂಡೇಲಿ ವಯರ್‌ರಾಡ್ ಮಿಲ್ಸ್‌ಗೆ ವಿದ್ಯುತ್ ಮಂಜೂರಿ ಮಾಡಿದ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಈ ಉದ್ಯಮಕ್ಕೆ ವಿದ್ಯುಚ್ಛಕ್ತಿ ಮಂಜೂರಾತಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮತ್ತು ಇತರ ಅಧಿಕಾರಿಗಳಿರುವ ಹೈಪವರ್ ಕಮಿಟಿಯ ಶಿಫಾರಸಿನ ಮೇಲೆ ಮಾಡಲಾಗಿರುತ್ತದೆ, ಸದರಿ ಶಿಫಾರಸ್ಸಿನ ಆಧಾರದ ಮೇಲೆ ಸರ್ಕಾರವು ಈ ಉದ್ಯಮಕ್ಕೆ ಜುಲೈ ೧೯೮೬ರಿಂದ ೫೦೦೨ ಕೆವಿಎ ವಿದ್ಯುತ್‌ನ್ನು ಮತ್ತು ಡಿಸೆಂಬರ್ ೮೬ರಿಂದ ೫೦೦೦ ಕೆವಿಎ ವಿದ್ಯುತ್‌ನ್ನು ಮಂಜೂರು ಮಾಡಿ ತಾರೀಖು ೧೧-೧೦-೮೫ರಂದು ಆದೇಶವನ್ನಿತ್ತಿತು. ಯಾವ ವಿಶೇಷ ರಿಯಾಯಿತಿ ಯನ್ನು ಈ ಉದ್ಯಮಕ್ಕೆ ಕೊಟ್ಟಿರುವುದಿಲ್ಲ. ಇಂತಹ ಘಟಕಗಳಿಗೆ ಲಾಗುವಾಗುವ ಎಲ್ಲಾ ತರದ ವಿದ್ಯುತ್ ಕಡಿತಗಳು ಈ ಘಟಕಕ್ಕೂ ಲಾಗುವಾಗುತ್ತದೆ. ಉದ್ಯಮಗಳಿಗೆ ವಿಸ್ತರಣೆಗಾಗಿ ಅಥವಾ ಹೊಸದಾಗಿ ಸ್ಥಾಪಿಸಲು ವಿದ್ಯುಚ್ಛಕ್ತಿ ಕೊಡುವ ಇದೊಂದು ಸಾಮಾನ್ಯ ವಿಷಯವಾಗಿರುತ್ತದೆ.

ಇದೇ ರೀತಿಯಲ್ಲಿ ನವ ಕರ್ನಾಟಕ ಸ್ಟೀಲ್ಸ್‌ಗೆ ೧೯೮೫ರ ಜೂನ್ ತಿಂಗಳಲ್ಲಿ ೯೦೦ ಕೆವಿಎ ಹೆಚ್ಚಿನ ವಿದ್ಯುತ್‌ನ್ನು ಹೈಪವರ್ ಕಮಿಟಿಯ ಶಿಫಾರಸ್ಸಿನ ಮೇಲೆ ಕೊಡಲಾಗಿದೆಯೆಂದು ಹೇಳಬಯಸುತ್ತೇನೆ. ಮಾನ್ಯಸದಸ್ಯರಾದ ಡಿ.ಟಿ. ಜಯಕುಮಾರ್‌ರವರು ರಾಯಚೂರು ಥರ್ಮಲ್‌ಪ್ಲಾಂಟ್ ವಿದ್ಯುತ್ ಉತ್ಪಾದನೆ ಬಗ್ಗೆ ಹೇಳಿದ್ದಾರೆ. ಈಗಾಗಲೇ ಒಂದನೇ ಹಂತ ವಿದ್ಯುತ್‌ಉತ್ಪಾದನೆ ಮಾಡುತ್ತಿದೆ, ಎರಡನೆಯ ಹಂತ ಮೇ ತಿಂಗಳಿನಲ್ಲಿ ವಿದ್ಯುತ್ ಉತ್ಪಾದನೆಯನ್ನು ಶುರು ಮಾಡುತ್ತದೆಂದು ಹೇಳಬಯಸುತ್ತೇನೆ. ಮಾನ್ಯ ಅಜ್ಜಿಬಾಳ ಹೆಗಡೆಯವರು ಉತ್ತರ ಕನ್ನ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನ ಬಗ್ಗೆ ಮಾತ ನಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ ೭೦ರಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಪೂರೈಸಲಾಗಿದೆ. ಆಧ್ಯತೆಯನ್ನು ೧೯೮೮ನೇ ಇಸವಿಯೊಳಗೆ ನೂರಕ್ಕೆ ನೂರರಷ್ಟು ಅವರ ಬೇಡಿಕೆಯನ್ನು ಪೂರ್ಣಗೊಳಿಸು ತ್ತೇವೆ. ಕೈಗಾ ಅಣು ವಿದ್ಯುತ್ ಕೇಂದ್ರವನ್ನು ಕೇಂದ್ರಸರ್ಕಾರ ಮಂಜೂರಾತಿ ಮಾಡಿದ್ದು, ಈಗ ಆ ಕೆಲಸವನ್ನು ಮುಂದುವರಿಸಿಕೊಂಡು ಹೊರಟಿದ್ದೇವೆ. ಶ್ರೀಮತಿ ಸುಮ ವಸಂತರವರು ಗ್ರಾಮಾಂತರ ವಿದ್ಯುಧೀಕರಣ ಆಗಿಲ್ಲವೆಂದು ಹೇಳಿದ್ದಾರೆ, ಈಗಾಗಲೇ ಶೇಕಡ ೭೦ರಷ್ಟು ಗ್ರಾಮಾಂತರ ವಿದ್ಯುಧೀಕರಣ ಆಗಿದೆ. ಎಲ್ಲೆಲ್ಲಿ ಆಗಿಲ್ಲ ಅಲ್ಲಿ ಈ ವರ್ಷ ಹೆಚ್ಚಿನ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿ ದ್ದೇನೆ, ಮಾನ್ಯಸದಸ್ಯರುಗಳು ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿ ಇರಿಸಿಕೊಳ್ಳಲಾಗುವುದು. ಮೀಟರ್ ರೀಡಿಂಗ್ ಮೊದಲು ೬ ತಿಂಗಳಿಗೊಮ್ಮೆ ಇತ್ತು, ಅದರಿಂದ ತೊಂದರೆಯಾಗುತ್ತದೆಂದು ತಿಳಿದು ಬಂದಾಗ ೩ ತಿಂಗಳಿಗೊಮ್ಮೆ ಮೀಟರ್ ರೀಡಿಂಗ್ ಮಾಡುವಂತೆ ಆದೇಶವನ್ನು ಕೊಡಲಾಗಿದೆ, ಮಾನ್ಯ ವೆಂಕಟರಾಮಯ್ಯನವರು ಹಳ್ಳಿಗಾಡಿನ ಪ್ರದೇಶಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸರಿಯಾಗಿಲ್ಲ, ಲೈನುಗಳನ್ನು ಹಾಕಿಲ್ಲವೆಂದು ಹೇಳಿದ್ದಾರೆ, ಆ ಕೆಲಸವನ್ನು ಸದ್ಯದಲ್ಲಿಯೇ ಪ್ರಾರಂಭ ಮಾಡುತ್ತೇವೆಂದು ಅವರಿಗೆ ಹೇಳಬಯಸುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ.

ಮಾನ್‌ಸೂನ್ ಮಳೆ ಪ್ರಾರಂಭವಾದ ಮೇಲೆ ಪವರ್ ಕಟ್ ಕಡಿಮೆ ಮಾಡುತ್ತೇವೆಂದು ಹೇಳುತ್ತೇನೆ. ಮಳೆಯಾಗುತ್ತದೆ ಎನ್ನುವ ಆಶಾಭಾವನೆಯಿಂದ ಇದ್ದೇವೆ ಪವರ್‌ಕಟ್ ಮಾಡುವುದಿಲ್ಲವೆಂದು ಹೇಳುತ್ತೇನೆ.

೧೨-೦೦ ಮಧ್ಯಾಹ್ನ

ಏಕೆಂದರೆ ಈಗಾಗಲೇ ಸೂಪಾ ಡ್ಯಾಮಿನಲ್ಲಿ ೨ ಜನರೇಟರ್‌ಗಳ ಕೆಲಸ ಪೂರ್ಣಗೊಂಡಿದೆ. ಆದರೆ ಡ್ಯಾಮಿನಲ್ಲಿ ನೀರಿನ ಮಟ್ಟ ಬಹಳ ಕಡಿಮೆ ಇದೆ. ಶರಾವತಿಯ ಚಕ್ರ್ ಡೈವರ್ಷನ್ ಅಣೆಕಟ್ಟಿನ ಕೆಲಸ ಪೂರ್ಣವಾಗಿ ಮುಗಿದಿದೆ. ಮುಂದಿನ ಸಾಲಿನಲ್ಲಿ ಮಳೆ ಚೆನ್ನಾಗಿ ಬಂದರೆ ನಮಗೆ ಹೆಚ್ಚು ಅನುಕೂಲವಾಗಬಹುದೆಂಬ ನಂಬಿಕೆ ನಮಗಿದೆ. ನಮಗೆ ಪ್ರತಿ ದಿವಸ ೨೦ ಮಿಲಿಯನ್ ಯೂನಿಟ್ ವಿದ್ಯುತ್ ಬೇಕಾಗಿದ್ದು, ಅಷ್ಟನ್ನು ನಾವು ತಯಾರು ಮಾಡುವುದಕ್ಕಾಗದೇ ಇರುವುದರಿಂದ ಲೋಡ್ ಶೆಡ್ಡಿಂಗ್ ಹಾಗೂ ಪವರ್ ಕಟ್ ಮಾಡಬೇಕಾಗುತ್ತದೆ. ಇದಕ್ಕಾಗಿ ಮೂರು ಜನರ ಸಮಿತಿಯೊಂದನ್ನೂ ಕೂಡ ರಚನೆ ಮಾಡಲಾಗಿದೆ. ೧೯೮೪-೮೫ರಲ್ಲಿ ನಮ್ಮ ಬೇಡಿಕೆ ೧೧.೭೭೯ ಮಿಲಿಯನ್ ಯೂನಿಟ್ ಆಗಿದ್ದರೆ ನಾವು ಉತ್ಪತ್ತಿ ಮಾಡುವಂತಹದ್ದು ೭೭೭೨ ಮಿಲಿಯನ್ ಯೂನಿಟ್. ಇದರಿಂದ ೪೦ ಪರ್ಸೆಂಟ್ ಪವರ್ ಕಟ್ಟನ್ನು ಮಾಡಬೇಕಾಯಿತು. ಟ್ರಾನ್ಸ್‌ಮಿಷನ್ ಲಾಸನ್ನು ಕಡಿಮೆ ಮಾಡುವುದಕ್ಕಾಗಿ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆ ಬಗ್ಗೆ ೨೨೦ ಕೆ.ವಿ.ಗೆ ಸಂಬಂಧಪಟ್ಟಂತೆ ೧೩೬೦ ಕಿಲೋಮೀಟರ್ ಲೈನನ್ನು ಹಾಕಿದ್ದೇವೆ. ನಂತರ ೧೧೦ ಕೆ.ವಿ ಗೆ ಸಂಬಂಧಪಟ್ಟಂತೆ ೨೮೨ ಕಿಲೋಮೀಟರ್ ಲೈನನ್ನು ಹಾಕಿದ್ದೇವೆ. ನಂತರ ೬೬ ಕೆ ವಿ.ಗೆ ಸಂಬಂಧಪಟ್ಟಂತೆ ೪೪೧ ಕಿಲೋಮೀಟರ್ ಲೈನನ್ನು ಹಾಕಿದ್ದೇವೆ. ೩೩ ಕೆ.ವಿ.ಗೆ ಸಂಬಂಧಪಟ್ಟಂತೆ ೫೮೭ ಕಿಲೋಮೀಟರ್ ಲೈನನ್ನು ಹಾಕಿದ್ದೇವೆ. ಸ್ವಲ್ಪ ಮಟ್ಟಿಗೆ ಟ್ರಾನ್ಸ್‌ಮಿಷನ್ ಲಾಸ್ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ನಮ್ಮ ಎಲ್ಲ ವಿದ್ಯುತ್ ಯೋಜನೆಗಳು ಪಶ್ಚಿಮ ಘಟ್ಟದಲ್ಲೇ ಇರುವುದರಿಂದ, ಅಲ್ಲಿಂದ ಬೆಂಗಳೂರಿನವರೆಗೆ ಬರಬೇಕಾದರೆ ಟ್ರಾನ್ಸ್‌ಮಿಷನ್ ಲಾಸ್ ೨೨ ಪರ್ಸೆಂಟ್ ಆಗುತ್ತದೆ. ಕೆಲವೊಂದು ಐ.ಪಿ.ಸೆಟ್, ಗೃಹ ವಿದ್ಯುತ್ ಬಳಕೆ ಹೆಚ್ಚಾಗಿ ಆಗಿರುವುದರಿಂದ, ಇದನ್ನು ಗಣನೆಗೆ ತೆಗೆದುಕೊಳ್ಳುವುದಕ್ಕಾಗಿಲ್ಲ. ನಂತರ ಬೆಂಗಳೂರಿನಲ್ಲಿ ೪ ಡೀಸಲ್ ಜನರೇಟರ್‌ಗಳನ್ನು ಅಳವಡಿಸಬೇಕೆಂಬುದರ ಬಗ್ಗೆ ನಾವು ಈಗಾಗಲೇ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಕೆ.ಇ.ಬಿ.ಯವರು ಕೈಗಾರಿಕೋದ್ಯಮಿಗಳ ಸಹಕಾರದಿಂದ ಕೈಗಾರಿಕೆಗಳಿಗೆ ಸಹಾಯ ಮಾಡುವ ಸಲುವಾಗಿ ಗ್ಯಾಸ್ ಟರ್‌ಬೈನ್ ಡೀಸಲ್ ಜನರೇಟರುಗಳನ್ನು ಹಾಕುವುದಕ್ಕಾಗಿ ೮೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನೂ ಕೂಡ ಹಾಕಿಕೊಂಡಿದ್ದಾರೆ. ಆ ಬಗ್ಗೆ ಯಂತ್ರಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರ್‌ನ್ನೂ ಸಹ ಹೊರಡಿಸಲಾಗಿದೆ. ಸಂಬಂಧಪಟ್ಟ ಸರಬರಾಜು ಸಂಸ್ಥೆಗಳ ಜೊತೆ ಪತ್ರ ವ್ಯವಹಾರ ನಡೆಸುತ್ತಿದ್ದಾರೆ. ಸೋಲಾರ್ ಎನರ್ಜಿಯನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪ್ರಾರಂಭದಲ್ಲಿ ಶಾಸಕರ ಭವನದ ಮೇಲೆ ೨೫ ಲಕ್ಷ ರೂಪಾಯಿಗಳ ಯೋಜನೆಯನ್ನು ಪ್ರಾರಂಭ ಮಾಡಿ ಪ್ರಾಯೋಗಿಕವಾಗಿ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ. ಇದರಿಂದಾಗಿ ಶಾಸಕರ ಭವನದಲ್ಲಿ ೨೦ ಸಾವಿರ ಲೀಟರ್ ನೀರನ್ನು ಕಾಯಿಸುವುದಕ್ಕೆ ಅನುಕೂಲವಾಗುತ್ತದೆಂದು ವರದಿಯನ್ನೂ ಕೂಡ ಆ ಬಗ್ಗೆ ಕೊಟ್ಟಿದ್ದಾರೆ. ಅದೇರೀತಿ ವಿಕ್ಟೋರಿಯ ಆಸ್ಪತ್ರೆಯಲ್ಲೂ ಈ ಒಂದು ಯೋಜನೆಯನ್ನು ಜಾರಿಗೆ ತರುತ್ತೇವೆ. ಮಾನ್ಯ ಸದಸ್ಯರೊಬ್ಬರು ಕೈಗಾ ಅಣು ವಿದ್ಯುತ್ ಸ್ಥಾವರವನ್ನು ಬಿಟ್ಟುಬಿಡಬೇಡಿ ಎಂದು ಕೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಬೇಡ್ತಿ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ ಅವರಿಂದ ವರದಿ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಇನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಗ್ಗೆ ಹೇಳುವುದಾದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಗ್ಗೆ ಶ್ರೀ ಅಜ್ಜಿಬಾಳ ಹೆಗ್ಗಡೆಯವರು ಮಾತನಾಡುತ್ತಾ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಗತಗೊಳಿಸುತ್ತಿರುವ ಜಲ ವಿದ್ಯುತ್ ಯೋಜನೆಗಳ ಜಲಾಶಯಗಳಲ್ಲಿ ಅದಿರುಗಳು ಮುಳುಗಿ ಹೋಗುತ್ತಿದ್ದು ಅವುಗಳನ್ನು ಮುಳುಗುವ ಮೊದಲೇ ತೆಗೆಯಲು ಅನುಕೂಲವಾಗುವಂತೆ ಗಣಿ ಗುತ್ತಿಗೆಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಮುಳುಗಡೆ ಪ್ರದೇಶದಲ್ಲಿ ಗುತ್ತಿಗೆಗಳನ್ನು ಆದಷ್ಟು ಬೇಗನೆ ಕೊಡಬೇಕು. ಮತ್ತು ನವೀಕರಿಸಬೇಕೆಂಬುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದ್ದು, ಅರಣ್ಯ ಸಂರಕ್ಷಣೆ ಮತ್ತು ಪರಿಸರ ಕಾಯಿದೆ ೧೯೮೦ ರ ಪ್ರಕಾರ ಅರಣ್ಯ ಪ್ರದೇಶಗಳಲ್ಲಿ ಗಣಿ ಗುತ್ತಿಗೆಯನ್ನು ಕೊಡಬೇಕಾದಲ್ಲಿ ಕೇಂದ್ರ ಸರ್ಕಾರದ ಪರವಾನಗಿ ಬೇಕಾಗಿರುವುದರಿಂದಾಗಿ ಗಣಿ ಗುತ್ತಿಗೆಯನ್ನು

ಕೊಡಲು ತಡವಾಗುತ್ತಿದೆ. ಇನ್ನು ಮುಂದೆ ಆ ರೀತಿ ತಡವಾಗದಂತೆ ಮಾಡಲು ಈಗಾಗಲೇ ಈ ವಿಚಾರದ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಲಾಗಿದೆ. ಆದಷ್ಟು ಬೇಗನೆ ಪರಿಹಾರ ಸಿಗುವ ವ್ಯವಸ್ಥೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ. ಉತ್ತರ ಕನ್ನಡ ಜಿಲ್ಲೆಯ ಕೊಳವೆ ಬಾವಿಗಳನ್ನು ತೋಡುವ ಬಗ್ಗೆಯೂ ಮಾನ್ಯ ಸದಸ್ಯರು ಹೇಳಿದ್ದಾರೆ. ಬಾವಿಗಳನ್ನು ತೋಡುವುದು ನಮ್ಮ ಇಲಾಖೆಯ ಕಾರ್ಯ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೆ ಬಾವಿಗಳಿಗಾಗಿ ಜಾಗಗಳನ್ನು ಆಯ್ಕೆ ಮಾಡುವಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯ ಬಾವಿಗಳಿಗಾಗಿ ಬಹಳ ಪ್ರಾಮುಖ್ಯ ಕೊಡಲಾಗಿದೆ. ಅಲ್ಲದೆ ಈ ಬಗ್ಗೆ ಇಲಾಖೆಯು ಯೋಜನೆಯನ್ನು ತಯಾರಿಸಿಕೊಂಡು ಪ್ರಗತಿಯನ್ನು ಸಾಧಿಸಿದೆ ಎಂಬುದಾಗಿಯೂ ಹೇಳುತ್ತಿದ್ದೇನೆ. ಮೈಸೂರು ಮಿನರಲ್ಸ್ ಲಿಮಿಟೆಡ್‌ನ ತಾಂತ್ರಿಕ ನಿರ್ದೇಶಕರು ಅವ್ಯವಹಾರಗಳನ್ನು ಮಾಡಿರುತ್ತಾರೆ. ಈ ಬಗ್ಗೆ ಸದನದ ಸಮಿತಿಯಿಂದ ತನಿಖೆ ಮಾಡಿಸಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಕೆ. ಬಿ. ಶ್ಯಾನಪ್ಪನವರು ಹೇಳಿದ್ದಾರೆ. ತಾಂತ್ರಿಕ ನಿರ್ದೇಶಕರು ಯಾವ ರೀತಿ ಅವ್ಯವಹಾರ ಮಾಡಿರುತ್ತಾರೆಂದು ಅವರು ತಿಳಿಸಿರುವುದಿಲ್ಲ. ಅವರ ಬಗ್ಗೆ ನಿರ್ದಿಷ್ಟವಾದ ಆಪಾದನೆಗಳನ್ನು ತಿಳಿಸಿದಲ್ಲಿ ಅವರ ಮೇಲೆ ಯೋಗ್ಯ ಕ್ರಮ ಕೈಗೊಳ್ಳುತ್ತೇನೆಂದು ಹೇಳಬಯಸುತ್ತೇನೆ. ಗಣಿ ಗುತ್ತಿಗೆಯನ್ನು ನೀಡುವಲ್ಲಿ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ಗಣಿ ಗುತ್ತಿಗೆಯನ್ನು ಬೇರೆಯವರ ಹೆಸರಿನಲ್ಲಿ ತೆಗೆದುಕೊಂಡು ತಾವೇ ನಡೆಸುತ್ತಿದ್ದಾರೆಂದು ಅಪಾದನೆ ಮಾಡಿದ್ದಾರೆ ಮಾನ್ಯ ಶ್ಯಾನಪ್ಪನವರು. ಈವರೆವಿಗೆ ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ ಒಂದು ಪಕ್ಷ ನಿರ್ದಿಷ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ, ಅಂತಹ ಗಣಿ ಗುತ್ತಿಗೆಗಳನ್ನು ರದ್ದುಪಡಿಸುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆಂದು ಹೇಳುತ್ತೇನೆ. ಮತ್ತೆ ಇಲಾಖೆಯ ವಾರ್ಷಿಕ ವರದಿಯ ಬಗ್ಗೆ ಮಾತನಾಡುತ್ತಾ, ಕೇವಲ ೮ ಪುಟಗಳಲ್ಲಿ ಇಲಾಖೆಯ ವಾರ್ಷಿಕ ವರದಿಯನ್ನು ಕೊಟ್ಟಿದ್ದೀರಿ ಎಂಬುದಾಗಿ ಹೇಳಿದರು. ಈ ಇಲಾಖೆ ಒಂದು ಸಣ್ಣ ಇಲಾಖೆಯಾಗಿದ್ದರೂ, ಅದರಿಂದ ರಾಜ್ಯಕ್ಕೆ ಹೆಚ್ಚು ಉತ್ಪನ್ನ ಬರುವುದಾದರೂ ಸಹ ಕಾರ್ಯಕ್ರಮಗಳು ಬಹಳ ಮಿತವಾಗಿರುತ್ತವೆ. ಆದರೂ ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ರಾಜ್ಯದಲ್ಲಿರುವ ಚಿನ್ನದ ಗಣಿಗಳನ್ನು ಅಭಿವೃದ್ಧಿಪಡಿಸಬೇಕೆಂದು ಸಹ ಅವರು ಸೂಚಿಸಿದ್ದಾರೆ. ಈ ಬಗ್ಗೆ ೫ ವರ್ಷಗಳ ಯೋಜನೆಯನ್ನು ಮಾಡಿಕೊಂಡು ಕೇಂದ್ರ ಸರ್ಕಾರದ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದವರು ಚಿನ್ನದ ಅದಿರಿಗಾಗಿ ಅನ್ವೇಷಣೆಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಹಯೋಗದೊಂದಿಗೆ ನಡೆಸುತ್ತಿದ್ದಾರೆ. ಈ ಬಗ್ಗೆ ಅನ್ವೇಷಣೆ ಇನ್ನೂ ನಡೆದಿದ್ದು ಉತ್ತಮ ಅದಿರು ದೊರಕಿದಲ್ಲಿ ಅದನ್ನು ಅಭಿವೃದ್ಧಿಪಡಿಸಲಾಗುವುದೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಕೆಲವೊಂದು ಟೀಕೆಗಳನ್ನೂ ಮಾಡಿದ್ದಾರೆ. ಜೊತೆಗೆ ಕೆಲವು ಉತ್ತಮವಾದ ಸಲಹೆಗಳನ್ನೂ ಕೂಡ ಮಾಡಿದ್ದಾರೆ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿವಸಗಳಲ್ಲಿ ಎಲ್ಲವನ್ನೂ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಾ, ನಾನು ಹೊಸಬ. ಏನಾದರೂ ತಪ್ಪುಗಳು ಇದ್ದರೆ ಕ್ಷಮಿಸಬೇಕು. ಈ ಬೇಡಿಕೆಗಳ ಬಗ್ಗೆ ಇನ್ನು ಹೆಚ್ಚಿನ ಚರ್ಚೆಗೆ ಅವಕಾಶ ಕೊಡದೆ ಆದಷ್ಟು ಜಾಗ್ರತೆ ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಇದಕ್ಕೆ ವಿವರಣೆ ಬೇಕಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಸಚಿವರು ಏನು ಉತ್ತರ ಕೊಟ್ಟಿದ್ದಾರೆ ಅದರಿಂದ ಸಮಾಧಾನವಾಗಿದೆ ಅಥವಾ ಬಿಟ್ಟಿದೆ ಎಂದು ಅಲ್ಲ. ಅದರ ಬಗ್ಗೆ ಇನ್ನು ಯಾವುದೇ ಪ್ರಶ್ನೆಯನ್ನು ಕೇಳಬಾರದೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ. ಬಿ ಶಾಣಪ್ಪ.— ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿದ್ದರೆ ನಾವು ಅವರನ್ನು ಹೊಗಳಲೇಬೇಕು. ನಾವು ಸರಿಯಾದ ಡಾಕ್ಯುಮೆಂಟ್ಸ್ ಕೊಟ್ಟರೆ ಜುಡಿಶಿಯಲ್ ಎನ್‌ಕ್ವೈರಿ ಮಾಡುತ್ತೇವೆ ಅಥವಾ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನಾನು ಕರಪ್ಷನ್ ಅನ್ನು ಅವಾಯ್ಡ್ ಮಾಡಬೇಕೆಂದು ಹೇಳಿದ್ದೆ. ಇದರ ಬಗ್ಗೆ ಮಂತ್ರಿಗಳು ಹೇಳಬೇಕು.

ಶ್ರೀ ಜೆ. ಎಸ್ ದೇಶಮುಖ್.— ಅವರ ಹೆಸರು ಗೊತ್ತಿಲ್ಲ. ಯಾರೋ ಕೃಷ್ಣಮೂರ್ತಿ ಎಂಬುವರ ಮೇಲೆ ಆಪಾದನೆ ಇತ್ತು. ಅದನ್ನು ಅಂಡರ್‌ಟೇಕಿಂಗ್ ಕಮಿಟಿಗೆ ಹಾಕಿದ್ದೇವೆ. ಅವರು

೫೦ ಲಕ್ಷ ರೂಪಾಯಿ ಆಸ್ತಿ ಮಾಡಿದ್ದಾರೆಂದು ಸಾಬೀತು ಮಾಡದಿದ್ದರೆ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಆ ಬಗ್ಗೆ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ.

ಅಧ್ಯಕ್ಷರು.— ಹೊಸಬರು ಯಾರಾದರೂ ಕ್ಲಾರಿಫಿಕೇಷನ್ ಕೇಳುವುದಿದ್ದರೆ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುವುದು ಸರಿಯಿಲ್ಲ. ನಾವು ಯಾರೂ ಕೇಳುವುದಿಲ್ಲವೆಂದು ಹೇಳಿದ್ದೇವೆ. ಯಾರಾದರೂ ಪ್ರಶ್ನೆ ಕೇಳಿದರೆ ಮಾತನಾಡಿದರೆ ಸಾಕು,—ನಿಲ್ಲಿಸಿ ಎಂದು ಹೇಳುತ್ತಿದ್ದವರು ಈಗ ಏಕೆ ಕೇಳಿ ಎಂದು ಹೇಳುತ್ತಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.— ಬಂಗಾರಪ್ಪನವರು ದೊಡ್ಡ ಮಾತು ಹೇಳಿದ್ದಾರೆ. ಆ ಮಾತು ಹೇಳಿದ್ದರ ಉದ್ದೇಶವೇನೆಂದರೆ ನಾವು ಕೇಳಿದ್ದಕ್ಕೆ ಅವರು ಉತ್ತರಿಸದಿದ್ದರೆ ನಾವು ಏತಕ್ಕೆ ಕೇಳಬೇಕು ಎಂದು. ನಾನು ಆಗಲೇ ಹೆಗಡೆಯವರಿಗೆ ಹೇಳಿದೆ, ಅವರು ಹೇಳುವುದನ್ನೆಲ್ಲ ಹೇಳಲಿ, ಉಳಿದದ್ದನ್ನು ನೀವು ಹೇಳಿ ಎಂದು. ದಯಮಾಡಿ ಈಗ ನೀವು ಹೇಳಿ.

ಅಧ್ಯಕ್ಷರು.— ಇಲ್ಲಿಗೆ ದೇಶಮುಖ್ ಅವರ ಉತ್ತರ ವಿವರಣೆ ಎಲ್ಲ ಮುಗಿಯಿತು. ಈಗ ಮುಖ್ಯ ಮಂತ್ರಿಗಳಿಂದ ಉತ್ತರ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) — ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನನ್ನ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ದೀರ್ಘವಾಗಿ ಚರ್ಚೆಯಾಗಿದೆ ಎಂದು ಹೇಳಬಹುದು, ಅದೂ ಇದ್ದಂಥ ಅಲ್ಪ ಸಮಯದಲ್ಲಿ. ಈ ಚರ್ಚೆಯಲ್ಲಿ ನಾವು ನೋಡಿದಂಥ ಒಂದು ವೈಶಿಷ್ಟ್ಯ ಏನೆಂದರೆ ನಮ್ಮ ಪಕ್ಷದ ಸದಸ್ಯರು ಭಾಗವಹಿಸಿದ್ದು ಕೇವಲ ನಿಮಿತ್ತ ಮಾತ್ರಕ್ಕೆ. ಈ ಚರ್ಚೆಯ ಸಿಂಹಪಾಲು ಸಮಯ ವಿರೋಧ ಪಕ್ಷದಲ್ಲಿರತಕ್ಕ ಮಾನ್ಯ ಸದಸ್ಯರಿಗೆ ಹೋಗಿದೆ. ವಿರೋಧ ಪಕ್ಷದ ಅತಿರಥ ಮಹಾರಥರೆಲ್ಲರೂ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ವಿರೋಧ ಪಕ್ಷದ ನಾಯಕರಾದಿಯಾಗಿ ಶ್ರೀಮತಿ ನಾಗರತ್ನಮ್ಮ, ಶ್ರೀ ಮೊಯಿಲಿ, ಶ್ರೀ ಪಾಟೀಲ್, ಶ್ರೀ ಬಸವಲಿಂಗಪ್ಪ ಶ್ರೀ ಧರ್ಮಸಿಂಗ್ ಮತ್ತು ಇನ್ನೂ ಇತರರು ಭಾಗವಹಿಸಿದ್ದಾರೆ. ಈ ಚರ್ಚೆಯಲ್ಲಿ ನಾನು ನೋಡಿದಂಥ ಮತ್ತೊಂದು ವೈಶಿಷ್ಟ್ಯ ಏನೆಂದರೆ ವಿಷಯಗಳ ಮೇಲೆ ಹೆಚ್ಚಾಗಿ ಮಾತನಾಡದೆ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ, ವಿಷಯಗಳನ್ನು ಬಿಟ್ಟು ವೈಯಕ್ತಿಕವಾದ ಆಪಾದನೆಗಳ ಬಗ್ಗೆ ಅವರು ಸಮಯವನ್ನು ತೆಗೆದುಕೊಂಡಿದ್ದಾರೆ. ವಿರೋಧ ಪಕ್ಷದ ನಾಯಕರೂ ಆ ಒಂದು ಅಗೌರವಕ್ಕೆ ಅಥವಾ ಚಾಪಲ್ಯಕ್ಕೆ ಕೊನೆಗೂ ಒಳಗಾದರು. ಒಂದು ದೊಡ್ಡ ಸಿದ್ಧಾಂತದ ಮಾತನ್ನು ನಾನು ಇಲ್ಲಿ ಹೇಳುವುದಿಲ್ಲ. ಅಥವಾ ಈ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರು ಅದರಲ್ಲೂ ಎದುರುಗಡೆ ಇರತಕ್ಕ ಸದಸ್ಯರು ಸಭೆಯ ನಡವಳಿಕೆಗಳಿಗೆ ಅಥವಾ ತಮ್ಮ ಜವಾಬ್ದಾರಿಗೆ ಹೊಸಬರು ಎಂದು ಹೇಳುತ್ತಿಲ್ಲ ಅಥವಾ ವಿಶೇಷವಾದ ಮಾತೂ ಇದಲ್ಲ, ಆದರೆ ಒಂದು ವಿಚಾರವನ್ನು ಈ ಸಭೆಯ ನಡವಳಿಕೆಯಲ್ಲಿ ಭಾಗವಹಿಸಿದಾಗ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಅದನ್ನು ಜಾರಿಯಲ್ಲಿ ತರತಕ್ಕ ಪ್ರಯತ್ನ ಮಾಡಬೇಕು. ಪ್ರತಿಯೊಂದು ನಿಮಿಷವೂ ನಾವು ಇಲ್ಲಿ ಖರ್ಚು ಮಾಡತಕ್ಕದ್ದು ಮಹತ್ತರವಾದದ್ದು ಎಂದು ನನ್ನ ಅಭಿಪ್ರಾಯ. ಮತ್ತು ನಾವು ಏನು ಇಲ್ಲಿ ಕಾಲವನ್ನು ಖರ್ಚು ಮಾಡುತ್ತೇವೆ ಅದಕ್ಕೆ ಜನತೆಯ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಯಾವ ವಿಚಾರವನ್ನು ಎಷ್ಟರಮಟ್ಟಿಗೆ ಪ್ರಸ್ತಾಪ ಮಾಡಬೇಕು, ಯಾವ ವಿಚಾರಕ್ಕೆ ಎಷ್ಟರಮಟ್ಟಿಗೆ ಮಹತ್ವವನ್ನು ಕೊಡಬೇಕು ಹಾಗೂ ಯಾವ ವಿಚಾರವನ್ನು ಪ್ರಶ್ನೆ ಮುಖಾಂತರ ಇಲ್ಲಿ ಪ್ರಶ್ನೆ ಮಾಡಬೇಕು, ಯಾವ ವಿಚಾರವನ್ನು ಭಾಷಣ ರೂಪದಲ್ಲಿ ಹೇಳಬೇಕು ಎಂಬುದರ ಬಗ್ಗೆ ನಮಗೆ ಸ್ಪಷ್ಟವಾದ ಕಲ್ಪನೆ ಇರತಕ್ಕದ್ದು ಅಗತ್ಯವೆಂದು ನನ್ನ ಭಾವನೆ. ಹಾಗಿದ್ದರೆ ನಾವು ಸಭೆಯ ಪ್ರತಿಯೊಂದು ನಿಮಿಷವನ್ನೂ ಉಪಯುಕ್ತ ಮತ್ತು ಉತ್ಪಾದಕ ರೀತಿಯಲ್ಲಿ ಖರ್ಚು ಮಾಡಿದಂತಾಗುತ್ತದೆ. ಮೊಟ್ಟಮೊದಲಿಗೆ ವಿರೋಧ ಪಕ್ಷದ ನಾಯಕರ ಭಾಷಣವನ್ನು ಪ್ರಸ್ತಾಪಕ್ಕೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಅವರ ಭಾಷಣ ಎಲ್ಲಕ್ಕಿಂತ ದೀರ್ಘವಾಗಿರುವುದರಿಂದ ಕೊನೆಗೆ ಬರುತ್ತೇನೆ. ಇನ್ನಿತರ ಮಾನ್ಯ ಸದಸ್ಯರು ವ್ಯಕ್ತ ಮಾಡಿದಂತ ಎಲ್ಲ ವಿಚಾರಗಳ ಬಗ್ಗೆ ಉತ್ತರಿಸತಕ್ಕದ್ದು ಸಾಧ್ಯವಿಲ್ಲ. ಆದರೂ ಕೆಲವು ಮಹತ್ವದ ವಿಚಾರಗಳ ಬಗ್ಗೆ ಉತ್ತರ ಕೊಡಲಿಕ್ಕೆ ಬಯಸುತ್ತೇನೆ. ನಾಯಕ್ ಅವರು ತಮ್ಮ ಭಾಷಣದ ಕೊನೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸಿ ಕುಮಟದಲ್ಲಿರತಕ್ಕ ಟೀಚರ್ಸ್ ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಾಲ್ ಮೇಲೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಅದನ್ನು ಟೀಕೆ ಮಾಡಿ ಇದರಿಂದ ಬಹಳ ಅನ್ಯಾಯವಾಗಿದೆ ಮತ್ತು ಸರ್ಕಾರ ಅನವಶ್ಯಕವಾಗಿ ಇದರಲ್ಲಿ ಕೈಹಾಕಿದೆ

ಎಂದು ಹೇಳಿದರು. ಅವರ ವಿಚಾರದಲ್ಲಿ ಆಗಿರತಕ್ಕ ಸಮಾಚಾರ ಇಷ್ಟೇ, ಕೆಲವು ದಿವಸಗಳ ಹಿಂದೆ ನನಗೆ (೨೮–೨–೮೬ ರಂದು) ಆ ಸಂಸ್ಥೆಯಲ್ಲಿ ತರಬೇತಿ ಹೊಂದುತ್ತಿರತಕ್ಕ ವಿದ್ಯಾರ್ಥಿನಿಯರ ಒಂದು ಅರ್ಜಿ ಬಂತು. ಆ ಅರ್ಜಿಗೆ ಸಹಿ ಹಾಕಿದವರ ಒಟ್ಟು ಸಂಖ್ಯೆ ೩೫. ಅದರಲ್ಲಿ ಜಾನಕಿ, ಭಾರತಿ, ಮಾಲಿನಿ, ಪದ್ಮಾವತಿ, ವನಿತಾ, ಶಾಂತವೇರಿ, ಮಂಗಳ, ನಾಗರತ್ನ ಮೊದಲಾದ ಒಟ್ಟು ೪೦ ಮಂದಿ ವಿದ್ಯಾರ್ಥಿನಿಯರು ಸಹಿ ಹಾಕಿದ್ದಾರೆ.

ಆ ಅರ್ಜಿಯಲ್ಲಿ ಬಹಳ ಗುರುತರವಾದಂತಹ ಆಪಾದನೆಗಳನ್ನು ಆ ಶಿಕ್ಷಕ ತರಬೇತಿ ಸಂಸ್ಥೆಯ ಪ್ರಿನ್ಸಿಪಾಲ್ ಆಗಿರುವ ಶ್ರೀ ಎಂ.ಟಿ. ನಾಯಕ್‌ರವರ ಮೇಲೆ ಮಾಡಿದ್ದಾರೆ. ಅದನ್ನು ಲಿಖಿತ ಮೂಲಕ ಕೊಟ್ಟಿದ್ದಾರೆ. ಅದು ಬಹಳ ದೀರ್ಘವಾಗಿದೆ, ಅದನ್ನು ಇಲ್ಲಿ ಓದುವುದಿಲ್ಲ. ಅವರು ಮಾಡಿರತಕ್ಕಂತಹ ಆಪಾದನೆಗಳಲ್ಲಿ ೩–೪ನ್ನು ಮಾತ್ರ ಇಲ್ಲಿ ಓದುತ್ತೇನೆ. ಇಲ್ಲಿ ನಾಲ್ಕೈದು ಜನ ಮಹಿಳಾ ಸದಸ್ಯರಿದ್ದಾರೆ. ಸತೀಶ್ ನಾಯಕ್ ಎಂಬ ಮಾಸ್ಟರವರನ್ನು ಎಲ್.ಟಿ.ಸಿ.ಗೆ ಕಳಿಸಿ ಅವನ ಹೆಂಡತಿಯ ಮೇಲೆ ಬಲಾತ್ಕಾರ ಮಾಡಲು ಯತ್ನಿಸಿದ್ದು ಸತ್ಯಸಂಗತಿ ದಿನಾಂಕ ೨೧–೧–೮೬ ರಂದು ಅಘನಾಶಿನಿ ಹಳ್ಳಿ ಕ್ಯಾಂಪಿನಲ್ಲಿ ಸ್ಥಳೀಯ ಶಿಕ್ಷಕನಾದ ಪಟಗಾರ ಮಾಸ್ಟರನ್ನು ಶಿಬಿರದಲ್ಲೇ ಬಿಟ್ಟು ತಾನು ಅವರ ಮನೆಯಲ್ಲಿ ಮಲಗಿದ್ದು ಕಾಲೇಜ್ ಹಾಸ್ಟೆಲ್‌ನ್ನು ಗೆಸ್ಟ್ ರೂಮ್ ಆಗಿ ಮಾಡಿಕೊಂಡು ತನ್ನಂತಹ ವ್ಯಭಿಚಾರಿ ಗೆಳೆಯರಿಗೆ ಕೊಡುವುದು, ಕಾಲೇಜಿಗೆ ಸಂಬಂಧಪಡದ ೧೮ ವರ್ಷದ ಪ್ರಾಯದ ಹುಡುಗಿಯರನ್ನು ಟೈಪ್ ಮಾಡಿಸುವ ನೆಪದಿಂದ ಇಡೀ ದಿನ ಬಾಗಿಲು ಬಡಿದೇ ಇರುವುದು ಮತ್ತು ತನ್ನ ಗೆಳೆಯರೊಡನೆ ಅವಳ ಮನೆಗೆ ಹೋಗುವುದು, ಕೆಲವು ಹೆಣ್ಣು ಮಕ್ಕಳಿಗೆ ಪಾಠದ ಟಿಪ್ಪಣಿಗೆ ಸಹಿ ಹಾಕಲು ಶನಿವಾರ ಅಥವಾ ರವಿವಾರ ಬಾ ಎಂದು ಹೇಳಿ ಅವರು ಅಲ್ಲಿಗೆ ಹೋದಾಗ ಅಸಹ್ಯ ಚೇಷ್ಟೆಯಿಂದ ಬಲತ್ಕಾರ ಮಾಡುವುದು, ಹುಡುಗಿಯರಿಗೆ ನಿಮ್ಮ ಹಾಡುವಿಕೆ ಚೆನ್ನಾಗಿದೆ ರೆಕಾರ್ಡ್ ಮಾಡುವೆನೆಂದು ಕರೆದು ಹೋದಾಗ ಬೇಟೆಗೆ ಬಂದವನಂತೆ ವರ್ತಿಸುವುದು, ವಿದ್ಯಾರ್ಥಿನಿಯರಿಗೆ ಒಬ್ಬರೇ ಬರಬೇಕು ಎಂದು ಹೇಳಿ ತನಗೆ ಅನಿಸಿ ನಿಲ್ಲಬೇಕು, ತನ್ನೊಡನೆ ತಾನು ಬಯಸಿದ್ದನ್ನು ಮಾಡಬೇಕು ಎಂದೆಲ್ಲಾ ಹೇಳುವುದು. ಟಿ.ಸಿ.ಹೆಚ್. ನಲ್ಲಿರುವ ರಾಜೇಶ್ವರಿ, ದೇವರಬಾವಿ ಎನ್ನುವ ಹುಡುಗಿಯನ್ನು ಕರೆದುಕೊಂಡು ಬಂದು ತನ್ನ ಹತ್ತಿರ ನಿಲ್ಲಿಸಿಕೊಂಡು ವಿವಿಧ ಚೇಷ್ಟೆ ಮಾಡುವುದು, ಆಮೇಲೆ ಇನ್ನು ಹೇಳುವುದಿಲ್ಲ. ನನಗೆ ಲಿಖಿತವಾಗಿ ಇಷ್ಟು ಜನರು ಸಹಿ ಮಾಡಿ ಕಳಿಸಿದಾಗ, ಅದರ ಮೇಲೆ ತಕ್ಷಣ ಆರ್ಡರ್ ಮಾಡಿದೆ, ಕಮಿಷನರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಗೆ ಕೂಡಲೆ ಅವಶ್ಯಕ ಕ್ರಮ ತೆಗೆದುಕೊಳ್ಳಬೇಕು ಎಂದು. ಅದು ನಮ್ಮ ಆಫೀಸಿನಿಂದ ಕಮಿಷನರ್‌ರವರಿಗೆ ಹೋಯಿತು. ಅಲ್ಲಿಂದ ಸ್ವಲ್ಪ ಮಟ್ಟಿಗೆ ಯಾವ ರೀತಿಯಾದ ಸಂಪೂರ್ಣವಾದಂತಹ ತನಿಖೆಯನ್ನು ಮಾಡಿಲ್ಲ, ಅಲ್ಲಿಂದ ವಿವರಣೆ ಬಂದ ಮೇಲೆ ಕನಿಷ್ಟ ಮಟ್ಟದ ಶಿಕ್ಷೆಯನ್ನು ಅವರಿಗೆ ನೀಡಿದೆ, ಅದು ಏನೆಂದರೆ, ರಜೆಯ ಮೇಲೆ ಹೋಗಿ ಎಂದು ಹೇಳಿದೆ. ಇಂತಹವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಇಂತಹವರನ್ನು ಡಿಸ್‌ಮಿಸ್ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಎನ್‌ಕ್ವೈರಿಯಾಗಿ ಸತ್ಯ ಸಂಗತಿಯು ಪೂರ್ತಿ ತಿಳಿಯುವಿಕೆ ಅಥವಾ ವಿವರ ಗೊತ್ತಿಲ್ಲದೆ ಯಾವುದೇ ಒಂದು ಮೂಲದಿಂದ ಬಂದಂತಹ ಮಾಹಿತಿಯನ್ನು ಅನುಸರಿಸಿ ಮಾನ್ಯ ಸದಸ್ಯರು ಇಲ್ಲಿ ಅಂತಹ ವಿಚಾರವನ್ನು ಪ್ರಸ್ತಾಪ ಮಾಡಿದರೆ, ಜನರ ಮೇಲೆ ಅದರ ಪರಿಣಾಮ ಬೇರೆ ರೀತಿಯಾಗುತ್ತದೆ. ಮಾನ್ಯ ಬಂಗಾರಪ್ಪನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಅವರ ಭಾಷಣದ ಬಗ್ಗೆ ಆಮೇಲೆ ಬರುತ್ತೇನೆ. ಬನವಾಸಿಯಲ್ಲಿ ಸಿರಸಿ ಲ್ಯಾಂಡ್ ಟ್ರಿಬ್ಯುನಲ್ ಜಮೀನಿನ ವಿಚಾರದಲ್ಲಿ ಒಂದು ತೀರ್ಮಾನ ಮಾಡಿ ಬಾಂಬೆಯಲ್ಲಿ ವಾಸಮಾಡತಕ್ಕಂತಹ ರಿಟೈರ್ಡ್ ಇನ್‌ಕಂ ಟ್ಯಾಕ್ಸ್ ಆಫೀಸರ್‌ರವರು ಸಾಗುವಳಿ ಮಾಡುತ್ತಿದ್ದಾರೆಂದು ಹೇಳತಕ್ಕಂತಹ ತೀರ್ಮಾನವನ್ನು ಕೊಟ್ಟಿದೆ ಎಂದು ಹೇಳಿದರು. ಅದನ್ನು ನಾನು ಕೂಡಲೇ ತರಿಸಿದೆ. ಇದರಲ್ಲಿ ಸತ್ಯಾಂಶವಿದೆ. ಹಿಂದೆ ಈ ಲ್ಯಾಂಡ್ ಟ್ರಿಬ್ಯುನಲ್‌ನವರು ಅಲ್ಲಿ ಇರತಕ್ಕಂತಹ ಒಬ್ಬ ಮಹಿಳೆಯ ವಿಚಾರದಲ್ಲಿ ಆಕೆ ಈ ಜಮೀನಿನ ರೈತ ಎಂದು ನಿರ್ಣಯ ಕೊಟ್ಟಿದ್ದರು. ಅದಾದ ಮೇಲೆ ಇದರ ಮಾಲೀಕ ಹೈಕೋರ್ಟಿಗೆ ಬಂದು ರಿಟ್ ಹಾಕಿದರು. ಹೈಕೋರ್ಟಿನಲ್ಲಿ ಇದನ್ನು ಟೆಕ್ನಿಕಲ್ ಆಧಾರದ ಮೇಲೆ ವಾಪಸ್ ರಿಮ್ಯಾಂಡ್ ಮಾಡಿದರು. ರಿಮ್ಯಾಂಡ್ ಮಾಡಿದಾದ ಮೇಲೆ ಅಲ್ಲಿ ಬಹುಮತದ ಆಧಾರದ ಮೇಲೆ ಲ್ಯಾಂಡ್ ಟ್ರಿಬ್ಯುನಲ್‌ನವರು ಪುನಃ ಹಿಂದೆ ಆದಂತಹ ನಿರ್ಣಯವನ್ನು

ಬದಲಾಯಿಸಿ ಈ ಜಮೀನು ಬೆಂಬಿಯಲ್ಲಿರತಕ್ಕಂತಹವರ ಸಾಗುವಳಿಯಲ್ಲಿ, ಕಬ್ಜಾದಲ್ಲಿದೆಯೆಂದು ತೀರ್ಮಾನ ಮಾಡಿದ್ದಾರೆ. ಅಸಿಸ್ಟೆಂಟ್ ಕಮೀಷನ್‌ರವರು ಸರ್ಕಾರವೇ ಇದರ ಬಗ್ಗೆ ಅಪೀಲು ಮಾಡಬೇಕು ಎಂದು ಸರ್ಕಾರಕ್ಕೆ ಬರೆದಿದ್ದಾರೆ. ಆ ರೀತಿ ಮಾಡುತ್ತೇವೆ. ಎರಡು ಉದಾಹರಣೆಯನ್ನು ಕೊಟ್ಟಿದ್ದೇನೆ. ಎಲ್ಲಾ ಸಂದರ್ಭದಲ್ಲಿಯೂ ಮಾನ್ಯ ಸದಸ್ಯರು ಆಧಾರ ರಹಿತವಾದಂತಹ ಟೀಕೆ ಮಾಡುತ್ತಾರೆಂದು ನಾನು ಹೇಳುವುದಿಲ್ಲ ಇಲ್ಲಿ ಟೀಕೆ ಮಾಡುವಾಗ ಇಲ್ಲವೇ ಯಾವುದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುವಾಗ ಕನಿಷ್ಠ ಮಟ್ಟದ ಆಧಾರ ಅವರ ಹತ್ತಿರ ಇರಬೇಕು. ಮಾನ್ಯ ಬಂಗಾರಪ್ಪನವರಿಗೆ ಬಂದಂತಹ ಸಂಗತಿ, ಸುದ್ದಿ ನಿಜವಾದುದು. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ವಿಚಾರ ಇಷ್ಟಕ್ಕೇ ಬಿಟ್ಟು ಕೆ. ಹೆಚ್. ಪಾಟೀಲರು ಹೇಳಿದಂತಹ, ಪ್ರಸ್ತಾಪ ಮಾಡಿದಂತಹ ಕೆಲವು ವಿಷಯಗಳ ಬಗ್ಗೆ ನನ್ನ ಉತ್ತರವನ್ನು ಕೊಡಬೇಕೆಂದು ಬಯಸುತ್ತೇನೆ. ಇಲ್ಲಿ ಅವರು ಇದ್ದಿದ್ದರೆ ಚೆನ್ನಾಗಿತ್ತು. ಬಹಳ ಸೊಗಸಾಗಿ ತಮ್ಮಗೇ ಆದಂತಹ ಶೈಲಿಯಲ್ಲಿ ಅವರು ಮಾತನಾಡುತ್ತಾರೆ. ಆಗಾಗ ನನ್ನ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿ ಅದರ ಜೊತೆಗೆ ತೀವ್ರವಾದಂತಹ ಟೀಕೆಯನ್ನು ಮಾಡತಕ್ಕಂಥದ್ದು ಅವರ ಶೈಲಿ. ಮೊದಲನೆಯದಾಗಿ ಏನು ಮಾತನಾಡಿದರು ಎಂದರೆ, ಕ್ಯಾಬಿನೆಟ್‌ನಲ್ಲಿ ದ್ವಂದ್ವ ಇದೆ ಒಬ್ಬೊಬ್ಬ ಮಂತ್ರಿಗಳು ಒಂದೊಂದು ತರಹ ಮಾತನಾಡುತ್ತಾರೆ ಎಂದು ಈ ದ್ವಂದ್ವ ಎಂದು ಹೇಳಿದರೆ ಏನು? ಮಂತ್ರಿಗಳಲ್ಲಿ ಭಿನ್ನಾಭಿಪ್ರಾಯ ಇದೆಯೆಂದು ಹೇಳಿದರೆ ಹಾಗೆ ಇರತಕ್ಕಂಥಾದ್ದು ಸ್ವಾಭಾವಿಕವೆಂದು ಹೇಳುತ್ತೇನೆ. ಅನೇಕ ಮಹತ್ವದ ವಿಚಾರದಲ್ಲಿ ಎಲ್ಲರ ಅಭಿಪ್ರಾಯವೂ ಒಂದೇ ಇರಬೇಕೆಂದು ಏನು ಇಲ್ಲ. ಈ ಕ್ಯಾಬಿನೆಟ್ ಟೀಮಿನಲ್ಲಿ ಕೆಲಸ ಮಾಡಬೇಕಾದರೆ ಯಾವುದೇ ಒಂದು ವಿಚಾರವೇ ಎಂದು ತೀರ್ಮಾನವನ್ನು ಕ್ಯಾಬಿನೆಟ್ ತೆಗೆದುಕೊಂಡ ಮೇಲೆ ಅದರ ಸದಸ್ಯರು ತಮ್ಮ ವೈಯಕ್ತಿಕವಾದಂತಹ ಅಭಿಪ್ರಾಯವನ್ನು ಹೊರಗಡೆ ವ್ಯಕ್ತ ಮಾಡಬಾರದೆಂದು ನನ್ನ ಅಭಿಪ್ರಾಯ. ತಮ್ಮ ಅಭಿಪ್ರಾಯ ಏನು ಇರುತ್ತದೋ ಅದನ್ನು ಸ್ಪಷ್ಟವಾಗಿ ನಿರ್ಭಯವಾಗಿ ಸಂಕೋಚವಿಲ್ಲದೆ ಹೇಳತಕ್ಕಂತಹ ಸ್ವಾತಂತ್ರ್ಯ ಪ್ರತಿಯೊಬ್ಬ ಕ್ಯಾಬಿನೆಟ್ ಸದಸ್ಯನಿಗೂ ಇದೆ. ಮತ್ತು ನಮ್ಮ ಸಂಪುಟದಲ್ಲಿ ಪ್ರತಿಯೊಂದು ವಿಚಾರದ ಬಗ್ಗೆ ಸಾಕಷ್ಟು ಮುಕ್ತವಾದಂತಹ ಚರ್ಚೆಯಾಗುತ್ತದೆ. ಅಲ್ಲಿ ಬುಲ್‌ಡೋಜ್ ಮಾಡತಕ್ಕಂತದ್ದು ಇಲ್ಲ. ಯಾವ ಸಣ್ಣ ವಿಚಾರವೇ ಆಗಲೀ. ರಾಜ್ಯ ಮಂತ್ರಿಗಳನ್ನು ನಾನು ಜೂನಿಯರ್ ಮಿನಿಸ್ಟರ್ ಎಂಬ ರೀತಿ ನಾನು ನೋಡುವುದಿಲ್ಲ. ಕೆಲವರು ಸಂಪುಟ ದರ್ಜೆಯ ಮಂತ್ರಿಗಳಿದ್ದಾರೆ, ಕೆಲವರು ರಾಜ್ಯ ಮಟ್ಟದ ಮಂತ್ರಿಗಳು ಇದ್ದಾರೆ. ಈ ದರ್ಜೆಯಲ್ಲಿ ನನಗೆ ನಂಬಿಕೆ ಇಲ್ಲ. ಆ ತರಹ ಇದ್ದಿದ್ದರೆ ಅನೇಕ ಮಹತ್ವದ ಖಾತೆಗಳನ್ನು ರಾಜ್ಯ ಮಂತ್ರಿಗಳಿಗೆ ಕೊಡುತ್ತಿರಲಿಲ್ಲ. ನಿನ್ನೆ ಕೆ.ಹೆಚ್. ಪಾಟೀಲರು ತಮ್ಮ ಭಾಷಣದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಪ್ರಕಾಶ್‌ರವರಿಗೆ ನೀವು ರಾಜ್ಯ ಮಂತ್ರಿಗಳನ್ನಾಗಿ ಮಾಡಿ ಅವರಿಗೆ ವ್ಯವಸಾಯ ಖಾತೆಯನ್ನು ಕೊಟ್ಟಿದ್ದೀರಿ, ಈ ವ್ಯವಸಾಯ ಖಾತೆಯನ್ನು ರಾಜ್ಯ ಮಂತ್ರಿಗಳಿಗೆ ಕೊಟ್ಟು ಡೌನ್‌ಗ್ರೇಡ್ ಮಾಡಿದ್ದೀರಿ ಎಂಬ ಅಭಿಪ್ರಾಯವನ್ನು ಅವರು ಹೇಳಿದರು. ಈ ಪದ್ಧತಿ ಕೇವಲ ನಮ್ಮಲ್ಲಿ ಅಷ್ಟೇ ಅಲ್ಲ. ಕೇಂದ್ರದಲ್ಲಿಯೂ ಇದೆ. ಒಂದೊಂದು ಸಲ ಆಡಳಿತದ ಅನುಕೂಲತೆಯ ದೃಷ್ಟಿಯಿಂದ ಅದೇ ಖಾತೆಯನ್ನು ಕೆಲವು ಸಂದರ್ಭದಲ್ಲಿ ಕ್ಯಾಬಿನೆಟ್ ದರ್ಜೆ ಮಂತ್ರಿಗಳಿಗೆ ಕೊಡುತ್ತಾರೆ. ಇನ್ನು ಕೆಲವು ಸಂದರ್ಭದಲ್ಲಿ ರಾಜ್ಯ ಮಟ್ಟದ ಮಂತ್ರಿಗಳಿಗೆ ಕೊಡುತ್ತಾರೆ. ಇದೇನೂ ಹೊಸದಲ್ಲ. ಮತ್ತೊಂದು ವಿಚಾರವನ್ನು ಇದೇ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೧೨-೩೦ ಪಿ.ಎಂ

ಏನೆಂದರೆ, ಪ್ರತಿವಾರ ರೆಗ್ಯುಲರಾಗಿ ಸಂಪುಟದ ಸಭೆ ಸೇರುತ್ತಿಲ್ಲ ಎಂದು ಹೇಳಿದ್ದಾರೆ. ಅದು ನಿಜ ಅಲ್ಲ. ನಾವು ಪ್ರತಿ ಸೋಮವಾರ ಸಂಪುಟದ ಸಭೆಯನ್ನು ಸಾಮಾನ್ಯವಾಗಿ ಮಾಡುತ್ತೇವೆ. ಆಕಸ್ಮಾತ್ತಾಗಿ ಸೋಮವಾರ ರಜಾ ಇದ್ದರೆ ಮಂಗಳವಾರ, ಅದಿಲ್ಲದಿದ್ದರೆ ಮುಂದಿನ ಸೋಮವಾರ ಮಾಡುತ್ತೇವೆ. ಆಕಸ್ಮಾತಾಗಿ ಆ ಸಂದರ್ಭದಲ್ಲಿ ನಮ್ಮ ರಾಷ್ಟ್ರಪತಿಗಳೋ ಅಥವಾ ಬೇರೆ ಯಾರಾದರೂ ಬಂದರೆ, ಬೇರೆ ಅನಾನುಕೂಲತೆ ಇದ್ದರೆ ಅಥವಾ ಕೆಲವು ಮಂತ್ರಿಗಳು ಬೇರೆ ಕಡೆ ಪ್ರವಾಸ ಹೋಗಿದ್ದಾಗ ಒಂದೆರಡು ಸಾರಿ ನಡೆಯುವ ಸಂಪುಟದ ಸಭೆ ನಡೆಯುವುದಿಲ್ಲ. ಅದಿಲ್ಲದಿದ್ದರೆ ಪ್ರತಿ ವಾರ ನಡೆಯುತ್ತದೆ. ಈ ವರ್ಷದಲ್ಲಿ ೩೭ ಸಲ ಕ್ಯಾಬಿನೆಟ್ ಸಭೆ ನಡೆದಿದೆ. ಹಿಂದಿನ ಮಂತ್ರಿಮಂಡಲದಲ್ಲಿ ಕೂಡ ತುಸು ಹೆಚ್ಚು ಕಡಿಮೆ ಇದೇ ರೀತಿ ನಡೆಯುತ್ತಿತ್ತು ಎಂದು ನನ್ನ ಭಾವನೆ. ಮಾನ್ಯ ಕೆ. ಎಚ್.

ಪಾಟೀಲರು ಟೀಕೆ ಮಾಡುತ್ತಾ ಒಬ್ಬೊಬ್ಬ ಮಂತ್ರಿ ಒಂದೊಂದು ಮಾತು ಹೇಳುತ್ತಾರೆ ಎಂದು ಹೇಳಿದರು. ನನಗೆ ಗೊತ್ತಿರುವ ಮಟ್ಟಿಗೆ ಅಂಥ ಸಂದರ್ಭ ಬಂದಿಲ್ಲ. ಇದ್ದರೂ ಅತೀ ಕಡಿಮೆ ಎಂದರೆ ಏನು ? ಮೂರು ವರ್ಷದ ಅವಧಿಯಲ್ಲಿ ಒಂದು ಅಥವಾ ಎರಡು ದೃಷ್ಟಾಂತವನ್ನು ಕಷ್ಟಪಟ್ಟು ಹುಡುಕಬಹುದೇ ಹೊರತು ಅದು ಸಾಮಾನ್ಯವಾಗಿ ನಡೆಯತಕ್ಕ ಘಟನೆಯಲ್ಲ. ಇದೇ ಸಂದರ್ಭವನ್ನು ತೆಗೆದುಕೊಂಡು ಒಂದು ಮಾತನ್ನು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅಥವಾ ಒಂದು ಹೊಗಳಿಕೆಗಾಗಿ ಈ ಮಾತನ್ನು ಹೇಳುತ್ತಿಲ್ಲ. ನಾಲ್ಕು ಅಥವಾ ಐದು ಜನರನ್ನು ಬಿಟ್ಟರೆ ಈ ಸಂಪುಟದಲ್ಲಿರತಕ್ಕ ಮಂತ್ರಿಗಳೆಲ್ಲಾ ತಮ್ಮ ಈ ಕೆಲಸಕ್ಕೆ ಬಂದಾಗ ಹೊಸಬರಾಗಿದ್ದರು. ಕೆಲವರಂತೂ ಮೊದಲನೇ ಸಲ ಶಾಸಕರಾಗಿ ಆರಿಸಿಬಂದವರು, ಮೊದಲನೇ ಸಲ ಮಂತ್ರಿಗಳಾಗಿರುವವರಿದ್ದಾರೆ. ಅನುಭವ ಇಲ್ಲದೆ ಈ ಜವಾಬ್ದಾರಿಯನ್ನು ವಹಿಸಿಕೊಂಡವರೂ ಕೂಡ ಯಾರೂ ತಪ್ಪು ಮಾಡಿಲ್ಲ. ಎಡವಲಿಲ್ಲ ಎಂದು ಹೇಳದಿದ್ದರೂ ಸಾಮಾನ್ಯವಾಗಿ ಹೇಳುವುದಾದರೆ ಮಂತ್ರಿಯೊಬ್ಬರೂ ತಮ್ಮ ತಮ್ಮ ಖಾತೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ಸಮರ್ಥ ರೀತಿಯಲ್ಲಿ ನಡೆಸಿಕೊಂಡುಬಂದಿದ್ದಾರೆಂದು ಹೇಳುತ್ತೇನೆ. ಈ ಸಂಪುಟದಲ್ಲಿ ಯಾವುದೇ ಒಂದು ವ್ಯಕ್ತಿಯ ಸರ್ವಾಧಿಪತ್ಯ ಇಲ್ಲ. ಮುಖ್ಯಮಂತ್ರಿಯ ಸರ್ವಾಧಿಪತ್ಯವೂ ಇಲ್ಲ. ಇದರ ಜೊತೆಗೆ ಸಾಮಾನ್ಯವಾಗಿ ಯಾವುದೇ ಒಂದು ಮಹತ್ವದ ನಿರ್ಣಯವನ್ನು ತೆಗೆದುಕೊಳ್ಳುವಾಗ. ಅದು ಸಂಪುಟದ ನಿಯಮದ ಪ್ರಕಾರ ಸಂಪುಟಕ್ಕೆ ಸೇರಿದ ವಿಚಾರ ಆಗಿದ್ದರೆ ನಾವು ನಾಲ್ಕಾರು ಜನ ಕೂತು, ಸಂಬಂಧಪಟ್ಟ ಮಂತ್ರಿಗಳು ಕೂತು ನಿರ್ಣಯ ತೆಗೆದುಕೊಳ್ಳುತ್ತೇವೆ. ಅಥವಾ ಸಂಬಂಧಪಟ್ಟ ಮಂತ್ರಿಗಳು ನನ್ನ ಜೊತೆಯಲ್ಲಿ ಕುಳಿತು ಸಲಹೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಒಬ್ಬರ ವಿರುದ್ಧ ಮತ್ತೊಬ್ಬರು ಮಾತನಾಡುತ್ತಾರೆ ಎಂದು ಹೇಳತಕ್ಕ ಟೀಕೆ ಅಷ್ಟೊಂದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ಪೂಜ್ಯ ಕೆ. ಎಚ್. ಪಾಟೀಲರು ಕರ್ನಾಟಕ ಭವನದ ಬಗ್ಗೆ ಕೆಲವು ಟೀಕೆಗಳನ್ನು ಮಾಡಿದರು. ಡೆಲ್ಲಿಗೆ ಹೋದಾಗ ಕರ್ನಾಟಕ ಭವನದಲ್ಲಿ ಸರಿಯಾದಗೌರವ ಸಿಗುವುದಿಲ್ಲ. ಸರಿಯಾದಂಥ ಆದರ ಸಿಗುವುದಿಲ್ಲ ಮತ್ತು ಅಲ್ಲಿ ಉಳಿಯತಕ್ಕ ಅಧಿಕಾರಿಗಳಿಗೆ ಯಾವ ಚಾರ್ಜ್ ಮಾಡುತ್ತಾರೋ ಅದಕ್ಕಿಂತ ಹೆಚ್ಚಿನ ಚಾರ್ಜ್ ಶಾಸಕರಿಗೆ ಮಾಡುತ್ತಾರೆ ಎಂದು ಹೇಳಿದರು. ನಾನು ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಯಾವುದೇ ಒಬ್ಬ ಅಧಿಕಾರಿಯಿಂದ ಅನಾದರ ಆಗಿದ್ದರೆ ಆ ಅಧಿಕಾರಿ ವಿರುದ್ಧ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಶಾಸಕರಾಗಿರಲಿ ಅಥವಾ ಸಾಮಾನ್ಯ ವ್ಯಕ್ತಿಯಾಗಿರಲಿ ಅವರ ಜೊತೆಯಲ್ಲಿ ಅಧಿಕಾರದಲ್ಲಿದ್ದವರು ವರ್ತನೆ ಮಾಡುವಾಗ ಸೌಜನ್ಯದಿಂದ ವರ್ತನೆ ಮಾಡತಕ್ಕದ್ದು ಅವರ ಕರ್ತವ್ಯ ಎಂದು ನನ್ನ ನಂಬಿಕೆ, ಅವರು ಅಧಿಕಾರಿಗಳಾಗಿರಬಹುದು ಮಂತ್ರಿಗಳಾಗಿರಬಹುದು, ಸೌಜನ್ಯದಿಂದ ವರ್ತಿಸಬೇಕು. ಇನ್ನು ಶ್ರೀ ಆರ್. ಎನ್. ನಾಯಕ್ ಅವರು ಯಾವಾಗ ನಮ್ಮ ಮನೆಗೆ ಬಂದಿದ್ದರೋ ನನಗೆ ಗೊತ್ತಿಲ್ಲ. ಅವರು ನಮ್ಮ ಮನೆಗೆ ಬಂದಿದ್ದು ಸ್ಪಷ್ಟವಾಗಿ ನನಗೆ ನೆನಪಿಲ್ಲ. ಆದರೆ ಅವರು ಬಂದಿದ್ದು ಮೂರು ವರ್ಷದ ಹಿಂದೆ ಇರಬೇಕು. ಕಳೆದ ಎರಡೂಮುಕ್ಕಾಲು ವರ್ಷದಿಂದ ನಾನು ಮನೆಯನ್ನು ಬೆಳಗ್ಗೆ ೬ ಗಂಟೆಗೆ ಬಿಟ್ಟರೆ ವಾಪಸ್ ಹೋಗತಕ್ಕದ್ದು ರಾತ್ರಿ ೯ ಗಂಟೆ ಅಥವಾ ೧೦ ಗಂಟೆಗೆ. ಮಧ್ಯಾಹ್ನದ ಊಟ ಕೂಡ ಮನೆಯಲ್ಲಿ ಮಾಡುವುದಿಲ್ಲ. ಭಾನುವಾರ ಮಾತ್ರ ಮೌನ ಆಚರಣೆ ಮಾಡುತ್ತೇನೆ. ಆ ದಿನ ಮಾತ್ರ ಮಧ್ಯಾಹ್ನದ ಊಟವನ್ನು ಮನೆಯಲ್ಲಿ ಮಾಡಿದ್ದೇನೆಯೋ ಹೊರತು ಇನ್ನುಳಿದ ದಿವಸ ಬೆಳಿಗ್ಗೆ ೬ ಗಂಟೆಗೆ ಮನೆ ಬಿಟ್ಟರೆ ಎಂದೂ ಎಂಟೂವರೆ ಗಂಟೆಗಿಂತ ಮುಂಚೆ ಮನೆಗೆ ಹೋಗಿಲ್ಲ. ನಮ್ಮ ಮನೆ ಹೊರಗಡೆಯಿಂದ ದೊಡ್ಡದಾಗಿ ಕಂಡರೂ ಒಳಗಡೆ ಅಷ್ಟೇನೂ ದೊಡ್ಡದಾಗಿಲ್ಲ ವಿರೋಧಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಮನೆ ಬಗ್ಗೆ ಪ್ರಸ್ತಾಪ ಮಾಡಿದ್ದರೆ. ಅದಕ್ಕೆ ಆಮೇಲೆ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮೌನ ಆಚರಣೆ ಮಾಡುತ್ತೇನೆ ಎಂದು ಹೇಳಿದಿರಲ್ಲ, ಆಗ ಯಾವ ಯೋಚನೆ ಮಾಡುತ್ತಿರುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ಆಗ...

ಶ್ರೀ ಕೆ. ಎಚ್. ಶ್ರೀನಿವಾಸ್.—ಇನ್ನು ಮೇಲಾದರೂ ರಾಮ, ಕೃಷ್ಣ ಎಂದು ಧ್ಯಾನ ಮಾಡುತ್ತಾ ಇರಿ.

ಶ್ರೀ ರಾಮಕೃಷ್ಣ **ಹೆಗಡೆ.**—ಮೌನಾಚರಣೆಯಿಂದ ನನಗೆ ತುಂಬಾ ಅನುಕೂಲವಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಮೌನ ಆಚರಣೆ ಮಾಡಿದರೆ ಅವರಿಗೆ ನನಗಿಂತಲೂ ಹೆಚ್ಚು ಅನುಕೂಲವಾಗುತ್ತದೆ ಎಂದು ಅವರ ಹಿತಕ್ಕಾಗಿ ಹೇಳುತ್ತಿದ್ದೇನೆ, ಮೌನ ಆಚರಣೆ ಮಾಡುವಾಗ ನಾನು ಯೋಚನೆ ಮಾಡುವುದಿಲ್ಲ. ಯೋಚನೆ ಮಾಡುವುದು...

ಶ್ರೀ ಕೆ. ಎಚ್. **ಶ್ರೀನಿವಾಸ್.**—ಲಾನಲ್ಲಿ ಅಮೆಂಡ್‌ಮೆಂಟ್ ಮಾಡೋಣ. ಏನೆಂದರೆ. ಲೀಡರ್ ಮತ್ತು ಅಪೋಜಿಷನ್‌ಲೀಡರ್ ವಾರಕ್ಕೊಂದು ಸಾರಿ ಉಪವಾಸ ಮಾಡಬೇಕು ಮೌನ ಮಾಡಬೇಕು ಎಂದು

ಶ್ರೀ ರಾಮಕೃಷ್ಣ **ಹೆಗಡೆ.**—ಆ ದಿವಸ ಓದುತ್ತೇನೆ. ಬಾಕಿ ದಿನ ಸಮಯ ಸಿಗದೇ ಇರುವುದರಿಂದ ಆ ದಿವಸ ಓದುತ್ತೇನೆ. ಅನೇಕರು ನಮ್ಮ ಮನೆಗೆ ಬರುತ್ತಿದ್ದರು. ಅವರಿಗೆ ನಮಸ್ಕಾರ ಮಾಡಿ ಏನಾದರೂ ಇದ್ದರೆ ಆಫೀಸಿಗೆ ಬನ್ನಿ ಎಂದು ಹೇಳುತ್ತಿದ್ದೆ. ನೂರಾರು ಜನ ಮನೆಗೆ ಬರುತ್ತಾರೆ. ಆದರೆ ಹೆಚ್ಚಾಗಿ ಮನೆಯಲ್ಲಿ ಯಾರನ್ನೂ ಭೇಟಿಯಾಗುವುದಿಲ್ಲ. ಶಾಸಕರೂ ಕೂಡ ಮನೆಗೆ ಬರುತ್ತಿಲ್ಲ, ನಾನು ಬೆಳಗ್ಗೆ ೬ ಗಂಟೆಗೆ ಮನೆ ಬಿಟ್ಟರೆ ಅರ್ಧ ಗಂಟೆ ವಾಕ್ ಮಾಡುತ್ತೇನೆ. ನಂತರ ಗೆಸ್ಟ್ ಹೌಸಿನಲ್ಲಿ ಹೋಗಿ ಸ್ನಾನ ಮಾಡಿ ಆಫೀಸಿಗೆ ಬರುತ್ತೇನೆ. ಇದು ನನ್ನ ದೈನಂದಿನದಿನಚರಿ. ನಾನು ಕರ್ನಾಟಕ ಭವನದ ವಿಚಾರದಲ್ಲಿ ಹೇಳುತ್ತಿದ್ದೆ ಮಾನ್ಯ ಶಾಸಕರು ಯಾವುದಾದರೂ ಮೀಟಿಂಗ್ ಅಥವಾ ಸಭೆ ಸಮ್ಮೇಳನಕ್ಕೆ ಸಂಬಂಧಪಟ್ಟಂತೆ ಡೆಹಲಿಗೆ ಹೋದಾಗ ಮಾತ್ರ ಉಳಿದುಕೊಂಡರೆ ಪರ್ವಾಗಿಲ್ಲ. ಆದರೆ ಅನೇಕ ಶಾಸಕರೂ, ಹಾಗೂ ಎಂ. ಪಿ.ಗಳೂ ಕೂಡ ಒಂದೆರಡು ಮೂರು ದಿವಸ ಅಲ್ಲ ಬಹಳ ದಿವಸ ಅಲ್ಲೇ ಇರುತ್ತಾರೆ, ಆದರಿಂದ ಬೇರೆಯವರಿಗೆ ಸ್ವಲ್ಪ ತೊಂದರೆಯಾಗುತ್ತದೆ. ಏಕೆಂದರೆ ಅಲ್ಲಿ ವಾಸ್ತವ್ಯಕ್ಕೆ ಅನುಕೂಲವಾಗಿರತಕ್ಕ ಕೊಠಡಿಗಳು ಹೆಚ್ಚಾಗಿಲ್ಲ. ಆದರೂ ಮಾನ್ಯ ಕೆ. ಎಚ್. ಪಾಟೀಲರು ಚಾರ್ಜ್ ವಿಚಾರದಲ್ಲಿ ಏನು ಸೂಚನೆ ಮಾಡಿದ್ದಾರೋ ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಫೈನಾನ್ಸ್ ಡಿಪಾರ್ಟ್‌ಮೆಂಟ್ ಮೇಲೆ ಉಗ್ರವಾದ ದೃಷ್ಟಿಯನ್ನು ತೋರಿಸಿದರು. ಅದರಲ್ಲೂ ಫೈನಾನ್ಸ್ ಕಮಿಷನರ್ ಮೇಲೆ ಮಾತನಾಡುತ್ತಾ ಅವರು ಬಹಳ ಹಿಡಿತ ಎಂದರು ಫೈನಾನ್ಸ್ ಕಮಿಷನರ್ ಆದವರು ಹಿಡಿತದಿಂದ ಇರಬೇಕಾಗುತ್ತದೆ. ಮಾನ್ಯ ಮೊಯಿಲಿ ಅವರಿಗೆ ಅದರಲ್ಲಿ ಸಾಕಷ್ಟು ಅನುಭವ ಇದೆ. ಡೆವಲಪ್ಮೆಂಟ್ ಕಮಿಷನರ್ ಆಗಿದ್ದವರನ್ನು ಫೈನಾನ್ಸ್ ಕಮಿಷನರ್ ಮಾಡಿದರೆ ಯಾರು ಉದಾರವಾಗಿರುತ್ತಾರೋ ಅವರೇ ಇಲ್ಲಿ ಬಂದಾಗ ಅಷ್ಟೇ ಬಿಗಿಮುಷ್ಟಿಯವರಾಗಿರುತ್ತಾರೆ.

ಆದರೆ ಅವರು ಹೇಳಿದ ಮಾತಿನಲ್ಲಿರತಕ್ಕ ಅರ್ಥವನ್ನು ನಾನು ತಿಳಿದುಕೊಂಡಿದ್ದೇನೆ. ಯಾವುದೇ ಒಂದು ಜನ ಹಿತದ, ಅಭಿವೃದ್ಧಿಯ ಕೆಲಸ ಬಂದಾಗ ಅದಕ್ಕೆ ಹಣಕಾಸಿನ ತೊಂದರೆ ಒಂದೇ ಕಾರಣದಿಂದ ಅದು ಕುಂಠಿತವಾಗಬಾರದು, ರಾಜ್ಯದ ಪ್ರಗತಿ ಕುಂಠಿತವಾಗಬಾರದು. ಅದನ್ನು ನಾನು ಒಪ್ಪುತ್ತೇನೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಆರ್ಥಿಕ ವಿಚಾರದಲ್ಲಿ ನಾವು ಅನೇಕ ಸಂಕಟಗಳನ್ನು ಎದುರಿಸಿಕೊಂಡು ಬಂದಿದ್ದೇವೆ. ಮಾನ್ಯ ಮೊಯ್ಲಿಯವರು ಪ್ರತಿ ವರ್ಷ ಆಯವ್ಯಯ ಭಾಷಣದ ಮೇಲೆ ಮತ್ತು ಇನ್ನಿತರ ಪ್ರಶ್ನೋತ್ತರದ ಕಾಲದಲ್ಲಿ ಹೇಳುತ್ತಿದ್ದ ಒಂದು ಮಾತನ್ನು ಈ ಸಲ ಹೇಳಲಿಲ್ಲ. ಇದು ನನಗೆ ಸಂತೋಷವಾಯಿತು. ಏನೆಂದರೆ, ಸರ್ಕಾರದ ಖಜಾನೆ ಬರಿದು ಆಗಿದೆ, ಸರ್ಕಾರ ದಿವಾಳಿಯ ತುಟ್ಟತುದಿಯಲ್ಲಿ ಇದೆ, ಇನ್ನು ಮುಂದೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಸಾಕಷ್ಟು ದುಡ್ಡು ಇಲ್ಲ ಎಂದು ಈ ಮೊದಲು ಹೇಳುತ್ತಿದ್ದರು. ಆ ಮಾತು ನಿಜ ಇದೆ. ಕಳೆದ ವರ್ಷ ಬಹಳ ಸಂಕಟದಲ್ಲಿ ಇದ್ದೆವು. ಅದಕ್ಕೆ ಕಾರಣ ಇದೆ. ಆ ಕಾರಣವನ್ನು ನಾನು ಈ ಮೊದಲೇ ಪ್ರಸ್ತಾಪ ಮಾಡಿರುವುದರಿಂದ ಪುನಃ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಕಳೆದ ವರ್ಷ ಕೇಂದ್ರ ಸರ್ಕಾರದವರು ನಮಗೆ ಈ ಓವರ್ ಡ್ರಾಫ್ಟ್ ವಿಚಾರದಲ್ಲಿ ೫ ವರ್ಷದ ಒಂದು ಅವಕಾಶವನ್ನು ಅವರು ಕೊಟ್ಟಿದ್ದರಿಂದ ನಮಗೆ ಅದರಿಂದ ಬಹಳ ಅನುಕೂಲವಾಯಿತು. ಆದುದರಿಂದಲೇ ಇಂದು ನಮ್ಮ ಡೆಫಿಸಿಟ್ ಅತ್ಯಂತ ಒಂದು ಸಣ್ಣ ಮಿತಿಯಲ್ಲಿ ಇರತಕ್ಕದ್ದಕ್ಕೆ ಸಾಧ್ಯವಾಯಿತು. ಅದರ ಜೊತೆಗೆ ನಾವು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸುವುದರಲ್ಲಿ ಕೂಡಾ ಬಹಳ ಪ್ರಯತ್ನವನ್ನು ಮಾಡಿದ್ದೇವೆ. ನಾನು ಈ ವಿಚಾರವನ್ನು ಹಿಂದಿನ ಬಜೆಟ್ ಮೇಲೆ ಸಾಮಾನ್ಯ ಚರ್ಚೆಯಾದಾಗ ಹೇಳಿದ್ದೇನೆ. ಹಾಗೂ ಅಂಕಿಸಂಖ್ಯೆಗಳನ್ನೂ ಸಹಾ ಕೊಟ್ಟೆ. ಅದನ್ನು ಈಗ ಪುನಃ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಈ ಮೂರು ವರ್ಷಗಳ ಅವಧಿಯಲ್ಲಿ ಅದರಲ್ಲೂ ಈ ಬಜೆಟ್‌ನಲ್ಲಿ ನಮ್ಮ ಸಂಪನ್ಮೂಗಳ ಸ್ಥಿತಿ ಆಶಾದಾಯಕವಾಗಿರುವುದರಿಂದ ಜೀವಾಳವಾದ ಕ್ಷೇತ್ರಗಳಲ್ಲಿ ನಾವು ತೊಡಗಿಸಿರತಕ್ಕ ಬಂಡವಾಳವನ್ನು ಹೆಚ್ಚು ಮಾಡಿದ್ದೇವೆ. ಮಾನ್ಯ ವಿರೋಧ

ಪಕ್ಷದ ನಾಯಕರು ಹಾಗೂ ಒಬ್ಬಿಬ್ಬ ಇನ್ನಿತರೇ ಸದಸ್ಯರು ಯಾವ ಆಧಾರದ ಮೇಲೆ ಹೇಳಿದರೋ ಗೊತ್ತಿಲ್ಲ. ಏನೆಂದರೆ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ ವೆಂದು ಹೇಳಿದರು. ಈ ವರ್ಷ ನಾವು ಒದಗಿಸಿದಷ್ಟು ಹಣವನ್ನು ಹಿಂದೆಂದೂ ನಾವು ಒದಗಿಸಿರಲಿಲ್ಲ. ವಿದ್ಯುಚ್ಛಕ್ತಿ ಬಾಬಿಗೆ ಒಟ್ಟು ನಮ್ಮ ಆದಾಯದ ಶೇಕಡಾ ೨೨–೨೩ ರಷ್ಟು ಹಣವನ್ನು ಒದಗಿಸಿದ್ದೇವೆ. ನೀರಾವರಿಗೆ ಕಳೆದ ೧೦ ವರ್ಷಗಳಲ್ಲಿ ಖರ್ಚು ಮಾಡಿದ್ದು ಮತ್ತು ಒದಗಿಸಿದ ಹಣದ ಬಗ್ಗೆ ಅಂಕಿಅಂಶ ಗಳನ್ನು ಬಜೆಟ್ಟಿನಲ್ಲಿ ಕೊಟ್ಟಿದ್ದೇವೆ. ಹಿಂದೆ ಯಾವ ವರ್ಷದಲ್ಲೂ ಇಷ್ಟು ಹಣವನ್ನು ಒದಗಿಸಿರಲಿಲ್ಲ ವೆಂಬುದು ಅದನ್ನು ನೋಡಿದರೇ ಗೊತ್ತಾಗುತ್ತದೆ. ಆದರೂ ನಮಗೆ ತೃಪ್ತಿ ಇಲ್ಲ. ನಾವು ಈ ಎರಡೂ ಬಾಬುಗಳಲ್ಲಿ ಇನ್ನೂ ಹೆಚ್ಚು ಹಣವನ್ನು ಒದಗಿಸಬೇಕು. ವಿದ್ಯುಚ್ಛಕ್ತಿ ಎಂಬುದು ಕೈಗಾರಿಕಾ ಅಭಿವೃದ್ಧಿ ಮತ್ತು ವ್ಯವಸಾಯ ಅಭಿವೃದ್ಧಿ ಈ ಎರಡಕ್ಕೂ ಬುನಾದಿಯಾದ ಒಂದು ಶಕ್ತಿ. ವಿದ್ಯುತ್ತಿನ ಅಭಾವದಲ್ಲಿ ಈಗ ನಡೆಯುತ್ತಿರುವ ಚಟುವಟಿಕೆಗಳು ತೃಪ್ತಿಕರವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದೇ ಸಂದರ್ಭದಲ್ಲಿ ಈ ವಿಚಾರ ದಲ್ಲಿ ಒಂದೆರಡು ಟೀಕೆಗಳನ್ನು ಮಾನ್ಯ ಸದಸ್ಯರು ಮಾಡಿದರು. ಅದಕ್ಕೆ ಉತ್ತರ ರೂಪವಾಗಿ ನಮ್ಮ ಸಹದ್ಯೋಗಿಯವರು ವಿವರಗಳನ್ನು ಕೊಟ್ಟರು. ಹಾಗೂ ಕೈಗಾ ವಿಚಾರವಾಗಿ ಸ್ಪಷ್ಟವಾಗಿ ಹೇಳಿದರು. ಮತ್ತೆ ಬೇಡ್ತಿ ಬಗ್ಗೆ ಹೇಳಬೇಕೆಂದರೆ ಈ ಬಗ್ಗೆ ಮೇಲ್ಮನೆಯಲ್ಲಿ ಪ್ರಶ್ನೆ ಬಂದಾಗ ನಾನೂ ಅಲ್ಲಿ ಇದ್ದೆ; ಆದುದರಿಂದ ನಾನು ಅದಕ್ಕೆ ಅಲ್ಲಿ ಉತ್ತರ ಕೊಟ್ಟಿದ್ದೇನೆ. ಬೇಡ್ತಿ ಮತ್ತು ಅಘನಾಶಿನಿ ಆಗಬಾರದು ಎನ್ನುವ ಅಭಿಪ್ರಾಯ ಕೆಲವರಲ್ಲಿ ಇದೆ. ಅದಕ್ಕೆ ನಿರ್ದಿಷ್ಟವಾದ ಆಧಾರಗಳೂ ಇವೆ. ಉತ್ತರ ಕನ್ನಡ ಜಿಲ್ಲೆಯ ಉತ್ತರದಲ್ಲಿ ಕಾಳಿ ಯೋಜನೆ ಇದೆ. ಅಲ್ಲಿ ಒಂದಲ್ಲ ಎರಡು ಜಲಾಶಯಗಳನ್ನು ಇದ್ದು ಇದೇ ಯೋಜನೆಯ ಅಂತರ್ಗತವಾಗಿ ಇನ್ನೂ ಹಲವು ಜಲಾಶಯಗಳನ್ನು ನಾವು ನಿರ್ಮಾಣ ಮಾಡಬೇಕಾಗಿದೆ. ಅದೇ ದಕ್ಷಿಣದಲ್ಲಿ ಶರಾವತಿ, ಗೇರುಸೊಪ್ಪೆ ತೆಗೆದುಕೊಳ್ಳಬೇಕಾಗಿದೆ. ಟಾಲ್ಕನ್ ಯೋಜನೆ ತೆಗೆದುಕೊಳ್ಳ ಬೇಕಾಗಿದೆ ಅದೇರೀತಿವಾರಾಹಿ,ಚಕ್ರಾ ಕೂಡಾ.ಕೊಯ್ನಾಯೋಜನೆ ಹಾಗೂಬೇಡ್ತಿಯನ್ನುತೆಗೆದುಕೊಂಡರೆ ಭೂಮಿಯ ಮೇಲೆ ಭಾರ ಎಷ್ಟು ಬರುತ್ತದೆಂದು ಹಾಗೂ ಅದರಿಂದ ನೀರಿನ ಪರಿಣಾಮದ ಪ್ರತಿಕ್ರಿಯೆ ಏನು ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇಲ್ಲಿ ಎಕಲಾಜಿಕಲ್ ಬ್ಯಾಲೆನ್ಸ್ ಮುಖ್ಯ ವಾಗಿರುತ್ತದೆ. ೧೯೭೭–೭೮ರಲ್ಲಿ ಆಗಿನ ಸರ್ಕಾರ ಒಂದು ಯೋಜನೆಯ ರೂಪರೇಷೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್ ಕೊಟ್ಟಿದ್ದರು. ಆದರೆ ಆ ಹೊತ್ತಿನಲ್ಲಿ ಏನು ೧೯೭೯–೮೦ರಲ್ಲಿ ಹೊಸ ಆಕ್ಟ್ ಬಂದಿದೆ ಅದು ಆಗ ಇರಲಿಲ್ಲ. ಆ ಆಕ್ಟ್‌ನಲ್ಲಿ ಕನ್‌ಸರ್ವೇಷನ್ ಆಫ್ ಫಾರೆಸ್ಟ್ ಮತ್ತು ಎಕಾಲಜಿ ವಿಚಾರ ಬಂತು. ಅದು ಬಂದ ಮೇಲೆ ನಾವು ಪುನಃ ಕ್ಲಿಯರೆನ್ಸ್‌ಗೆ ಬರೆಯಬೇಕಾಗುತ್ತದೆ. ನನ್ನ ಅನುಮಾನ ಏನೆಂದರೆ, ಏನು ಆ ಬಗ್ಗೆ ರಿಪೋರ್ಟ್ ಕೊಡುತ್ತಾರೋ ಅದನ್ನು ಬೇಗ ಕೊಡಿ ಎಂದು ಹೇಳಿದ್ದೇನೆ. ನಮ್ಮ ಮೇಲ್ಮನೆಯ ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ ಆ ಕಮಿಟಿಯಲ್ಲೂ ಈ ಬಗ್ಗೆ ಒಮ್ಮತಕ್ಕೆ ಬಂದಹಾಗೆ ಇಲ್ಲ. ನನಗೆ ಗೊತ್ತಾದ ವಿಚಾರ ಇದು. ಅದು ಏನೇ ಇರಲಿ, ಈ ಕಮಿಟಿಯನ್ನು ಹಿಂದಿನ ಸರ್ಕಾರ ಮಾಡಿದ್ದು. ಅದರ ಕರ್ತವ್ಯವೆಂದರೆ ಒಂದು ರಿಪೋರ್ಟ್ ಕೊಡುವುದು. ಆ ರಿಪೋರ್ಟನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಕೇಂದ್ರ ಸರ್ಕಾರ ಕ್ಲಿಯರೆನ್ಸ್ ಕೊಡದ ಹೊರತು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕೇರಳದ ಸೈಲೆಂಟ್ ವ್ಯಾಲಿ ಯೋಜನೆ ಬಗ್ಗೆ ಬಹಳಷ್ಟು ವಾದ ವಿವಾದ ನಡೆದು ಆ ಬಗ್ಗೆ ಏನೆಲ್ಲಾ ಗಲಾಟೆ ಆದರೂ ಅದಕ್ಕೆ ಕೇಂದ್ರದಿಂದ ಕ್ಲಿಯರೆನ್ಸ್ ಸಿಕ್ಕಿಲ್ಲದೇ ಇರುವ ವಿಷಯ ಮಾನ್ಯ ಮೊಯ್ಲಿಯವರಿಗೂ ಗೊತ್ತುಂಟು. ಕೈಗಾ ವಿಚಾರದಲ್ಲೂ ಕೂಡಾ ಇವತ್ತು ಕೆಲವಾರು ಜನರಲ್ಲಿ ವಿರೋಧ ಇದೆ. ಮಾನ್ಯ ಆರ್. ಎನ್. ನಾಯಕ್ ಹಾಗೂ ನಾನೂ ಒಂದೇ ಜಿಲ್ಲೆಯವರು. ನಮ್ಮ ಜಿಲ್ಲೆಯ ಜನರು ಮೊದಲು ಯೋಜನೆ ಬೇಕು. ಯೋಜನೆ ಬೇಕು, ಯೋಜನೆ ಬೇಕು ಎಂದು ಹೇಳುತ್ತಾರೆ. ಒಂದು ಸಲ ಕಷ್ಟಪಟ್ಟು ಯೋಜನೆಯನ್ನು ಸ್ಯಾಂಕ್ಷನ್ ಮಾಡಿದರೆ ಅದು ಬೇಡ, ಅದು ಬೇಡ, ಅದು ಬೇಡ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಯ ಒಂದು ಸಾಮಾನ್ಯ ವಿಷಯ ಹೇಳುತ್ತಿದ್ದೇನೆ. ಮೊದಲು ನಮ್ಮ ಜಿಲ್ಲೆಯ ಅನೇಕ ಜನರು ಬೇಡ್ತಿ ಬೇಡ – ಬೇಡ್ತಿ ಬೇಡ, ನಮಗೆ ಅಣುವಿದ್ಯುತ್ ಕೊಡಿ ಎಂದು ಹೇಳುತ್ತಿದ್ದರು. ಯಾರು ಅಣು ವಿದ್ಯುತ್ ಅನ್ನು ವಿರೋಧ ಮಾಡುತ್ತಿದ್ದರೋ ಅವರೇ ಈ ಒಂದು ಆಂದೋಳನದ ಮುಖಂಡತ್ವ ವನ್ನು ವಹಿಸಿ ಅಣುವಿದ್ಯುತ್ ಕೊಡಿ, ಬೇಡ್ತಿ ಬೇಡ ಎಂದು ಹೇಳಿದವರು. ಆದರೆ ಇವತ್ತು ಅಣು ವಿದ್ಯುತ್ ಬೇಡ ಎಂದು ಹೇಳುತ್ತಿದ್ದಾರೆ. ಯಾರು ಹಿಂದೆ ಬೇಕು ಎಂದರೋ ಅವರು ಇವತ್ತು ವಿರೋಧ ಮಾಡುತ್ತಿದ್ದಾರೆ. ಸಾಮಾನ್ಯ ಜನತೆಯಲ್ಲಿ ಒಂದು ಭಯ ಇದೆ, ಆ ಭಯ ಏನೆಂದರೆ,

ಅಣು ವಿದ್ಯುತ್ ಎಂದು ಹೇಳಿದ ತಕ್ಷಣವೇ ಅವರಿಗೆ ಹಿರೋಶಿಮಾ–ನಾಗಸಾಕಿಯು ನೆನಪಾಗುತ್ತದೆ. ಅನೇಕ ಜನರಲ್ಲಿ ಇದ್ದ ಲೀಕ್ ಆದರೆ ಏನು, ಅದರ ವೇಸ್ಟ್ ಡಿಸ್ಪೋಸ್ ಮಾಡುವುದು ಹೇಗೆ, ಅಕಸ್ಮಾತ್ ಲೀಕ್ ಆದರೆ ಭಯಂಕರ ಅನಾಹುತವಾಗಬಹುದೆಂಬ ಭಯ ಇದೆ. ಆದ್ದರಿಂದ ನಾನು ಒಂದೂವರೆ ಅಥವಾ ಎರಡು ತಿಂಗಳ ಹಿಂದೆ ಉತ್ತರಕನ್ನಡ ಜಿಲ್ಲೆಯಲ್ಲಿ ಯಾರು ಈ ಬಗ್ಗೆ ವಿರೋಧ ಮಾಡುತ್ತಿದ್ದಾರೋ ಅವರನ್ನೆಲ್ಲಾ ಕರೆಸಿ ಮಾತನಾಡಿದೆ. ಆಗ ಮಾನ್ಯ ರಾಣೆಯವರು ಹಾಗೂ ಮಾನ್ಯ ನಾಯಕ್ ಅವರು ಮತ್ತು ಇತರೇ ಶಾಸಕರೂ ಅಲ್ಲಿ ಇದ್ದರು. ಹಾಗೂ ಕೆಲವು ಪತ್ರಿಕಾಕರ್ತರೂ ಬಂದಿದ್ದರು. ಹಾಗೂ ಅಲ್ಲಿಗೆ ಡಾ. ರಾಜಾರಾಮಣ್ಣ, ಡಾ. ಶ್ರೀನಿವಾಸ್ ಮತ್ತು ಇನ್ನಿತರೆ ತಜ್ಞರೂ ಕೂಡಾ ಬಂದಿದ್ದರು. ಸುಮಾರು ಗಂಟೆಗಳ ಕಾಲ ಅವರುಗಳು ಪ್ರಶ್ನೆಗಳಿಗೆ ಉತ್ತರವನ್ನು ನನ್ನ ದೃಷ್ಟಿಯಲ್ಲಿ ಸಮರ್ಪಕವಾಗಿ ಅವರಿಗೆ ಕನ್ವಿನ್ಸ್ ಆಗುವಹಾಗೆ ತಿಳುವಳಿಕೆಯಾಗುವ ಹಾಗೆ ಕೊಟ್ಟರು. ಆಗ ಅಲ್ಲಿ ಅನಾಹುತವಾಗುವುದಿಲ್ಲ ಎನ್ನುವ ಬಗ್ಗೆ ಅವರ ಮನಸ್ಸಿಗೆ ಖಾತ್ರಿಯಾಗಿದೆಯೆಂದು ಹೇಳಿ ನಮಗೆ ಅನಿಸಿತು.

ಆದರೆ ನಾವು ಸಭೆಯನ್ನು ಬಿಟ್ಟು ಹೋದ ಮೇಲೆ ಮರು ಘಳಿಗೆಯಲ್ಲೇ ಅವರು ಒಂದು ಪತ್ರಿಕಾ ಗೋಷ್ಠಿಯನ್ನು ಕರೆದು ನಾವು ಇದಕ್ಕೆ ಒಪ್ಪಿಕೊಳ್ಳುವುದಿಲ್ಲವೆಂದು ಹೇಳಿಕೆಯನ್ನು ಕೊಟ್ಟರು. ಆ ಸಭೆಯಲ್ಲಿ ಮಾನ್ಯ ರಾಜಾರಾಮಣ್ಣನವರೂ ಇದ್ದರು. ಅವರನ್ನು ನಾನು ಕಾಂಪ್ಲಿಮೆಂಟ್ ಮಾಡಬೇಕಾಗಿದೆ. ಏಕೆಂದರೆ, ಅವರು ಒಂದು ಮಾತನ್ನು ಏನು ಹೇಳಿದರೆಂದರೆ, ಇಲ್ಲಿ ನಿಮಗೆ ಮನಸ್ಸಿಗೆ ಸಮಾಧಾನವಾಗದಿದ್ದರೆ ನೀವು ಯಾರ್ಯಾರು ಅಲ್ಲಿಗೆ ಹೋಗಬೇಕೆಂದಿದ್ದೀರಿ ಅವರೆಲ್ಲರೂ ಬನ್ನಿ, ನಾನು ೪–೫ ಸೆಂಟರ್‌ಗಳಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆಂದು ಹೇಳಿದ್ದಾರೆ. ಇದಕ್ಕೂ ಮುಂಚಿತವಾಗಿ ನಾನು ಒಂದು ಮಾತನ್ನು ಹೇಳಿದ್ದೆ, ಏನೆಂದರೆ ನಮ್ಮ ಜಿಲ್ಲಾ ಶಾಸಕರ ಮುಖಂಡತ್ವದಲ್ಲಿ ಕಲ್ಪಾಕಂ ಮುಂತಾದ ೪–೫ ಅಣು ವಿದ್ಯುತ್ ಸೆಂಟರ್‌ಗಳಿಗೆ ಕಳಕಿಹಿಸಿಕೊಡುತ್ತೇನೆಂದು. ಈಗ ಮಾನ್ಯ ಸದಸ್ಯರಾದ ಮೊಯ್ಲಿಯವರು ಮಾಡಿದಂಥ ಸೂಚನೆಯ ಬಗ್ಗೆ ನಾನು ಹೇಳುತ್ತಿದ್ದೇನೆ, ಇಲ್ಲಿ ಬಂದಿರತಕ್ಕ ಒಂದು ದೊಡ್ಡ ತೊಂದರೆ ಎಂದರೆ, ಯಾರೋ ಒಬ್ಬರು ಮಾನ್ಯ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದು ಕೈಗಾ ಯೋಜನೆಯನ್ನು ತೆಗೆದುಕೊಂಡರೆ ಅಲ್ಲಿ ಬಹಳ ದೊಡ್ಡ ಅರಣ್ಯ ಪ್ರದೇಶ ನಾಶವಾಗುತ್ತದೆಂದು ತಿಳಿಸಿದ್ದಾರೆಂದು ಕಾಣಿಸುತ್ತದೆ. ಆದ್ದರಿಂದ ಅವರು ಈಗ ಅಣು ವಿದ್ಯುತ್ ಖಾತೆಗೆ ಒಂದು ಸೂಚನೆಯನ್ನು ಏನು ಕೊಟ್ಟಿದ್ದಾರೆಂದರೆ, ಈ ಯೋಜನೆಯ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸದೆ ಮುಂದಿನ ಕ್ರಮ ತೆಗೆದುಕೊಳ್ಳಕೂಡದೆಂದು ಹೇಳಿದ್ದಾರೆ. ಅಣು ವಿದ್ಯುತ್ ಖಾತೆಗೆ ನಮ್ಮ ಸರ್ಕಾರದ ವತಿಯಿಂದ ಏನೇನು ಸಹಾಯ ಸೌಕರ್ಯಗಳು ಆಗಬೇಕೋ ಅವೆಲ್ಲವನ್ನೂ ನಾವು ಮಾಡಿಕೊಟ್ಟಿದ್ದೇವೆ. ಅವರು ೨ ಸ್ಥಳಗಳನ್ನು ಆರಿಸಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ಒಂದು, ಜನರು ಉಳಿಯತಕ್ಕ ಸಿಟಿ ಮತ್ತೊಂದು ಇದು ಜಾರಿಗೆ ಬಂದರೆ ಅತ್ಯಂತ ಉತ್ತಮವಾದಂಥ ವಿದ್ಯುಚ್ಛಕ್ತಿ ಸ್ಥಾವರವಾಗುತ್ತದೆ. ಪ್ರಾರಂಭದಲ್ಲಿ ೨೩೦ ಎಂ.ಡಬ್ಲ್ಯು. ಇದ್ದು ಕೊನೆಗೆ ೨೦೦೦ ಎಂ.ಡಬ್ಲ್ಯು. ಸಾಮರ್ಥ್ಯ ಹೊಂದಿರುತ್ತದೆ. ಈ ಜಾಗವನ್ನು ಸೇಫ್ಟಿ ದೃಷ್ಟಿಯಿಂದ, ತಾಂತ್ರಿಕ ದೃಷ್ಟಿಯಿಂದ, ಉತ್ಪಾದನಾ ದೃಷ್ಟಿಯಿಂದ, ಹೀಗೆ ಪ್ರತಿಯೊಂದು ದೃಷ್ಟಿಯಲ್ಲೂ ಅತ್ಯಂತ ಆಧುನಿಕವಾದ ಕೇಂದ್ರವನ್ನಾಗಿ ಮಾಡುತ್ತೇವೆಂದು ಮಾನ್ಯ ರಾಜಾರಾಮಣ್ಣನವರು ಹೇಳಿದ್ದಾರೆ. ಆದ್ದರಿಂದ ಇದು ಅತ್ಯಂತ ಉತ್ತಮ ಅಣುವಿದ್ಯುತ್ ಸ್ಥಾವರವಾಗುತ್ತದೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಅಷ್ಟೇ ಅಲ್ಲ, ಮೊನ್ನೆ ಕೂಡ ನನಗೆ ಅವರಿಂದ ಒಂದು ಪತ್ರ ಬಂದಿದೆ. ಸೇಫ್ಟಿ ವಿಚಾರದಲ್ಲಿ ನಾವು ಒಂದು ಹೊಸ ಕಾಯಿದೆಯನ್ನು ಮಾಡಬೇಕಾಗಿದೆ. ಇಂತಿಷ್ಟು ಪರಿಸರದಲ್ಲಿ ಅಂದರೆ ಇಂತಿಷ್ಟು ಪ್ರದೇಶದಲ್ಲಿ ಯಾವುದೇ ರೀತಿಯ ವಸಾಹತುವನ್ನೂ ಮಾಡಕೂಡದೆಂದು ಒಂದು ಕಾಯಿದೆಯನ್ನು ಮಾಡಿ ಅದರ ಮೂಲಕ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ರಾಜಾರಾಮಣ್ಣನವರು ಒಂದು ಪತ್ರವನ್ನು ನನಗೆ ಬರೆದಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಪ್ರಧಾನ ಮಂತ್ರಿಯವರಿಗೆ ನಿನ್ನೆ ಒಂದು ಪತ್ರವನ್ನು ಬರೆದು ಈ ಯೋಜನೆಯನ್ನು ತೆಗೆದುಕೊಂಡರೆ ದೊಡ್ಡ ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತದೆಂದು ತಾವು ಏನು ತಿಳಿದುಕೊಂಡಿದ್ದೀರಿ ಆ ಪ್ರಕಾರ ಅಷ್ಟೊಂದು ಅರಣ್ಯ ಏನೂ ಹೋಗುವುದಿಲ್ಲ, ಇದು ಅತ್ಯಂತ ಉತ್ತಮವಾದ ಯೋಜನೆ, ಬರುವ ೧೦ ವರ್ಷದವರೆಗೆ ನಮಗೆ ಅಗತ್ಯವಿರುವ ವಿದ್ಯುಚ್ಛಕ್ತಿ ಉತ್ಪಾದನೆಗೆ ಸಂಬಂಧಪಟ್ಟಂತೆ ನಾವು ಈಗಲೇ ಒಂದು ಯೋಜನೆಯನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆಂದು ತಿಳಿಸಿದ್ದೇನೆ. ಈ ವಿಚಾರದಲ್ಲಿ ಮಾನ್ಯ ವಿದ್ಯುಚ್ಛಕ್ತಿ ಖಾತೆ ಸಚಿವರಿಗೂ ಮತ್ತು ಕೈಗಾರಿಕಾ ಖಾತೆಯ ಸಚಿವರಿಗೂ

ಅನ್ಯೋನ್ಯ ಸಂಬಂಧ ಇರಬೇಕಾಗುತ್ತದೆ. ಇದು ಒಂದನ್ನು ಬಿಟ್ಟು ಇನ್ನೊಂದು ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲ್‌ರು ೨ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ, ಇಲ್ಲಿ ಸದಸ್ಯರಿಗೆ ಸಂಬಳವನ್ನು ಹೆಚ್ಚು ಮಾಡಿದಿರಿ. ಆದರೆ ನಾವು ಈ ಸಂಬಳವನ್ನು ತೆಗೆದು ಕೊಂಡು ಏನು ಮಾಡುವುದು? ನಮಗೆ ಬೇಕಾಗಿರುವುದು ಸವಲತ್ತುಗಳು ಎಂದು ಹೇಳಿದ್ದಾರೆ. ಅಂದರೆ ಅವರು ಏನಾದರೂ ಟೈಪ್ ಮಾಡಿಸುವುದಕ್ಕೆ ಅಥವಾ ಡಿಕ್ಟೇಟ್ ಮಾಡುವುದಕ್ಕೆ ಅವಕಾಶ ಇರಬೇಕಂತೆ. ಅಂದರೆ ತಮಗೆ ಪ್ರತಿದಿನ ನೂರಾರು ಪತ್ರಗಳು ಬರುತ್ತಿರುತ್ತವೆ, ಅವುಗಳಿಗೆಲ್ಲಾ ಉತ್ತರವನ್ನು ಕೊಡ ಬೇಕಾಗುತ್ತದೆ, ಅದನ್ನೆಲ್ಲ ಕೈಯಲ್ಲಿ ಬರೆಯುತ್ತಾ ಕೂಡುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಶಾಸಕರ ಭವನದಲ್ಲಿ ಬೆರಳಚ್ಚುಗಾರರು ಕುಳಿತುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಕೇಳಿದ್ದಾರೆ. ಇದು ನಮ್ಮ ವಿಧಾನ ಮಂಡಲದ ಕಾರ್ಯದರ್ಶಿಯವರ ವ್ಯಾಪ್ತಿಯಲ್ಲಿ ಬರುವುದರಿಂದ ನಾನು ನಮ್ಮ ವಿಧಾನ ಮಂಡಲದ ಕಾರ್ಯದರ್ಶಿಯವರನ್ನು ಕೇಳಿದಾಗ ಈಗಾಗಲೇ ಇದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ, ಇನ್ನೂ ಹೆಚ್ಚು ವ್ಯವಸ್ಥೆ ಮಾಡಬೇಕೆಂದರೆ ಅದನ್ನು ಮಾಡುವುದಾಗಿ ಹೇಳಿದರು. ಅಧಿವೇಶನ ನಡೆಯಲಿ, ನಡೆಯದಿರಲಿ ಅಲ್ಲಿ ಬೆರಳಚ್ಚುಗಾರರಿಗೆ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ. ಲೋಕ ಸಭೆಯಲ್ಲೂ ಕೂಡ ಇಂಥ ಒಂದು ವ್ಯವಸ್ಥೆ ಇದೆ. ಅದೇ ವ್ಯವಸ್ಥೆಯನ್ನು ನಾವು ಇಲ್ಲಿಯೂ ಕೂಡ ಜಾರಿ ಮಾಡಿದ್ದೇವೆಂದು ಹೇಳಬಯಸುತ್ತೇನೆ.

ಮತ್ತೊಂದು ವಿಚಾರವನ್ನು ಹೇಳುವುದಾದರೆ, ಕಳೆದ ಸಾರಿ ನಾನು, ನನ್ನ ಬಜೆಟ್ ಭಾಷಣದಲ್ಲಿ ಒಂದು ಘೋಷಣೆಯನ್ನು ಮಾಡಿ, ಮಾನ್ಯ ಸದಸ್ಯರು ಕಾರು, ಜೀಪು, ಮುಂತಾದುವನ್ನು ಖರೀದಿ ಮಾಡುವುದಾದರೆ ಅದಕ್ಕೆ ನಾವು ಸಾಲವನ್ನು ಕೊಡುತ್ತೇವೆಂದು ಹೇಳಿದ್ದೇವೆ. ಆದರೆ ಕಳೆದ ಸಾರಿ ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಕಾರಣ, ಇದಕ್ಕೆ ಸಂಬಂಧಪಟ್ಟಂತೆ ನೀತಿ ನಿಯಮ ಗಳನ್ನು ಕಾನೂನಿನಲ್ಲಿ ಮಾಡಬೇಕಾಗಿತ್ತು. ಇದು ಆಗದೇ ಇದ್ದುದರಿಂದ ಜಾರಿಗೆ ಕೊಡಲು ಸಾಧ್ಯ ವಾಗಲಿಲ್ಲ. ಈಗ ಎಲ್ಲ ಕಾನೂನನ್ನು ಮಾಡಿದ್ದಾಗಿದೆ. ಮಾನ್ಯ ಸದಸ್ಯರು ಕಾರು, ಜೀಪು, ಮುಂತಾದು ವನ್ನು ತೆಗೆದುಕೊಳ್ಳುವುದಾದರೆ, ಈಗ ಅದಕ್ಕೆ ಅವಕಾಶ ಇದೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಇದಕ್ಕೂ ಹೆಚ್ಚಿನ ಅನುಕೂಲಗಳನ್ನು ಮಾನ್ಯ ಸದಸ್ಯರು ಬಯಸುವುದಾದರೆ, ಆ ಬಗ್ಗೆ ಸ್ಪಷ್ಟವಾಗಿ ಸೂಚನೆ ಮಾಡಿದರೆ ಅದನ್ನೂ ನಾವು ಸ್ವೀಕಾರ ಮಾಡುತ್ತೇವೆಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಅವರು ಒಂದು ಮಾತನ್ನು ಹೇಳಿದರು. ಏನೆಂದರೆ ಈಗ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಯೂನಿಟ್ ಏನಿದೆ ಅದು ಮತ್ತು ಸರ್ಕಾರದ ಮಾರಾಟ ಸಂಸ್ಥೆ ಏನಿದೆ ಇವೆರಡಕ್ಕೂ ಒಂದಕ್ಕೊಂದು ಸಾಮರಸ್ಯ ಇಲ್ಲ ಎಂದು ಮಾನ್ಯ ಕೈಗಾರಿಕಾ ಮಂತ್ರಿಗಳು ನನಗೆ ಒಂದು ಮಾತನ್ನು ಏನು ಹೇಳಿದ್ದಾರೆಂದರೆ ಇವರಿಬ್ಬರನ್ನೂ ಕರೆಸಿ ಇದನ್ನು ಪುನರ್ ಸಂಘಟನೆ ಮಾಡುತ್ತೇನೆ ಮತ್ತು ಯಾವುದೇ ರೀತಿಯಲ್ಲೂ ನಾವು ಉತ್ಪಾದನೆ ಮಾಡತಕ್ಕಂಥ ದಾಸ್ತಾನು ಉಳಿಯದಿರುವಂತೆ ನೋಡಿಕೊಳ್ಳುತ್ತೇನೆಂದು ಹೇಳಿದ್ದಾರೆ. ಇದನ್ನು ಸಹಕಾರ ಸಂಘಗಳ ಮುಖಾಂತರ ಮಾರಾಟ ಮಾಡುವ ವಿಚಾರವನ್ನೂ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ.

ಇನ್ನು ಸಹಕಾರ ಸಂಘಗಳಲ್ಲಿ ನಾಮಿನೇಷನ್ ಮಾಡತಕ್ಕ ಪದ್ಧತಿ ಹೋಗಬೇಕೆಂದು ಮಾನ್ಯ ಕೆ.ಹೆಚ್. ಪಾಟೀಲ್‌ರವರು ಸೂಚನೆ ಮಾಡಿದ್ದಾರೆ. ಈ ಮಾತನ್ನು ನಾನು ತತ್ವಶಃ ಒಪ್ಪಿಕೊಳ್ಳುತ್ತೇನೆ. ಹಿಂದೆ ಅಂದರೆ ೧೯೭೨ನೇ ಇಸವಿಯಲ್ಲಿ ನಾನು ಸಹಕಾರ ಖಾತೆಯ ಸಚಿವನಾಗಿದ್ದಾಗ ಪ್ರತಿಯೊಂದು ಸಹಕಾರ ಸಂಘಕ್ಕೂ ನಾಮಿನೇಟ್ ಮಾಡಿದವರೇ ಅಧ್ಯಕ್ಷರಾಗಿದ್ದರು. ಇಡೀ ಬೋರ್ಡನ್ನೇ ನಾಮ ಕರಣ ಮಾಡಿದಂಥಾದ್ದು ಇತ್ತು. ಅದನ್ನು ಡೆಮಾಕ್ರೆಟೈಸೇಷನ್ ಮಾಡಿದಂಥ ಕೀರ್ತಿ ಅಂದಿನ ಸರ್ಕಾರಕ್ಕೆ ಹೋಗ ಬೇಕಾಗುತ್ತದೆ. ನಾಮಿನೇಟ್ ಮಾಡುವಾಗ ಮೂರಕ್ಕಿಂತ ಹೆಚ್ಚಿಗೆ ಮಾಡಕೂಡದೆಂದು ನಾವು ಒಂದು ಹೊಸ ಕಾಯಿದೆಯನ್ನು ತಂದಿದ್ದೇವೆ. ಅದಾದ ಮೇಲೆ ದುರ್ದೈವದಿಂದ ಈ ಸಹಕಾರ ಸಂಘ ಗಳಲ್ಲಿ ಬಹಳಷ್ಟು ಸಹಕಾರ ಸಂಘಗಳ ಸ್ವಾಸ್ಥ್ಯ ಚೆನ್ನಾಗಿಲ್ಲ. ಹಣ ದುರುಪಯೋಗವಾಗಿದೆ, ದುರ್ವಿನಿಯೋಗವಾಗಿದೆ ಇದರಲ್ಲಿ ರಾಜಕೀಯ ಬಂದಿದೆ, ಸ್ವಾರ್ಥ ಬಂದಿದೆ. ಈಗ ಇದನ್ನು ನಾವು ತೆಗೆದು ಹಾಕಬೇಕು. ಆದಷ್ಟು ಶೀಘ್ರವಾಗಿ ಪ್ರತಿಯೊಂದು ಸಹಕಾರ ಸಂಘಗಳೂ ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ಶಕ್ತಿಯನ್ನು ಪಡೆದುಕೊಂಡ ಮೇಲೆ ಈ ನಾಮಿನೇಷನ್ ವ್ಯವಸ್ಥೆಯನ್ನು ನಾವು ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಸಿದ್ಧರಿದ್ದೇವೆ ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಅಜ್ಜಿಬಾಳ ಹೆಗಡೆಯವರು ಮತ್ತು ಶಾಣಪ್ಪನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶಾಣಪ್ಪನವರು ಐ. ಎ. ಎಸ್. ಮತ್ತು ಕೆ. ಎ. ಎಸ್. ವಿಚಾರದಲ್ಲಿ ಮಾತನಾಡಿದ್ದಾರೆ. ಅನಂತರ ನಾನು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರಾದ ಅಜ್ಜಿಬಾಳ ಹೆಗಡೆಯವರೂ ಮತ್ತು ಇತರೆ ಕೆಲವು ಮಾನ್ಯ ಸದಸ್ಯರು ಎಲೆಕ್ಟ್ರಾನಿಕ್ಸ್ ಗೂಡ್ಸ್ ಮೇಲೆ ಸೇಲ್ಸ್ ಟ್ಯಾಕ್ಸನ್ನು ಇಳಿಸಿರುವುದನ್ನು ಸ್ವಾಗತಿಸಿದ್ದಾರೆ. ಅವರ ಸೂಚನೆ ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾದಂಥ ಸಾಮಗ್ರಿಗಳ ಮೇಲೆ ತೆರಿಗೆ ಹಾಕಬೇಕು, ಹೊರಗಡೆಯಿಂದ ಬಂದವುಗಳ ಮೇಲೆ ಹಾಕಬಾರದೆಂಬುದು. ಇದನ್ನು ನಾನು ಕಾಯಿದೆಯ ದೃಷ್ಟಿಯಿಂದ ಪರಿಶೀಲನೆ ಮಾಡಿಸಿದೆ. ಇಂಥಾದ್ದೇ ನಿರ್ಣಯವನ್ನು ಮಹಾರಾಷ್ಟ್ರ, ಮಧ್ಯ ಪ್ರದೇಶ ಸರ್ಕಾರಗಳವರು ತೆಗೆದುಕೊಂಡಿದ್ದಾರೆ. ಆ ನಿರ್ಣಯದ ವಿರುದ್ಧ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ಸ್ ಇವೆ. ಮಹಾರಾಷ್ಟ್ರದಲ್ಲಿ ಇವತ್ತೊ ಅಥವಾ ನಾಳೆಯೋ ಆ ಕೇಸು ಹಿಯರಿಂಗ್‌ಗೆ ಬರುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಈ ರೀತಿ ಮಾಡುವುದಕ್ಕಾಗುವುದಿಲ್ಲ. ಅದು ಏನೇ ಇರಲಿ, ಮಹಾರಾಷ್ಟ್ರ ಹೈಕೋರ್ಟ್ ತೀರ್ಪು ಬಂದ ಮೇಲೆ ನಾವೂ ಕೂಡ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

೧-೦೦ ಪಿ. ಎಂ.

ಇನ್ನು ಶ್ರೀಮತಿ ಬೇಗಂರವರು ಎತ್ತಿದಂಥ ಎರಡು ಮಹತ್ವವಾದ ವಿಚಾರಗಳೆಂದರೆ, ಶ್ರೀರಂಗಪಟ್ಟಣ, ಬೇಲೂರು, ಹಂಪೆ ಇಲ್ಲೆಲ್ಲಾ ಸೌಂಡ್ ಅಂಡ್ ಲೈಟ್ ಪ್ರೋಗ್ರಾಮ್ ಏಕೆ ಮಾಡಬಾರದು ಎಂದು ಕೇಳಿರುತ್ತಾರೆ. ಸೌಂಡ್ ಅಂಡ್ ಲೈಟ್ ಮಾಡಲಿಕ್ಕೆ ಖರ್ಚು ವಿಪರೀತವಾಗಿ ಬರುತ್ತದೆ. ಅದು ಎಷ್ಟು ಖರ್ಚು ಬರುತ್ತದೆ. ಎಂಬುದರ ಬಗ್ಗೆ ಅಂದಾಜು ಮಾಡಬೇಕಾಗಿದೆ. ನಾನು ಅದರ ಬಗ್ಗೆ ವಿರುದ್ಧವಾಗಿಲ್ಲ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥದ್ದಾಗಿರುತ್ತದೆ. ಇದು ಪ್ರವಾಸೋದ್ಯಮ ಖಾತೆಯ ಮಂತ್ರಿಗಳಿಗೆ ಸಂಬಂಧಪಟ್ಟದಾಗಿರುತ್ತದೆ. ಯಾರಾದರೂ ಖಾಸಗಿ ಸಂಸ್ಥೆಯವರು ಇದನ್ನು ಮಾಡುತ್ತೇವೆಂದು ಮುಂದೆ ಬಂದರೆ ಅದನ್ನು ಕೂಡ ಪರಿಶೀಲನೆ ಮಾಡಲಿಕ್ಕೆ ಸಾಧ್ಯವಿರುತ್ತದೆ, ಇದರಿಂದ ಬರತಕ್ಕಂಥ ಆದಾಯ ಮತ್ತು ಖರ್ಚು ಎರಡನ್ನೂ ಅವರೇ ವಹಿಸಿಕೊಳ್ಳಿ. ಜನತೆಗೆ ಐತಿಹಾಸಿಕ ಮಾನ್ಯುಮೆಂಟ್ಸ್ ಪರಿಚಯವಾಗಬೇಕೆಂಬುದು ನಮ್ಮ ಉದ್ದೇಶವಾಗಿರುತ್ತದೆ. ಕಾಶ್ಮೀರದಲ್ಲಿ ಮತ್ತು ಡೆಲ್ಲಿಯಲ್ಲಿ ಬಹಳ ಸುಂದರವಾದ ಕಾರ್ಯಕ್ರಮ ಇದಾಗಿರುತ್ತದೆ.

ಇನ್ನು ಮಹಿಳಾ ಉದ್ಯಮಗಳ ಬಗ್ಗೆ ಏನು ಮಾಡಿದ್ದೀರೆಂದು ಕೇಳಿದರು. ಅದಕ್ಕೆ ಉತ್ತರ ಹೇಳುವುದಾದರೆ ಇವರಿಗಾಗಿಯೇ ಒಂದು ಕಾರ್ಪೊರೇಷನ್ ರಚನೆ ಮಾಡುತ್ತಿದ್ದೇವೆ. ಈಗಲೂ ಕೂಡ ಹೊಸದಾಗಿ ಷೆಡ್ಡುಗಳನ್ನು ಕಟ್ಟಿದಾಗ ಇವರುಗಳು ಅರ್ಜಿಯನ್ನು ಕೊಟ್ಟರೆ ಹೆಂಗಸರಿಗೆ ಯಾವುದೇ ಕಾರಣದಿಂದ ರಿಜೆಕ್ಟ್ ಮಾಡುವುದಿಲ್ಲ. ಅವರಿಗೆ ಪ್ರಿಫರೆನ್ಸ್ ಬೇಕಾದರೆ ಕೊಡೋಣ. ಮೇಜರ್ ಇರಿಗೇಷನ್ ಮತ್ತು ರೆವಿನ್ಯೂ ಇಲಾಖೆಗಳ ಬಗ್ಗೆ ಹೇಳಿರುವ ಹಲವಾರು ಸೂಚನೆಗಳನ್ನು ಒಪ್ಪಿಕೊಳ್ಳುತ್ತೇನೆ. ಹೆಂಗಸರಿಗೆ ಪ್ರಿಫರೆನ್ಸ್ ಕೊಡೋಣ. ಮೊದಲು ಈ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬರಲಿ ಅದಕ್ಕೆ ಪೂರ್ವಭಾವಿಯಾಗಿ ನಾವು ರಿಜಿಸ್ಟರ್ ಮಾಡಬೇಕಾಗುತ್ತದೆ. ಬೈಲಾ ತಯಾರು ಮಾಡಬೇಕಾಗುತ್ತದೆ. ಅದನ್ನು ಮಾಡುತ್ತಾ ಇದ್ದೇವೆ. ಮತ್ತೆ ಉರ್ದು ಸ್ಕೂಲ್‌ಗಳಲ್ಲಿ ಕನ್ನಡ ಟೀಚರ್ಸ್‌ಗಳೇ ಇಲ್ಲದಿರುವಾಗ ಕನ್ನಡವನ್ನು ಕಡ್ಡಾಯ ಮಾಡಿದರೆ ತೊಂದರೆಯಾಗುತ್ತದೆಂದು ಬಹಳ ನೊಂದಿರುವಂತೆ ಹೇಳಿದರು. ಹತ್ತುಪ್ಪತ್ತು ವರ್ಷಗಳ ಹಿಂದೆ ಕನ್ನಡ ಕಡ್ಡಾಯವಿರಲಿಲ್ಲ. ಈ ವಿಚಾರದ ಬಗ್ಗೆ ಸರ್ಕಾರ ಈಗಾಗಲೇ ನಿರ್ಣಯ ತೆಗೆದುಕೊಂಡಿರುತ್ತದೆ. ಏನೆಂದರೆ ಪ್ರೊಬೇಷನರಿ ಪಿರೇಡ್‌ನಲ್ಲಿ ನೌಕರರು ಕನ್ನಡ ಕಲಿತುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು. ಮತ್ತೆ ಕನ್ನಡ ಕಲಿಯುವವರಿಗೆ ವಿಶೇಷ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ.

ಇನ್ನು ಮಾನ್ಯ ಬಸವಲಿಂಗಪ್ಪನವರು ರಾಜಿನಾಮೆಯ ವಿಷಯವಾಗಿ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ, ಅದು ನಮ್ಮ ಪಕ್ಷಕ್ಕೆ ಸೇರಿದಂಥ ವಿಚಾರ ಮತ್ತೆ ಇದರಿಂದ ಯಾವುದೇ ರೀತಿಯಾಗಿ ಸರ್ಕಾರದ ಕಾರ್ಯಗಳು ನಿಲ್ಲಲಿಲ್ಲ. ಸರ್ಕಾರದ ಕಾರ್ಯ ಚಟುವಟಿಕೆಯ ಅಸ್ತಿತ್ವಕ್ಕೆ ಭಂಗವಾಗಲಿಲ್ಲ. ಸರ್ಕಾರ ಅಸ್ಥಿರತೆ ಅದಂಥ ಸ್ಥಿತಿಯಲ್ಲಿರಲಿಲ್ಲ. ಒಂದು ಬಹಳ ಮಹತ್ವದ

ತೀರ್ಮಾನ ತಿಳಿದುಕೊಂಡಿರತಕ್ಕಂಥದ ಬಗ್ಗೆ ಅಂದರೆ ಇಲ್ಲಿ ನಾಯಕ್ ಜನಾಂಗವನ್ನು ಷೆಡ್ಯೂಲ್ ಟ್ರೈಬ್ಸ್ ಎಂದು ಹೇಳುತ್ತಿರತಕ್ಕಂಥದ್ದರ ಬಗ್ಗೆ ಪ್ರಸ್ತಾಪ ಮಾಡಿದರು.

ಶ್ರೀ ಬಿ. ಬಸವಲಿಂಗಪ್ಪ.—ಸಂವಿಧಾನಕ್ಕೆ ವಿರುದ್ಧವಾಗಿ ಷೆಡ್ಯೂಲ್ ಟ್ರೈಬ್ಸ್ ಎಂದು ಹೇಳಿ ತಪ್ಪು ಮಾಹಿತಿಗಳನ್ನು ಕೊಟ್ಟು ಬೆನಿಫಿಟ್ ತೆಗೆದುಕೊಳ್ಳುತ್ತಿದ್ದಾರೆ,

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಮುಂದೆ ತಮ್ಮ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಈ ವಿಚಾರದಲ್ಲಿ ನಾವು ಬಹಳ ಸ್ಪಷ್ಟವಾದ ವಿಚಾರ ಉಳ್ಳವರಾಗಿದ್ದೇವೆ. ಸಂವಿಧಾನಕ್ಕೆ ವಿರುದ್ಧವಾಗಿ ಆಗಿರತಕ್ಕಂಥದ್ದು ಯಾವುದೂ ಇಲ್ಲ. ಸಂವಿಧಾನಕ್ಕೆ ವಿರುದ್ಧವಾಗಿರತಕ್ಕಂಥದ್ದು ಏನೂ ಆಗಿಲ್ಲ. ಹಿಂದೆ ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದರು. ಬೇಡ, ನಾಯಕ ಜನಾಂಗದವರು ನಾವು ಪರಿಶಿಷ್ಟ ವರ್ಗವೆಂದು ತೀರ್ಮಾನ ಮಾಡಬೇಕೆಂದು ಕೇಳಿಕೊಂಡಾಗ ಅವರು ತೆಗೆದುಕೊಂಡಿರತಕ್ಕಂಥ ತೀರ್ಮಾನ ಇದು;

ಶ್ರೀ ಬಿ. ಬಸವಲಿಂಗಪ್ಪ.—ಅದು ತಪ್ಪು.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದವರು ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅದರಲ್ಲಿ ಈ ತತ್ಸಂಬಂಧ ಇದ್ದಂತಹ ಹೆಸರು ತಪ್ಪಿಹೋಗಿದೆ. ನಾಯಕ್, ನಾಯಿಕ ಕನ್ನಡದಲ್ಲಿ ಒಂದೇ ಆದರೂ ಇಂಗ್ಲೀಷ್‌ನ ಸ್ಪೆಲ್ಲಿಂಗ್‌ನಲ್ಲಿ ವ್ಯತ್ಯಾಸ ಇರುತ್ತದೆ. Nayak Naik ಈಗ ಬಿ. ಸೋಮ ಶೇಖರ್ ಅವರನ್ನು ನಾಯಿಕ್ ಎಂದು ಮತ್ತು ಅಡಿಷನಲ್ ಚೀಫ್ ಸೆಕ್ರೆಟರಿಯವರನ್ನು ನಾಯಕ್ ಎಂದು ಕರೆಯುತ್ತಾರೆ. ನಾಯಿಕ್ ಎಂದು ಹೇಳತಕ್ಕಂಥದ್ದು ಒಂದು ಮಾತು ಅದು ಒಂದು ಜಾತಿಯ ಹೆಸರಲ್ಲ. ಹೆಗಡೆ ಅಂದರೆ ಹೆಗಡೆ, ಪಟೇಲ್ ಎಂದರೆ ಪಟೇಲ್, ಅಂತಲೇ. ಅದರಲ್ಲಿ ಏನೂ ಅನುಮಾನವಿಲ್ಲ. ಎಲ್ಲ ಜಾತಿಯವರು ಇದ್ದಾರೆ. ಸಮಾಜದೊಳಗೆ ಚೌಧರಿ, ಪಟೇಲ್ ಎಂದು ಕರೆಯುತ್ತಾರೆ, ಗುಜರಾತಿನಲ್ಲಿ ಇನಾಂದಾರ್ ಎಂದು ಕರೆಯುತ್ತಾರೆ. ನಾವು ಮಾಡಿರತಕ್ಕಂಥದ್ದು ಒಂದು ಏನೆಂದರೆ ಯಾವುದೇ ಜನರು ಇದ್ದರೂ ಅವರ ಹೆಸರು ಬೇರೆ ಬೇರೆ ಇದ್ದರೂ ಅವರ ಜನಾಂಗಕ್ಕೆ ಸೇರಿದಂತೆ ಅದರಲ್ಲಿ ಮಹತ್ವವಿರಬೇಕು. ಪರಸ್ಪರ ಸಂಬಂಧ ಇರಬೇಕು ಅಂಥವರನ್ನು ಸೇರಿಸಬೇಕೆಂದು ರೆಕಮೆಂಡೇಷನ್ ಮಾಡಿದ್ದೇವೆ. ಇಲ್ಲಿಂದ ಪತ್ರ ಬರೆದದ್ದು ನಿಜ ಅದಕ್ಕೆ ಅವರು ಏನು ಹೇಳುತ್ತಾರೋ ನೋಡಬೇಕು. ಇದನ್ನು ಸಂಬಂಧಪಟ್ಟ ಆಕ್ಟ್‌ನಲ್ಲಿ ತಿದ್ದುಪಡಿ ಮಾಡದೆ ಪೂರ್ಣ ಜಾರಿಗೆ ತರಲಿಕ್ಕೆ ಆಗುವುದಿಲ್ಲ. ಅದೂ ಅಲ್ಲದೇ ಅವರು ನಮ್ಮ ಸೂಚನೆ ಪರಶೀಲನೆಯಲ್ಲಿದೆ ಎಂದೂ ಕೂಡ ಹೇಳಿದ್ದಾರೆ. ಅದಕ್ಕಾಗಿ ನಾವು ಕೇಂದ್ರ ಸರ್ಕಾರದವರ ತೀರ್ಮಾನಕ್ಕಾಗಿ ಕಾಯುತ್ತಿದ್ದೇವೆ. ಅವರು ಏನು ತೀರ್ಮಾನ ಮಾಡುತ್ತಾರೆ ಎನ್ನುವುದು ಬೇರೆ ಮಾತು ಈಗ ಏನು ಪ್ರಾಸಿಕ್ಯೂಟ್ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿದ್ದೇವೆಯೇ ಹೊರತು ಬೇರೆ ಏನೂ ಮಾಡಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಅವರು ಯಾವರೀತಿ ತಿಳಿದುಕೊಂಡಿರುತ್ತಾರೆ ಅದನ್ನು ಸಭೆಯ ಮುಂದೆ ಇಟ್ಟಿರುತ್ತಾರೆ ನಾನು ತಿಳಿದುಕೊಳ್ಳುವುದಕ್ಕೂ ಅವರು ತಿಳಿದುಕೊಂಡಿರುವುದಕ್ಕೂ ಸಂದರ್ಭ ಬರುವುದಿಲ್ಲ. ೧೯೭೫ ನೇ ಇಸವಿಯಲ್ಲಿ ಸುಪ್ರೀಮ್ ಕೋರ್ಟಿನ ತೀರ್ಮಾನದ ಪ್ರಕಾರ ಯಾವುದೇ ಜಾತಿ ಷೆಡ್ಯೂಲ್ ಕ್ಯಾಸ್ಟ್ ಆಗಬೇಕೆಂದು ಸ್ಪಷ್ಟವಾಗಿ ತೀರ್ಮಾನ ತೆಗೆದುಕೊಂಡು ಪ್ರಯತ್ನ ನಡೆದು ಆ ಜಾತಿಯು ಸೇರ್ಪಡೆ ಆಗಬಹುದು. ಹಾಗೆ ಸೇರ್ಪಡೆಯಾಗದೆ ಹೋದರೆ ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್ ಆಗುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಸುಪ್ರೀಮ್ ಕೋರ್ಟಿನವರು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥ ಹತ್ತಾರು ಜಾತಿ ಪಂಗಡಗಳವರು ಅದರಲ್ಲಿ ಅಫಿಲಿಯೇಟ್ ಆಗಿರತಕ್ಕಂಥದ್ದು ಇವೆ. ಇದು ಸಂಬಂಧಪಟ್ಟ ಜಾತಿಯೇ ಹೊರತಾಗಿ ಶಾಶ್ವತವಾಗಿ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಗೋಂದ ಎನ್ನುವುದು ಒಂದು ಪಂಗಡ. ಈ ಗೋಂದ ಪಂಗಡದಲ್ಲಿ ೪೦ ಉಪಪಂಗಡಗಳು ಇರುತ್ತವೆ. ಇದರಲ್ಲಿ ಮಾನ ಎನ್ನತಕ್ಕಂಥದ್ದು ಒಂದು ಪಂಗಡ. ಮಾನಾ ಕ್ಷತ್ರಿಯರು ಎನ್ನತಕ್ಕಂಥವರು ಷೆಡ್ಯೂಲ್ ಟ್ರೈಬ್ಸ್ ಎಂದು ನೋಂದಾಯಿಸಿಕೊಂಡು ಚುನಾವಣೆಯಲ್ಲಿ ನಿಂತು ಗೆದ್ದು ಒಂದು ಸದಸ್ಯರಾಗಿದ್ದಾರೆ. ಮಾನ ಕ್ಷತ್ರೀಯರನ್ನೂ ಸೇರಿಸಬೇಕೆಂದು ಕೇಂದ್ರ ಸರ್ಕಾರದಲ್ಲಿ ರೆಪ್ರಸೆಂಟೇಷನ್ ಹೋಗಿ ಸೇರಿಸಿಕೊಂಡಿದ್ದಾರೆ. ಹಾಗೆಯೇ ಕರ್ನಾಟಕ ರಾಜ್ಯದಲ್ಲಿ ನಾಯಿಕ್ ಎಂದು ನಿರ್ದಿಷ್ಟವಾಗಿರತಕ್ಕಂಥ ಷೆಡ್ಯೂಲ್ ಟ್ರೈಬ್ಸ್ ಪಂಗಡಕ್ಕೆ ನಾಯಕ್ ನಾವು ಒಂದು ಉಪ ಪಂಗಡವೆಂದು ಹೇಳಿಬಿಟ್ಟು ನಮ್ಮನ್ನೂ

ಸೇರಿಸಬೇಕೆಂದು ಇವರು ಕೇಳುತ್ತಿದ್ದಾರೆ. ಸ್ವತಂತ್ರವಾಗಿ ನೇರವಾಗಿ ಇವರು ನಾಯಿಕ್ ಜಾತಿಯವರಲ್ಲ ಇವರು ಏನಾದರೂ ಸೇರಬೇಕಾದರೆ ರಾಷ್ಟ್ರೀಯ ಪಾರ್ಲಿಮೆಂಟ್‌ನಲ್ಲಿ ೩೪೧ (೨) ಮತ್ತು ೩೪೨ (೨)ನೇ ಕಾನ್ಸ್ಟಿಟ್ಯೂಷನ್ ಕಲಮ್ ಪ್ರಕಾರ ಸೇರಿಸಲು ಪ್ರಯತ್ನ ಮಾಡಲಿ ಅದಕ್ಕೆ ನನ್ನದು ಏನೂ ಅಭ್ಯಂತರವಿಲ್ಲ

ಅಲ್ಲಿಯವರೆಗೆ ಸುಳ್ಳು ಜಾತಿಪತ್ರ ಹಾಗೂ ಸುಳ್ಳು ಜಾತಿಗಳೂ ಹುಟ್ಟಿಕೊಳ್ಳುತ್ತವೆ. ರಾಜ್ಯಾಂಗಬದ್ಧವಾಗಿ ತಾವು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ. ಪರಿಶಿಷ್ಟ ಜಾತಿ ಮತ್ತು ವರ್ಗದವರ ವಿಷಯದಲ್ಲಿ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡರೆ ಆಗ ಅದು ಕಂಟೆಂಪ್ಟ್ ಆಫ್ ಕಾನ್ಸ್ಟಿಟ್ಯೂಶನ್ ಆಗುತ್ತದೆ. ತಾವು ತಮ್ಮ ಸಹೋದ್ಯೋಗಿಗಳ ಪ್ರಭಾವಕ್ಕೆ ಮಣಿದು, ತಪ್ಪಾಗಿ ನಡೆದುಕೊಳ್ಳಬೇಡಿ ಎಂದು ನಾನು ಹೇಳುತ್ತಿರುವುದು. ಇವತ್ತು ಯಾವುದೇ ಜಾತಿಯವರೇ ಆಗಲಿ, ಜನಾಂಗದವರೇ ಆಗಲಿ, ಶೆಡ್ಯೂಲ್ಡ್ ಟ್ರೈಬ್‌ಗೆ ಬರಬೇಕಾದರೆ ಮೊದಲು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಿ. ಆದರೆ ತಾವು ಆ ಪಟ್ಟಿಯಲ್ಲಿ ಇಲ್ಲದೇ ಇದ್ದರೂ ಕೂಡ ಸುಳ್ಳು ಜಾತಿಪತ್ರ ತೆಗೆದುಕೊಂಡು ಯಾರಿಗೆ ನಿಜವಾಗಿಯೂ ಅನುಕೂಲ ಸಿಗಬೇಕಾಗಿತ್ತೋ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಹುಣಸೂರು ತಾಲೂಕಿನಲ್ಲಿ ನೋಡಬಹುದು, ಬಿಳಿಗಿರಿರಂಗನ ಬೆಟ್ಟದಲ್ಲಿ ನೋಡಬಹುದು. ದಿಕ್ಕಿಲ್ಲದವರು ನಿರ್ಗತಿಕರಾಗಿರುವವರು ಯಾರು ಟ್ರೈಬಲ್ಸ್ ಇದ್ದಾರೆ, ಇಂತಹ ಜನಕ್ಕೆ ಸಲ್ಲಬೇಕಾದ ಹಕ್ಕು ಏನು ಇರುತ್ತದೆ ಅದನ್ನು ಕಿತ್ತುಕೊಳ್ಳುವ ಪ್ರಯತ್ನ ಬೇಡವೆಂದು ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಮಂಡಿಸಿದ್ದಾರೆ. ಈ ಬಗ್ಗೆ ಕೇಂದ್ರದಿಂದ ಕೊನೇ ತೀರ್ಮಾನ ಏನು ಬರುತ್ತದೆ ಎಂದು ನಾವು ಕಾದು ನೋಡೋಣ.

ಶ್ರೀ ಬಿ. ಬಸವಲಿಂಗಪ್ಪ —ಈಗ ಹುಕುಂ ಮಾಡಿದ್ದಾರಲ್ಲ. ಅವರ ಪ್ರಕಾರ ಸುಳ್ಳು ಜಾತಿಪತ್ರ ತೆಗೆದುಕೊಂಡು ಉದ್ಯೋಗಗಳಿಗೆ ಸೇರಿದ್ದಾರೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ? ನನಗೆ ಜಾತಿ ವ್ಯಾಮೋಹ ಇಲ್ಲ. ನಾನು ಒಬ್ಬ ಮನುಷ್ಯನಾಗಿದ್ದೇನೆ. ಈ ಸಮಾಜಕ್ಕೆ ನ್ಯಾಯ ಸಿಗಬೇಕೆಂದು ಮೊದಲಿನಿಂದಲೂ ಹೋರಾಟ ಮಾಡುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ನಾನು ಇದಕ್ಕಿಂತ ಹೆಚ್ಚಿಗೆ ಹೇಳತಕ್ಕದ್ದು ಏನೂ ಇಲ್ಲ. ಕೇಂದ್ರಸರ್ಕಾರದವರು ಏನು ಕೊನೆಯ ತೀರ್ಮಾನಕ್ಕೆ ಬರುತ್ತಾರೆ, ಆ ತೀರ್ಮಾನಕ್ಕೆ ನಾವು ಬದ್ಧರು. ಸಂವಿಧಾನಕ್ಕೆ ವಿರುದ್ಧವಾಗಿ ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೇಳಿದ್ದಕ್ಕೆ ನೀವು ಏನೂ ಹೇಳಲಿಲ್ಲ. ಆಗಲಿ, ನನ್ನ ಕೆಲಸ ನಾನು ಮಾಡುತ್ತೇನೆ, ನಿಮ್ಮ ಕೆಲಸವನ್ನು ನೀವು ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಮತ್ತು ಒಬ್ಬಿಬ್ಬರು ಸದಸ್ಯರು ಲಂಚದ ವಿಚಾರದಲ್ಲಿ ಬಹಳ ಉಗ್ರವಾಗಿ ಮಾತನಾಡಿದರು. ನಾನು ಈಗ ಲಂಚ ಹೋಗಿದೆ ಎನ್ನುವ ಮಾತನ್ನು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತಾದೀತು. ಇವತ್ತು ಕೂಡ ಲಂಚ ಇದೆ ಎಂಬುದನ್ನು ನಾನು ಒಪ್ಪಬೇಕಾಗುತ್ತದೆ. ನಮ್ಮ ಆಡಳಿತ ವ್ಯವಸ್ಥೆಯ ಕೆಳಮಟ್ಟದ ಕಚೇರಿಗಳಲ್ಲಿ, ಅಂದರೆ, ತಾಲೂಕು ಕಚೇರಿಯೆಂದು ಹೇಳಿ, ಬಿ.ಡಿ.ಒ. ಕಚೇರಿಯೆಂದು ಬೇಕಾದರೆ ಹೇಳಿ, ಸಾಮಾನ್ಯವಾಗಿ ಎಲ್ಲೆಲ್ಲ ಲಂಚಗುಳಿತನ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ನಿವಾರಣೆ ಮಾಡುವ ಬಗೆ ಹೇಗೆ ? ಒಂದೊಂದು ಸಲ ನನಗೇನು ಅನ್ನಿಸುತ್ತದೆ ಎಂದರೆ ಇದು ಅಸಾಧ್ಯವಾದ ಕೆಲಸವೇನೋ ಎಂದು. ಇಷ್ಟರಮಟ್ಟಿಗೆ ಈ ರೋಗ ಸಾರ್ವತ್ರಿಕವಾಗಿ ಹಬ್ಬಿದೆ. ಈಗ ಲೋಕಾಯುಕ್ತ ಮತ್ತು ಉಪಲೋಕಾಯುಕ್ತವನ್ನು ರಚನೆ ಮಾಡಿದ್ದೇವೆ. ಇವುಗಳನ್ನು ರಚಿಸಲು ಸ್ವಲ್ಪ ವಿಳಂಬವಾಯಿತು. ಏಕೆ ವಿಳಂಬವಾಗಿದೆಯೆಂದು ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಲೋಕಾಯುಕ್ತದಿಂದ ಏನು ಪ್ರಯೋಜನ ಎಂದು ಕೇಳಿದರು ? ಮೊನ್ನೆ ಯಾರೋ ಒಬ್ಬರು ಒಂದು ಅರ್ಜಿಯನ್ನು ತೆಗೆದುಕೊಂಡು ಹೋದರು ಆಗ ಲೋಕಾಯುಕ್ತ ಕಚೇರಿಯಲ್ಲಿ 'ಇದನ್ನು ಇಲ್ಲಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ' ಎಂದು ಹೇಳಿದರಂತೆ. ಎಂಬುದಾಗಿ ಹೇಳಿದರು. ಆದರೆ ಕಾಯಿದೆ ಪ್ರಕಾರ ಯಾವ ಅರ್ಜಿಯನ್ನು ಲೋಕಾಯುಕ್ತದವರು

ತೆಗೆದುಕೊಳ್ಳಬೇಕು, ಎಂತಹ ಸಂದರ್ಭದಲ್ಲಿ ತೆಗೆದುಕೊಳ್ಳಬೇಕು, ಯಾವ ರೀತಿ ಅರ್ಜಿಯನ್ನು ಬರೆಯಬೇಕು ಮತ್ತು ಯಾವ ಅರ್ಜಿಗಳನ್ನು ಉಪಲೋಕಾಯುಕ್ತದವರು ತೆಗೆದುಕೊಳ್ಳಬೇಕು ಎಂಬುದು ಸ್ಪಷ್ಟವಾಗಿ ನಿಯಮಗಳಲ್ಲಿ ನಮೂದಾಗಿದೆ ಆದ್ದರಿಂದ ಯಾರಾದರೂ ಹೋಗಿ ಯಾವುದೋ ಅರ್ಜಿಯನ್ನು ಕೊಟ್ಟಮಾತ್ರಕ್ಕೆ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ರಚನೆ ಮಾಡಿದ ಮಾತ್ರಕ್ಕೆ ಲಂಚಗುಳಿತನ ನಿರ್ನಾಮವಾಗುತ್ತದೆ ಎಂದು ನಂಬುವವನು ನಾನಲ್ಲ. ಎರಡು ವಿಷಯಗಳನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ ಮೊದಲನೆಯದು ಉಗ್ರವಾದ ಶಿಕ್ಷೆ ವಿಧಿಸುವ ಬಗ್ಗೆ. ಮಾನ್ಯ ಅಧ್ಯಕ್ಷರೇ ವಿಜಿಲೆನ್ಸ್ ಕಮೀಶನ್‌ನವರು ಯಾವ ಅಧಿಕಾರಿಯ ವಿರುದ್ಧ ಲಂಚಗುಳಿತನ ಆಪಾದನೆ ಹೇರಿ, ಅದು ಸ್ಥಿರವಾದಮೇಲೆ ಅಂತಹವರಿಗೆ ಕನಿಷ್ಠ ಶಿಕ್ಷೆ ಎಂದರೆ ನೌಕರಿಯಿಂದ ತೆಗೆದುಹಾಕಬೇಕೆಂದು ನಿಯಮ ಮಾಡಿದೆಯೋ, ಆ ಬಗ್ಗೆ ಇವತ್ತಿನವರೆಗೂ ಒಂದೂ ಕೇಸಿನಲ್ಲೂ ನಾವು ಆ ಸೂಚನೆಯನ್ನು ಬದಲಾಯಿಸಲಿಲ್ಲ. ಮತ್ತು ಇನ್ನು ಮುಂದೆ ಕೂಡ ನಮ್ಮ ನೀತಿ ಇದೇ ರೀತಿ ಇರುತ್ತದೆ. ಸರ್ಕಾರದ ಹೊರತಾಗಿ ಮತ್ತೊಂದು ವಿಚಾರ ಇದೆ. ಸಾರ್ವಜನಿಕರು ಮತ್ತು ಸಾರ್ವಜನಿಕ ಮುಖಂಡರು ಈ ಲಂಚಗುಳಿತನದ ವಿರುದ್ಧವಾದ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ ಇಂತಹ ವಾತಾವರಣ ನಿರ್ಮಾಣವಾದರೆ, ಲಂಚಗುಳಿತನ ಎಷ್ಟು ಅನಿಷ್ಟಕಾರಕವಾದದ್ದು, ಲಂಚ ತೆಗೆದುಕೊಳ್ಳುವುದು ಎಷ್ಟು ಖಂಡನೀಯವೋ, ಅಷ್ಟೇ ಖಂಡನೀಯ ಲಂಚ ಕೊಡುವವನು ಕೂಡ ಎನ್ನತಕ್ಕ ವಾತಾವರಣವನ್ನು ನಿರ್ಮಾಣ ಮಾಡಬೇಕು. ಈ ವಾತಾವರಣ ನಿರ್ಮಾಣವಾಗುವವರೆಗೆ ನನಗನ್ನಿಸುತ್ತದೆ, ಈ ಲಂಚಗುಳಿತನ ರೋಗವನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಕಷ್ಟವಾಗಬಹುದು. ಇನ್ನು ಶ್ರೀಮಾನ್ ಜಿ. ನಾರಾಯಣಕುಮಾರ್ ಅವರು ತಮ್ಮದೇ ಆದ ಶೈಲಿಯಲ್ಲಿ ಕನ್ನಡದ ಬಗ್ಗೆ, ಕನ್ನಡಾಂಬೆಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು. ಅನೇಕ ಸೂಚನೆಗಳನ್ನು ಕೂಡ ಅವರು ಮಾಡಿದರು ಆ ಸೂಚನೆಗಳಲ್ಲಿ ಅನೇಕವನ್ನು ನಾನು ಸ್ವಾಗತ ಮಾಡುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮತ್ತು ಈ ಸಂದರ್ಭದಲ್ಲಿ ಇಷ್ಟು ಹೇಳಬಯಸುತ್ತೇನೆ, ಏನೆಂದರೆ, ಕರ್ನಾಟಕದಲ್ಲಿರತಕ್ಕಂಥ ನಮ್ಮ ಕನ್ನಡಿಗರು ಮತ್ತು ಕರ್ನಾಟಕದ ಹೊರಗಡೆ ಕನ್ನಡಿಗರು ಏನು ಇದ್ದಾರೆ, ಅವರ ಭಾಷೆ, ಸಂಸ್ಕೃತಿ, ಹಾಗೂ ಪರಂಪರೆ–ಇವುಗಳನ್ನು ರಕ್ಷಣೆ ಮಾಡುವುದಕ್ಕೋಸ್ಕರ ಈ ಸರ್ಕಾರ ಎಂದೂ ಹಿಂದೆ ಬೀಳುವುದಿಲ್ಲ ಈ ಬಗ್ಗೆ ನಾವು ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಗಡಿವಿವಾದದ ವಿಚಾರವಾಗಲೀ, ಅಥವಾ ಕನ್ನಡಿಗರ ಮೇಲೆ ಬೇರೆಯವರಿಂದ ಅನ್ಯಾಯವಾದ ವಿಚಾರವಾಗಲೀ, ಅದಕ್ಕಾಗಿ ನಾನು ಹೇಳಿದೆ. ಈ ಕಾವಲು ಸಮಿತಿ ಒಂದು ಭಾಗ ಆಯಿತು. ಹಾಗೆಯೇ ಕನ್ನಡಿಗರಿಗೆ ನೌಕರಿ ಸಿಗುವ ವಿಚಾರದಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅದನ್ನು ಸ್ಟ್ಯಾಂಡಿಂಗ್ ಕಮಿಟಿಯನ್ನಾಗಿ ಮಾಡತಕ್ಕಂಥ ಪ್ರಸಂಗ ಬಂದರೆ, ಎಷ್ಟು ಕಾಲ ಅವಶ್ಯಕತೆ ಇದೆಯೋ ಅಷ್ಟು ಕಾಲ ಅದನ್ನು ಮುಂದುವರೆಸಿಕೊಂಡು ಹೋಗಲಿಕ್ಕೆ ಸರ್ಕಾರ ಸದಾ ಸಿದ್ಧ ಇದೆ ಎಂದು ಈಗಾಗಲೇ ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಮೊಯಿಲಿಯವರು ಕೆಲವು ಉತ್ತಮವಾದಂಥ ಸಲಹೆಗಳನ್ನು ಮಾಡಿದರು. ಅವರು ಒಂದು ಮಾತನ್ನು ಪ್ರಾರಂಭದಲ್ಲಿ ಹೇಳಿದರು. ಏನೆಂದರೆ ವರ್ಕ್ ಕಂಟ್ರಾಕ್ಟ್ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನಿರ್ಣಯವಾದಮೇಲೆ ರೂಲ್ಸ್ ಮಾಡಲಿಕ್ಕೆ ನೀವು ಬಹಳ ವಿಳಂಬ ಮಾಡಿದ್ದೀರಿ. ಇದರಿಂದಾಗಿ ಬರತಕ್ಕಂಥ ಆದಾಯ ಬರಲಿಲ್ಲವೆಂದು ಹೇಳಿದರು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೂಲ್ಸ್ ಮಾಡುವಲ್ಲಿ ವಿಳಂಬ ಆಗಿದೆ, ನಿಜ. ನಮ್ಮ ಕಾಯದೆ ಇಲಾಖೆಯಲ್ಲಿ ಕೆಲಸದ ಒತ್ತಡ, ಕಾಯದೆ ಮಾಡುವುದು ಮತ್ತೊಂದು ಅಂತ ಇರುವುದರಿಂದ ಸ್ವಲ್ಪಮಟ್ಟಿಗೆ ವಿಳಂಬವಾಗಿದೆ. ಇನ್ನು ವಿಳಂಬವಾಗುವುದಿಲ್ಲ, ಆದಷ್ಟು ಬೇಗ ಇದನ್ನು ಜಾರಿಗೆ ತರುತ್ತೇವೆ ಎಂದು ಹೇಳುತ್ತೇನೆ. ಮಾನ್ಯ ಮೊಯಿಲಿಯವರು ಸೇಲ್ಸ್ ಟ್ಯಾಕ್ಸ್ ಹೆಚ್ಚಿಲ್ಲ ಎನ್ನತಕ್ಕ ಮಾತನ್ನು ಹೇಳಿದರು, ಇದು ಸರಿ ಅಲ್ಲ. ಸೇಲ್ಸ್ ಟ್ಯಾಕ್ಸ್ ಎಂದರೆ ಕೆ.ಎಸ್.ಟಿ. ಮತ್ತು ಸಿ.ಎಸ್.ಟಿ. ಎಂದು ವಿಂಗಡಣೆ ಮಾಡಿ ನೋಡಿದರೆ ಅದು ಸರಿಯಾದ ಚಿತ್ರವನ್ನು ಕೊಡುವುದಿಲ್ಲ.

ಈಗ ೧೯೮೧-೮೨ರಲ್ಲಿ ೩೧೨ ಕೋಟಿ ರೂಪಾಯಿಗಳ ಆದಾಯವಿದ್ದರೆ ಈಗ ೧೯೮೨-೮೩ರಲ್ಲಿ ಇದು ೩೪೪ ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ಅಂದರೆ ಹೆಚ್ಚಿದು

ಕೇವಲ ಶೇಕಡಾ ೮.೧ ರಷ್ಟು. ಆಗ ಮಾನ್ಯ ವೀರಪ್ಪ ಮೊಯ್ಲಿ ಅವರೇ ಅರ್ಥಮಂತ್ರಿಗಳಾಗಿದ್ದರು. ಇದು ೧೯೮೩-೮೪ರಲ್ಲಿ ೩೦೭ ಕೋಟಿ ರೂಪಾಯಿಗಳಿಗೆ ಹೆಚ್ಚಳವಾಯಿತು. ಅಂದರೆ ಹೆಚ್ಚಿದ್ದು ಶೇಕಡಾ ೧೮.೧ ರಷ್ಟು. ೧೯೮೪-೮೫ರಲ್ಲಿ ಇದು ೪೮೫ ಕೋಟಿ ರೂಪಾಯಿಗಳಿಗೆ ಹೆಚ್ಚಿತು. ಅಂದರೆ ಶೇಕಡಾ ೧೯.೨ ರಷ್ಟು ಹೆಚ್ಚಳವಾಯಿತು. ೧೯೮೫-೮೬ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಹೆಚ್ಚಿದ್ದು ೫೮೩ ಕೋಟಿ ರೂಪಾಯಿಗಳಿಗೆ. ಅಂದರೆ ಶೇಕಡಾ ೨೦.೧ ರಷ್ಟು ಹೆಚ್ಚಳ ಆಯಿತು. ಈ ರೀತಿಯ ಹೆಚ್ಚಳಕ್ಕೆ ಹಣದುಬ್ಬರ (ಇನ್‌ಫ್ಲೇಷನ್) ಸಹ ಕಾರಣ ಎಂದು ಮಾನ್ಯ ಮೊಯಿಲಿ ಅವರು ಹೇಳಿದರು. ಆದರೆ ಅದನ್ನು ಇದರಲ್ಲಿ ಸೇರಿಸುವುದಕ್ಕೆ ಬರುವುದಿಲ್ಲ ಒಂದು ವೇಳೆ ಅದನ್ನು ಸೇರಿಸಿ ಕೊಂಡರೂ ಸಹ ಶೇಕಡಾ ೮ ರಿಂದ ಶೇಕಡಾ ೧೨ ರವರೆಗೆ ಹೆಚ್ಚುತ್ತಿತ್ತು. ಈ ಬಗ್ಗೆ ಮಾನ್ಯ ಮೊಯ್ಲಿ ಅವರು ಒಂದು ಮಾತನ್ನು ಮರೆಯಬಾರದು. ಅದೇನೆಂದರೆ, ಕಳೆದ ಮೂರು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಇತ್ತು. ಆದ್ದರಿಂದ ಕೈಗಾರಿಕಾ ಕ್ಷೇತ್ರ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆ ಕಡಿಮೆ ಆಯಿತು. ಈ ಕ್ಷೇತ್ರಗಳಲ್ಲಿ ಉತ್ಪಾದನೆ ಕಡಿಮೆಯಾದರೂ ಸಹ ಸೇಲ್ಸ್ ಟ್ಯಾಕ್ಸ್‌ನ ವರಮಾನ ವೃದ್ಧಿಯಾಗುತ್ತಿದೆ. ಒಂದು ವೇಳೆ ಅಭಾವ ಇಲ್ಲದಿದ್ದರೆ ಸೇಲ್ಸ್ ಟ್ಯಾಕ್ಸ್‌ನಲ್ಲಿ ನನ್ನ ಅಂದಾಜಿನ ಪ್ರಕಾರ ಕಳೆದ ವರ್ಷ ಅಂದರೆ ೧೯೮೫-೮೬ರಲ್ಲಿ ಕೊನೆಯಪಕ್ಷ ೫೮೩ ಕೋಟಿ ರೂಪಾಯಿಗಳಿಗೆ ಬದಲು ೭೦೦ ಕೋಟಿ ರೂಪಾಯಿಗಳಿಗೆ ಹೆಚ್ಚುತ್ತಿತ್ತು. ಆ ಒಂದು ಗುರಿಯನ್ನು ಮುಟ್ಟಬಹುದಾಗಿತ್ತೆಂಬ ವಿಶ್ವಾಸ ನನಗಿತ್ತು. ಆದರೆ ದುರ್ದೈವದಿಂದ ಈ ಎರಡು ಕ್ಷೇತ್ರಗಳಲ್ಲಿ ಉತ್ಪಾದನೆ ಕಡಿಮೆ ಆಯಿತು. ಈ ಕ್ಷೇತ್ರಗಳ ಮೂಲಕ ನಮಗೆ ಬಹಳಷ್ಟು ಹಾನಿ ಮತ್ತು ಬಹಳಷ್ಟು ಲಕ್ಷಾನಾದರೂ......

ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯ್ಲಿ ಅವರು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ತೆಲಗು ಗಂಗಾ ವಿಚಾರದಲ್ಲಿ. ಈ ವಿಚಾರದಲ್ಲಿ ಮತ್ತೊಂದು ಸಲ ಹೇಳಿದ್ದನ್ನೇ ಹೇಳತಕ್ಕಂಥ ಅಗತ್ಯವಿಲ್ಲವೆಂಬುದು ನನ್ನ ಭಾವನೆ. ಈಗ ಕೆಲವು ದಿವಸಗಳ ಹಿಂದೆ ಈ ಸದನದಲ್ಲಿ ಮಾನ್ಯ ನೀರಾವರಿ ಮಂತ್ರಿಗಳು ಈ ವಿಚಾರದಲ್ಲಿ ನಮ್ಮ ಸರ್ಕಾರದ ನಿಲುವೇನೆಂಬುದನ್ನು ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾರೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ ಅಂದರೆ ಪ್ರಧಾನಮಂತ್ರಿಗಳಿಗೆ ಎರಡು ಸಲ ಪತ್ರ ಬರೆದಿದ್ದೇನೆ. ಆಂಧ್ರದ ಮುಖ್ಯಮಂತ್ರಿಗಳಿಗೂ ಮತ್ತು ನನಗೂ ಯಾವುದೇ ರೀತಿಯ ವೈಯಕ್ತಿಕ ಸಂಬಂಧವಿದ್ದರೂ ಸಹ, ಈ ವಿಚಾರದಲ್ಲಿ ನಮ್ಮ ರಾಜ್ಯದ ಹಿತಕ್ಕೆ ಸಂಬಂಧ ಪಟ್ಟಂತೆ ಏನಾದರೂ ಧಕ್ಕೆಯಾಗುವುದಿದ್ದರೆ, ಅದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತೇನೆ. ಈ ವಿಚಾರದಲ್ಲಿ...

ಶ್ರೀ ಎಂ. ರಾಮಪ್ಪ.—ಈ ಬಗ್ಗೆ ಮೊನ್ನೆ ಶ್ರೀ ಎನ್.ಟಿ. ರಾಮರಾವ್ ಅವರು ಮತ್ತೊಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ,

ಶ್ರೀ ರಾಮಕೃಷ್ಣ ಹೆಗಡೆ.—ಅವರು ಕೊಟ್ಟರೆ ನಾನು ಏನು ಮಾಡಲಿ? ಅವರಿಗೆ ಸ್ಟೇಟ್‌ಮೆಂಟ್ ಕೊಡಬೇಡಿ ಎಂದು ಹೇಳುವುದಕ್ಕಾಗುತ್ತದೆಯೆ?

ಶ್ರೀ ಎಂ. ರಾಮಪ್ಪ.—ಸ್ಟೇಟ್‌ಮೆಂಟ್ ಕೊಡಬೇಡಿ ಎಂದು ಹೇಳುವುದಕ್ಕೆ ನಮಗಾಗಲೀ ಅಥವಾ ನಿಮಗಾಗಲೀ ಅಧಿಕಾರವಿಲ್ಲ. ಆದರೆ ಅವರ ಅಭಿಪ್ರಾಯದಲ್ಲಿ ಏನೋ ಇದೆ. ಇದರಲ್ಲಿ ಏನೋ ಇದೆ ಎಂಬ ಸಂಶಯ ನಮಗೆ ಮೂಡುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಏನಾದರು ಒಳಗಡೆ ಇದ್ದರೆ ಏನಿರಬೇಕು? ಅದನ್ನು ನೀವೇ ಹೇಳಿ? ಈಗ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳು ಮೊನ್ನೆ ತಾನೆ ಈ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲಿ ಸ್ಪಷ್ಟವಾಗಿ ಕೇಂದ್ರ ಸರ್ಕಾರದ ನಿಲುವೇನೆಂಬುದನ್ನು ವ್ಯಕ್ತ ಮಾಡಿದ್ದಾರೆ. ಅವರು ಅತಿ ಸ್ಪಷ್ಟವಾಗಿ ಹೇಳಿದ ಮೇಲೂ ಸಹ ನಮಗೆ ಸಂದೇಹ ಏಕೆ?

ಶ್ರೀ ಬಿ. ಬಸವಲಿಂಗಪ್ಪ.—ನಮಗೆ ಸಂದೇಹ ಬಂದರೆ, ಅದನ್ನು ಇಲ್ಲಿ ಹೇಳಬೇಕಾಗುತ್ತದೆ. ಅವರು ಆ ರಾಜ್ಯದಲ್ಲಿ ನಾನೇ ಸಾರ್ವಭೌಮ. ನಾನು ಯಾರ ಮಾತನ್ನು ಕೇಳದೆ ಈ ಯೋಜನೆಯ

ಕೆಲಸವನ್ನು ಮಾಡಿಕೊಂಡು ಹೋಗುತ್ತೇನೆಂದು ಹೇಳಿದ್ದಾರೆ. ಅವರ ಹೆಸರಿನ ಪ್ರಾರಂಭದಲ್ಲಿ ರಾಮ ಎಂದು ಇದೆ. ನಿಮ್ಮ ಹೆಸರಿನ ಪ್ರಾರಂಭದಲ್ಲಿಯೂ ರಾಮ ಎಂದು ಇದೆ. ಆದ್ದರಿಂದ ಇದಕ್ಕೆ ನೀವೇ ಉತ್ತರ ಹೇಳಿ.

೧-೩೦ ಪಿ.ಎಂ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಪುನಃ ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾದ ಅಗತ್ಯ ಏನು ಎಂದರೆ, ಆಂಧ್ರ ಪ್ರದೇಶದವರು, ಕೃಷ್ಣ ನದಿಯಲ್ಲಿ ಸಿಕ್ಕುವ ಸರ್‌ಪ್ಲಸ್ ವಾಟರ್‌ನ್ನು ಅವರಿಗೆ ಬೇಕಾದಂತೆ ಉಪಯೋಗಿಸಿಕೊಳ್ಳಬಹುದು ಎನ್ನುವ ರೀತಿಯಲ್ಲಿ ಹೇಳಿದಂತಾಗುತ್ತದೆ. ಬಚಾವತ್ ಅವಾರ್ಡ್‌ನಲ್ಲೂ ಸಹ ಈ ಸರ್‌ಪ್ಲಸ್ ವಾಟರ್‌ನ್ನು ಆಂಧ್ರ ಮತ್ತು ಕರ್ನಾಟಕ ಹಾಗು ತಮಿಳುನಾಡಿಗೆ ಉಪಯೋಗಿಸಿಕೊಳ್ಳಬಹುದು ಎಂದು ಇದೆ. ಕರ್ನಾಟದವರಿಗೆ ಸರ್‌ಪ್ಲಸ್ ವಾಟರ್‌ನ್ನು ಬಿಡದೇ ಆಂಧ್ರ ಮತ್ತು ತಮಿಳುನಾಡಿನವರೇ ಉಪಯೋಗಿಸಿಕೊಳ್ಳುವುದಕ್ಕೆ ಬರುವುದಿಲ್ಲ. ನಮ್ಮ ಪಾಲನ್ನು ನಮಗೆ ಕೊಡಲೇಬೇಕು. ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ಸರಪ್ಲಸ್ ನೀರನ್ನು ಅವರಿಗೆ ಬೇಕಾದಂತೆ ಉಪಯೋಗಿಸಿಕೊಳ್ಳುವುದಕ್ಕೆ ಬರುವುದಿಲ್ಲ ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಇದರ ಬಗ್ಗೆ ತಮ್ಮ ಸ್ಪಷ್ಟ ನಿಲುವು ಏನು ಎಂಬುದನ್ನು ಹೇಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ವಿಷಯಗಳನ್ನು ಹೇಳುತ್ತೇನೆ ಕೇಂದ್ರ ನೀರಾವರಿ ಮಂತ್ರಿಯವರು. ಈ ಕೃಷ್ಣಾ ನದಿಯ ನೀರನ್ನು ಉಪಯೋಗಿಕೊಳ್ಳುವ ಬಗ್ಗೆ ಉದ್ಭವವಾಗಿರುವ ಸಮಸ್ಯೆಯನ್ನು ಮೂರು ರಾಜ್ಯಗಳ ಮುಖ್ಯಮಂತ್ರಿಯವರೂ ಸೇರಿ ಇತ್ಯರ್ಥ ಮಾಡಿಕೊಂಡರೆ ಅದಕ್ಕೆ ಕೇಂದ್ರ ಸರ್ಕಾರದ ಅಭ್ಯಂತರವೇನೂ ಇಲ್ಲವೆಂದು ಹೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಯವರು ಮತ್ತು ಆಂಧ್ರ ಪ್ರದೇಶದ ಮುಖ್ಯ ಮಂತ್ರಿಯಾವರಾದ ಶ್ರೀ ರಾಮರಾಯರು ಬಹಳ ಸ್ನೇಹಿತರು. ಇವರಿಬ್ಬರೂ ಒಂದು ಕಡೆ ಸೇರಿ ಚರ್ಚೆ ಮಾಡಿದರೆ ಈ ಸಮಸ್ಯೆ ಇತ್ಯರ್ಥವಾಗುತ್ತದೆ. ರಾಮಕೃಷ್ಣ ಹೆಗಡೆಯವರು ಮತ್ತು ರಾಮರಾಯರು ಸ್ನೇಹಿತರಾಗಿರುವುದರಿಂದ ತೆಲಗು ಗಂಗಾ ಯೋಜನೆಯನ್ನು ಮಾಡುವುದಕ್ಕೆ ರಾಮರಾಯರು ಹಿಂದೇಟು ಹಾಕುತ್ತಿದ್ದಾರೆಂದು ರಾಯಲಸೀಮೆಯಲ್ಲಿ ಅಂದರೆ ಮದನಪಲ್ಲಿ, ಕದ್ರಿ ಮುಂತಾದ ಕಡೆ ಅಲ್ಲಿಯ ಜನರು ಚಳುವಳಿಗಳನ್ನು ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು, ತೆಲಗು ಗಂಗಾ ಯೋಜನೆಯನ್ನು ರಾಮರಾಯರು ನಿಧಾನ ಮಾಡುತ್ತಿದ್ದಾರೆಂದು ಅಲ್ಲಿನ ಜನರು ಚಳುವಳಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ನಾನು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳುವುದು ಇಷ್ಟೇ ಅಲ್ಲಿನ ಜನರು ಚಳುವಳಿ ಮಾಡುತ್ತಿದ್ದಾರೆ, ಅದು ಮಾಡುತ್ತಿದ್ದಾರೆ, ಇದು ಮಾಡುತ್ತಿದ್ದಾರೆಂದು ತಾವು ಆಂಧ್ರಪ್ರದೇಶದವರು ಮಾಡುತ್ತಿರುವ ತೆಲುಗು ಗಂಗಾ ಯೋಜನೆಗೆ ನೆರವಾಗುವ ರೀತಿಯಲ್ಲಿ ಮಾತನಾಡಬಾರದು. ನಾವು ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದ ಹಿತ ರಕ್ಷಣೆ ಬಗ್ಗೆ ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ, ನಾನು ಆಂಧ್ರ ಪ್ರದೇಶದ ಪರವಾಗಿ ಮಾತನಾಡಲಿಲ್ಲ. ಅಲ್ಲಿ ಚಳುವಳಿಗಳು ನಡೆಯುತ್ತಿವೆ ಎಂದು ಮಾತ್ರ ಹೇಳಿದ್ದೇನೆ. ಇದ್ದ ವಿಷಯವನ್ನು ಹೇಳಿದ್ದೇನೆ ಅಷ್ಟೇ ಸ್ವಾಮಿ.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ಈ ನೀರನ್ನು ಹಂಚಿಕೆ ಮಾಡಿಕೊಳ್ಳುವುದಕ್ಕೆ ಒಂದು ಬೋರ್ಡ್ ಇದೆ. ಅದು ಏನು ಮಾಡುತ್ತಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಬೋರ್ಡ್ ವಿಚಾರದಲ್ಲಿ ಕನಿಷ್ಟ ಪಕ್ಷ ೩-೪ ಪತ್ರಗಳನ್ನು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು, ಆಂಧ್ರದಲ್ಲಿ ನನ್ನ ವಿರುದ್ಧವಾಗಿಯೋ ಏನೋ ಚಳವಳಿಗಳು ನಡೆಯುತ್ತಿವೆ ಎಂದು ತಿಳಿಸಿದ್ದಾರೆ. ಚಳವಳಿ ನಡೆಸುವುದಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ. ಕೇಂದ್ರ ಸರ್ಕಾರದವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ಈ ಜಲ ವಿವಾದವನ್ನು ಬಗೆಹರಿಸುವುದಕ್ಕೆ, ಎರಡೂ ರಾಜ್ಯಗಳ

ಮುಖ್ಯ ಮಂತ್ರಿಯವರು ಸೇರಿಕೊಂಡು ಇತ್ಯರ್ಥಪಡಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಬಚಾವತ್ ಕಮಿಷನ್ ಸ್ಪಷ್ಟವಾಗಿ ಹೇಳಿದೆ. ಯಾವ ಪ್ರಮಾಣದಲ್ಲಿ ಸರ್‌ಪ್ಲಸ್ ವಾಟರ್ ಇದೆಯೋ ಆ ಪ್ರಮಾಣವನ್ನು ಅನುಸರಿಸಿ ಎರಡೂ ರಾಜ್ಯಗಳು ನೀರನ್ನು ಹಂಚಿಕೊಳ್ಳಬೇಕೆಂದು ಇದೆ. ಇದರ ಬಗ್ಗೆ ಇತ್ಯರ್ಥ ಮಾಡಲು ನಾನು ತಮಿಳುನಾಡಿನ ಮುಖ್ಯಮಂತ್ರಿಯವರಿಗೂ ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರಿಗೂ ಪತ್ರವನ್ನು ಬರೆದು ಚರ್ಚೆ ಮಾಡೋಣ ಬನ್ನಿ ಎಂದು ಕರೆದಿದ್ದೆ. ಅದಕ್ಕೆ ರಾಮರಾಯರು ಒಪ್ಪಲಿಲ್ಲ. ಈ ವಿಚಾರದಲ್ಲಿ ಈಗ ನಾವು ಯಾವ ನಿಲುವನ್ನು ತೆಗೆದುಕೊಂಡಿದ್ದೇವೆಯೋ ಆ ನಿಲುವಿನಲ್ಲಿ ಸ್ವಲ್ಪವೂ ವ್ಯತ್ಯಾಸವಾಗುವುದಿಲ್ಲವೆಂದು ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ಶ್ರೀಮತಿ ನಾಗರತ್ನಮ್ಮನವರು ಅವರದೇ ಆದಂತಹ ಸುಂದರವಾದ ಶೈಲಿಯಲ್ಲಿ ಆಕರ್ಷಕವಾದ ರೀತಿಯಲ್ಲಿ, ಸೊಗಸಾದ ಕನ್ನಡದಲ್ಲಿ ಮಾಡಿದ ಭಾಷಣದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ಹೇಳಿರತಕ್ಕಂಥಾದ್ದು ಎಂದರೆ, ಈ ಸಲ ಅವರ ದೃಷ್ಟಿ ಅಧಿಕಾರಿಗಳ ಮೇಲೆ ಬಿದ್ದಿದೆ. ಹಾಗೂ ಹೆಂಡದ ಅಂಗಡಿಗಳು, ಬಾರ್‌ಗಳ ಕಡೆಗೆ ಬಿದ್ದಿದೆ. ಆಮೇಲೆ ಹೆಂಗಸರ ಸ್ಥಾನಮಾನಗಳ ಬಗ್ಗೆ ಮಾತನಾಡಿದ್ದಾರೆ. ಅಧಿಕಾರಿಗಳು ಇವರ ಮಾತನ್ನು ಕೇಳುವುದಿಲ್ಲವೆಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಹೇಳುವುದೇನೆಂದರೆ, ಹಿಂದೆ ಯಾವ ರೀತಿ ವಾತಾವರಣ ಇತ್ತೋ, ಆ ವಾತಾವರಣ ಈಗ ಇಲ್ಲ. ಅಧಿಕಾರಿಗಳ ಮೇಲೆ ಒತ್ತಡವನ್ನು ತಂದು ಕೆಲಸ ಮಾಡಿಸಿಕೊಳ್ಳುವ ವಾತಾವರಣ ಈಗಿಲ್ಲ. ನ್ಯಾಯ ಸಮ್ಮತವಾಗಿದ್ದರೆ ಮಾತ್ರ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಹಾಗೇನಾದರೂ ನ್ಯಾಯ ಸಮ್ಮತವಾಗಿದ್ದು ಆ ಕೆಲಸವನ್ನು ಮಾಡುತ್ತಿಲ್ಲ ಎಂದರೆ ಅಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಈಗ ಒಬ್ಬ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿದರೆ, ಆ ಅಧಿಕಾರಿ ಕೋರ್ಟ್‌ನಿಂದ ಸ್ಟೇ ಆರ್ಡರ್‌ನ್ನು ತರುತ್ತಾನೆ ಮತ್ತೆ ಅದೇ ಜಾಗದಲ್ಲಿ ರೀಇನ್‌ಸ್ಟೇಟ್ ಆಗುತ್ತದೆ. ಅಂದರೆ ಅವರಿಗೂ ರಕ್ಷಣೆ ಇರುತ್ತದೆ. ಅದನ್ನು ಮೀರಿ ನಾವು ಏನು ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವದ ನೀತಿಯಲ್ಲಿ ಅವರಿಗೂ ಎಲ್ಲಾ ರೀತಿಯ ಹಕ್ಕು ಬಾಧ್ಯತೆಗಳು ಇರುತ್ತವೆ. ನಾವು ಯಾವುದೇ ರೀತಿಯಲ್ಲಿ ಅಧಿಕಾರಿಗಳ ಮೇಲೆ ಸುಮ್ಮಸುಮ್ಮನೆ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ರೆಪ್ರೆಸಂಟೆಟೀವ್ ಅಸೆಂಬ್ಲಿ ಇದ್ದ ಕಾಲದಲ್ಲಿಯಾವ ರೀತಿ ವಾತಾವರಣ ಇತ್ತೋ, ಆ ವಾತಾವರಣ ಇವತ್ತು ಇಲ್ಲವಾಗಿದೆ. ಸಂಪೂರ್ಣವಾಗಿ ಬದಲಾಗಿದೆ. ಹಿಂದೆ ಯಾವ ರೀತಿ ಡಿಸಿಪ್ಲಿನ್ ಇತ್ತೋ ಆ ಡಿಸಿಪ್ಲಿನ್ ಇವತ್ತಿನ ದಿವಸ ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಿಂದೆ ನಾವು ಅಧಿಕಾರಿಗಳನ್ನು ಹೆದರಿಸಿ ಕೆಲಸ ಮಾಡಿಸಿಕೊಳ್ಳುತ್ತಿದ್ದೆವು. ಇವತ್ತಿನ ದಿವಸ ನಮ್ಮ ಮಕ್ಕಳನ್ನೂ ಹೆದರಿಸುವುದಕ್ಕಾಗುವುದಿಲ್ಲ. ಹೀಗಿರುವಾಗ ನಾವು ಅಧಿಕಾರಿಗಳನ್ನು ಹೆದರಿಸಿ ಕೆಲಸ ಮಾಡಿಸಿಕೊಳ್ಳುವ ಕಾಲ ಹೋಯಿತು. ಅಡ್ಮಿನಿಸ್ಟ್ರೇಷನ್ ಬಗ್ಗೆ ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡಬೇಕು ಎನ್ನುವ ಬಗ್ಗೆ ವರದಿಯನ್ನು ತಯಾರಿಸಲು ಒಂದು ಸಾರಿ ಮೊರಾರ್ಜಿ ದೇಸಾಯಿಯವರನ್ನು ಕಮಿಷನ್ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು, ಮತ್ತೊಂದು ಸಾರಿ ಹನುಮಂತಯ್ಯನವರ ಅಧ್ಯಕ್ಷತೆಯಲ್ಲೂ ಮಾಡಲಾಗಿತ್ತು.

ಇನ್ನು ಶ್ರೀಮತಿ ಸುಮಾ ವಸಂತ್‌ರವರು, ಎಲ್ಲಾ ಕಡೆಗಳಲ್ಲೂ ಹೆಂಡದ ಅಂಗಡಿಗಳನ್ನು ತೆರೆಯುವುದಕ್ಕೆ ಲೈಸನ್ಸ್‌ನ್ನು ಕೊಟ್ಟುಬಿಟ್ಟಿದ್ದೀರೆಂದು ಹೇಳಿದ್ದಾರೆ. ಹೆಂಡದ ಅಂಗಡಿಗಳ ಲೈಸನ್ಸ್ ಕೊಡುವುದಕ್ಕೆ ಮುಂಚಿತವಾಗಿ ಆಬ್ಜಕ್ಷನ್‌ಗಳನ್ನು ಕರೆಯಲಾಗುತ್ತದೆ, ಹಾಗೂ ಎಲ್ಲಿ ಶಾಲೆ ಇರುತ್ತದೆ, ಎಲ್ಲಿ ದೇವಸ್ಥಾನ ಇರುತ್ತದೆ. ಎಲ್ಲಿ ಹರಿಜನ ಗಿರಿಜನರ ಮತ್ತು ಅನುಸೂಚಿತ ಜಾತಿಗಳವರ ಕಾಲೋನಿ ಇರುತ್ತದೆ ಅಂತಹ ಕಡೆಗಳಲ್ಲಿ ಹೆಂಡದ ಅಂಗಡಿಗಳನ್ನು ತೆರೆಯುವುದಕ್ಕೆ ಪರವಾನಗಿಯನ್ನು ಕೊಡುವುದಿಲ್ಲ.

ಇನ್ನು ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಮಾನ್ಯ ಬಂಗಾರಪ್ಪನವರು ಹೇಳಿದರು. ನಾವು ೧೯೭೮ರ ಬಜೆಟ್‌ನಲ್ಲೂ ಹೇಳಿದ್ದೇವೆ, ೭೯ರ ಬಜೆಟ್‌ನಲ್ಲೂ ಹೇಳಿದ್ದೇವೆ ೮೦ರ ಬಜೆಟ್‌ನಲ್ಲೂ ಹೇಳಿದ್ದೇವೆ. ಈ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಸ್ವಲ್ಪ ಮಟ್ಟಿಗೆ ಇಳಿಸಿದ್ದೇವೆ. ಮತ್ತು ಯಾವ ರೀತಿಯಲ್ಲಿ ರಿಯಾಯಿತಿಯನ್ನು ಕೊಡಬೇಕೋ ಅದನ್ನು ಕೊಟ್ಟಿದ್ದು, ಎಲ್ಲರಿಗೂ ಒಂದು ರೀತಿಯ ಸಮಾಧಾನ ಇದೆ ಯಾರಿಂದಲೂ ದೂರು ಬಂದಿಲ್ಲ. ಒಂದೇ ಒಂದು ದೂರು ಬಂದಿದೆ. ಅದು ಏನೆಂದರೆ ನಾವು ಪ್ರೊಫೆಷನಲ್ ಟ್ಯಾಕ್ಸ್ ಅಬಾಲಿಶ್ ಆಗುತ್ತದೆ ಎಂದು ಕಟ್ಟಿಲ್ಲ. ಎರಡು ಮೂರು ವರ್ಷಗಳ ಕಾಲ ಕಟ್ಟಿಲ್ಲ, ಈಗ ಅದನ್ನು ರಿಕವರಿ ಮಾಡುತ್ತಾ ಇದ್ದಾರೆ, ರಿಕವರಿ ಮಾಡಲಿ, ಆದರೆ ಅದಕ್ಕೆ ಪೀನಲ್

ಇಂಟ್ರೆಸ್ಟ್ ಹಾಕಿದ್ದಾರೆ ಮತ್ತು ಪೆನಾಲ್ಟಿ ಹಾಕುತ್ತಾ ಇದ್ದಾರೆ, ಅದನ್ನು ತಾವು ತೆಗಿಸಿ ಹಾಕಿ ಎಂದು ಕೆಲವರು ನನ್ನ ಹತ್ತಿರ ಬಂದು ಹೇಳಿದ್ದಾರೆ. ನಾವು ಲ್ಲಿದನ್ನು ಮಾಡುತ್ತೇವೆ. ಅದಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಸೂಕ್ತ ಸಮಯದಲ್ಲಿ ಅದಕ್ಕೆ ತಿದ್ದುಪಡಿಯನ್ನು ತರುತ್ತೇವೆ ಅಲ್ಲಿಯವರೆಗಿನ ಅರಿಯರ್ಸ್ ಏನಿದೆ ಅದು ಕೊಡದಿರುವ ಬಗ್ಗೆ ಏನು ಬಡ್ಡಿ ಮತ್ತು ಪೆನಾಲ್ಟಿ ಹಾಕಿದ್ದಾರೋ ಅದನ್ನೆಲ್ಲವನ್ನು ಮನ್ನಾ ಮಾಡುತ್ತೇವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಭಾರತೀಯ ವೈದ್ಯ ಪದ್ಧತಿಗಳು ಹಾಗೂ ಹೋಮಿಯೋಪತಿ, ಇದರಲ್ಲಿ ನೀವು ಯಾವ ಆಧಾರದಮೇಲೆ ಬಡ್ತಿಯನ್ನು ಕೊಟ್ಟಿದ್ದೀರಿ? ಪ್ರಮೋಷನ್ ಮಾಡಿಸಿದಿರಿ, ಹಾಗೂ ಐದು ಜನರಲ್ಲಿ ಒಬ್ಬರೂ ಕೂಡಾ ಎಸ್.ಸಿ. ಯವರಿಗೆ ಸಿಕ್ಕಲಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ಎಸ್.ಸಿ. ಯವರು ಇರಲಿಲ್ಲ. ಎಸ್.ಟಿ ಒಬ್ಬರು ಇದ್ದರು. ಆದರೆ ಅವರ ಸರ್ವೀಸ್ ಆದುದು ಕೇವಲ ನಾಲ್ಕು ವರ್ಷಗಳು ಮಾತ್ರ. ಆದುದರಿಂದ ಕನಿಷ್ಟ ಪಕ್ಷ ಬಡ್ತಿ ಕೊಡಬೇಕಾದರೆ ಐದು ವರ್ಷಗಳ ಸರ್ವೀಸ್ ಆಗಿರಬೇಕು ಎಂದು ಇದೆ. ಆಗ ಮಾತ್ರ ಅವರು ಬಡ್ತಿಗೆ ಅರ್ಹತೆಯನ್ನು ಪಡೆಯುತ್ತಾರೆ. ಅವರು ಬಡ್ತಿಗೆ ಅರ್ಹರು ಆಗಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಇವರೆಲ್ಲರೂ ಬೇರೆ ಬೇರೆ ಆರೋಗ್ಯ ಖಾತೆಯಿಂದ ಬೋಧಕ ವರ್ಗದಿಂದ ಮತ್ತು ಸ್ಥಳೀಯ ಅಭ್ಯರ್ಥಿಗಳಿಂದ, ಹೀಗೆ ಮೂರು ಕಡೆಯಿಂದ ತೆಗೆದುಕೊಂಡಿದ್ದಾರೆ. ಅನೇಕ ವರ್ಷಗಳ ಕಾಲ ಕೆಲಸ ಮಾಡಿ, ಅವರ ಕೈಯಲ್ಲಿ ಯಾರೂ ವಿದ್ಯಾರ್ಥಿಗಳಾಗಿ ಪಾಸ್ ಆಗಿರುತ್ತಾರೋ ಅಂತಹವರು ಅಸಿಸ್ಟೆಂಟ್ ಪ್ರೊಫೆಸರ್ ಅಥವಾ ಅವರ ಮೇಲಿನ ಅಧಿಕಾರಿಗಳಾಗಿ ಬಂದುದರಿಂದ ಅವರಿಗೆ ಅಪಮಾನ ಆಗುತ್ತದೆ, ಅನ್ಯಾಯ ಆಗುತ್ತದೆ, ಅದಕ್ಕಾಗಿ ಇದನ್ನು ಮಾಡಿದ್ದೇವೆ. ಇದರಲ್ಲಿ ಯಾವುದೇ ರೀತಿಯಲ್ಲಿ ಭೇದಭಾವ ಎನ್ನುವಂತಾದ್ದು ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಬೇರೆ ಇಲಾಖೆಗಳಿಗೂ ಇದನ್ನು ಅನ್ವಯ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.— ಸಾಧ್ಯವಾದರೆ ಮಾಡುತ್ತೇವೆ. ಇದೇ ತರಹದ ಪರಿಸ್ಥಿತಿ ಇದ್ದರೆ, ಬೇರೆ ಇಲಾಖೆಗಳಿಗೂ ಕೂಡ ಅನ್ವಯ ಮಾಡಬಹುದು.

ಇನ್ನು ಕೆಎಎಸ್ ವಿಚಾರದಲ್ಲ ೪-೫ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಮೇಲಿನ ಮನೆಯಲ್ಲಿ ಚರ್ಚೆ ಕೂಡ ಆಯಿತು.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಕ್ಷಮಿಸಬೇಕು. ಈಗ ತಾವು ಬಡ್ತಿ ವಿಚಾರದಲ್ಲಿ ಹೇಳಿದ್ದೀರಿ. ತಮ್ಮ ಮುಂದೆ ಕಲಿತು ಬರುವವರು ತಮ್ಮ ಮೇಲೆ, ಇರಬಾರದು ಎಂಬ ಮಾತನ್ನು ಹೇಳಿದಿರಿ, ಅಲ್ಲಿ ಎರಡು ವಿಚಾರವಿದೆ. ಒಂದು ಬಡ್ತಿಯ ವಿಚಾರ, ಇನ್ನೊಂದು ಲೋಕಲ್ ಕ್ಯಾಂಡಿಡೇಟ್ಸ್ ಖಾಯಂ ಮಾಡತಕ್ಕಂತಹ ವಿಚಾರ, ಬಡ್ತಿಯ ವಿಚಾರದಲ್ಲಿ ತಾವು ಹೇಳಿದ್ದನ್ನು ಕೂಡ ಬೇರೆ ಎಲ್ಲಾ ಇಲಾಖೆಗಳಿಗೆ ಅನ್ವಯ ಮಾಡತಕ್ಕಂತಹ ಮಾತನ್ನು ಹೇಳಿದ್ದೀರಿ. ಲೋಕಲ್ ಕ್ಯಾಂಡಿಡೇಟ್ಸ್ ಆಗಿರತಕ್ಕಂತಹವನ್ನು ಕೂಡ ತಾವು ಕನ್‌ಫರ್ಮ್ ಮಾಡಿದ್ದೀರಿ. ಇದರಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿಯೂ ಕೂಡಾ ಪದವಿ ಪಡೆದವರು ಹಲವರು ಇದ್ದಾರೆ, ಬೇರೆ ಬೇರೆ ಇಲಾಖೆಗಳಲ್ಲಿ ಇದ್ದಾರೆ, ಪಿಡಬ್ಲ್ಯೂಡಿಯಲ್ಲಿ ಅಸಿಸ್ಟೆಂಟ್ ಎಂಜಿನೀಯರ್ಸ್ ಇದ್ದಾರೆ. ಅವರನ್ನು ಕೂಡಾ ಖಾಯಂ ಮಾಡತಕ್ಕಂತಹ ವಿಚಾರದಲ್ಲಿ ಬೇರೆ ಇಲಾಖೆಗಳಲ್ಲಿಯೂ ಈ ನೀತಿಯನ್ನು ಅನ್ವಯಿಸುತ್ತೀರಾ ಎನ್ನತಕ್ಕ ಮಾತನ್ನು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಲೋಕಲ್ ಕ್ಯಾಂಡಿಡೇಟ್ಸ್ ಮತ್ತು ಸ್ಟೈಫೆಂಡರಿ ಗ್ರಾಜುಯೇಟ್ಸ್ ವಿಚಾರದಲ್ಲಿ ಹೈಕೋರ್ಟಿನ ತೀರ್ಮಾನಕ್ಕೆ ವಿರುದ್ಧವಾಗಿ ನಾವು ಮಾಡುವುದಕ್ಕೆ ಬರುವುದಿಲ್ಲ. ಹೈಕೋರ್ಟಿನ ತೀರ್ಮಾನ ಬರುವುದಕ್ಕಿಂತಲೂ ಮೊದಲು ಕೆಲವು ಕಡೆ ಪ್ರೊಮೋಷನ್ ಕೊಟ್ಟಿದ್ದು ಕನ್‌ಫರ್ಮೇಷನ್ ಮಾಡಿ ಆಗಿತ್ತು. ಆದರೆ ಇದರ ವಿರುದ್ಧ ಬೇರೆಯವರು ಹೈಕೋರ್ಟಿನಲ್ಲಿ ರಿಟ್ ಹಾಕಿ ಪ್ರಶ್ನಿಸಿದ್ದಾರೆ. ಹೈಕೋರ್ಟಿನ ತೀರ್ಮಾನ ಏನು ಆಗಿದೆ ಎಂದರೆ, ಲೋಕಲ್ ಕ್ಯಾಂಡಿಡೇಟ್ಸ್ ಮತ್ತು ಸ್ಟೈಪೆಂಡರಿ ಗ್ರಾಜುಯೇಟ್ಸ್ ಎಂದು ಏನು ನೀವು ಎಂಟೈನ್ ಮಾಡುತ್ತೀರಿ ಅದರಲ್ಲಿ ೫೦ ಪರ್ಸೆಂಟ್ ಮಾತ್ರ ರಿಸರ್ವ್ ಮಾಡಬೇಕೆಂದು ತೀರ್ಮಾನ ಆಗಿದೆ. ಈಗ ಅದೇ ಆಧಾರದ ಮೇಲೆ ಮಾಡುತ್ತಾ ಇದ್ದೇವೆ ಅಷ್ಟೆ !

ಶ್ರೀ ಎಸ್. ಬಂಗಾರಪ್ಪ.—ಅದನ್ನು ತಾವು ಮಾಡಬೇಕಾದರೆ, ಇಂಡಿಯನ್ ಮೆಡಿಷನ್ ವಿಷಯದಲ್ಲಿ ತಾವು ಆರ್ಡರ್‌ನ್ನು ೫-೩-೧೯೮೬ರಲ್ಲಿ ಹೊರಡಿಸಿದ್ದೀರಿ. ಅದೇ ಹೈಕೋರ್ಟಿನ ಜಡ್ಜ್‌ಮೆಂಟಿನ ಪ್ರಕಾರ ತಾವು ಏತಕ್ಕೆ ಇವೊತ್ತಿನ ದಿವಸ ಪಾಲನೆ ಮಾಡಿಲ್ಲ? ೧೯೮೫ರಲ್ಲಿ ಆಗಿರತಕ್ಕಂಥಾದ್ದು ತಾವು ಬಡ್ತಿ ಕೊಟ್ಟು ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಕನ್‌ಫರ್ಮ್ ಮಾಡಿರತಕ್ಕಂಥಾದ್ದು, ೫-೩-೧೯೮೬ರ ಹೈಕೋರ್ಟಿನ ಜಡ್ಜ್‌ಮೆಂಟ್ ಆಧಾರದ ಮೇಲೆ ಇದನ್ನು ತಾವು ಜಾರಿಗೆ ಕೊಟ್ಟಿದ್ದೀರಿ. ಲೋಕಲ್ ಕ್ಯಾಂಡಿಡೇಟ್ಸ್ ವಿಚಾರದಲ್ಲಿ ಯಾವ ನೀತಿಯನ್ನು ಅನುಸರಿಸಿದ್ದೀರಿ ಎಂಬ ವಿಚಾರದಲ್ಲಿ ಅದು ಈ ೫-೩-೧೯೮೬ರ ಆರ್ಡರ್‌ಗೂ ಅನ್ವಯ ಆಗುತ್ತದೆ. ಇದನ್ನು ಏಕೆ ಅನ್ವಯ ಮಾಡಿಲ್ಲ ಎಂದು ನನ್ನ ಪ್ರಶ್ನೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಆರೋಗ್ಯ ಮಂತ್ರಿಗಳವರ ಡಿಪಾರ್ಟ್‌ಮೆಂಟ್. ಅಲ್ಲಿ ಕನ್‌ಫರ್ಮ್ ಆಗಿದ್ದರೆ ಅದು ಹೈಕೋರ್ಟಿನ ತೀರ್ಮಾನ ಆಗುವುದಕ್ಕಿಂತ ಮೊದಲೇ ಆಗಿರಬೇಕು. ಪ್ರಮೋಶನ್ ಬರುವುದು ಕನ್‌ಫರ್ಮ್ ಆದಮೇಲೆ ಮಾತ್ರ ತಾನೆ?

ಶ್ರೀ ಎಸ್. ಬಂಗಾರಪ್ಪ.—ತಾವು ಮಾತನಾಡುವಾಗ ಮಧ್ಯಪ್ರವೇಶಿಸಬೇಕೆಂಬ ಇಚ್ಛೆ ನನಗೆ ಇಲ್ಲ, ಒಂದೇ ಒಂದು ವಿಚಾರ, ಈಗ ಕನ್‌ಫರ್ಮ್ ಮಾಡತಕ್ಕಂತಹ ವಿಚಾರದಲ್ಲಿ ಲೋಕಲ್ ಕ್ಯಾಂಡಿಡೇಟ್ಸ್‌ಗೆ ತಾವು ಮೊದಲು ಮಾಡಿದ್ದೀರಿ. ೫-೩-೧೯೮೬ರ ಮೊದಲು ಮಾಡಿದ್ದೀರಿ ಎಂದು ತಿಳಿದುಕೊಳ್ಳೋಣ. ಹಾಗೆ ಮಾಡಿದ್ದರೆ ಅದನ್ನು ಯಾವಾಗ ಮಾಡಿದ್ದೀರಿ? ಅದೇ ರೀತಿಯಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿರತಕ್ಕಂತಹ ಸ್ಥಳೀಯ ಅಭ್ಯರ್ಥಿಗಳನ್ನು ಕೂಡಾ ಖಾಯಂ ಮಾಡತಕ್ಕಂತಹ ವಿಚಾರದಲ್ಲಿ ತಾವು ಏತಕ್ಕೆ ಮಾಡಲಿಲ್ಲ? ಅವರನ್ನು ಮಾಡಿದ ಮೇಲೆ ಇವರನ್ನು ಮಾಡುವಂತಹ ಪ್ರಶ್ನೆ ಬಂದೇ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ತಮಗೆ ಪುನ: ಅದನ್ನು ನಾನು ಹೇಳಬೇಕಾಗುತ್ತದೆ. ಕಾಯಿದೆ ಪ್ರಕಾರ, ಅಂದರೆ ನಾವು ರೂಲ್ಸ್ ಬದಲಾಯಿಸಬಹುದು, ರೂಲ್ಸ್ ಬದಲಾಯಿಸಿ ಮಾಡಿದಾಗ, ಕೆಲವರು ಹೈಕೋರ್ಟಿಗೆ ರಿಟ್ ಹೋದಮೇಲೆ, ಹೈಕೋರ್ಟಿನವರು ನೀವು ರೂಲ್ಸ್‌ನ್ನು ಬದಲಾಯಿಸಿರುವುದು ತಪ್ಪು, ಇದರಿಂದ ಬೇರೆಯವರಿಗೆ ಅನ್ಯಾಯವಾಗುತ್ತದೆ, ಮೊದಲು ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಂಡು ಅವರನ್ನು ಕನ್‌ಫರ್ಮ್ ಮಾಡುವುದರಿಂದ ಬೇರೆಯವರಿಗೆ ಅನ್ಯಾಯವಾಗುತ್ತದೆ ಎನ್ನತಕ್ಕಂತಹ ನಿರ್ಣಯವನ್ನು ಕೊಟ್ಟಿರುವುದರಿಂದ ಮತ್ತು ಇನ್ನು ಮುಂದೆ ಏನು ಖಾಲಿ ಹುದ್ದೆಗಳು ಸರಕಾರಿ ನೌಕರಿಯಲ್ಲಿ ಏನಿದೆ ಅವುಗಳನ್ನು ತುಂಬುವಾಗ ಶೇಕಡ ೫೦ರಷ್ಟು ಮಾತ್ರ ಅಂತಹವರಿಗೆ ಕೊಡಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪನವರು.—ಅಧ್ಯಕ್ಷರೆ... ...

ಅಧ್ಯಕ್ಷರು.—ಅವರು ತಮ್ಮ ಮಾತನ್ನು ಹೇಳಿ ಮುಗಿಸಲಿ, ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದೇ ವಿಚಾರದಲ್ಲಿ ತಾವು ಪ್ರಮೋಷನ್ ಕೊಡಬೇಕಾದರೆ ಲೋಕಲ್ ಕಾಂಡಿಡೇಟ್ಸ್ ವಿಚಾರದಲ್ಲಿ ಹೇಳಿದ್ದಾರೆ. ಇದಕ್ಕೂ ಅನ್ವಯ ಆಗಬೇಕಾಗಿತ್ತು. ಹೈಕೋರ್ಟ್ ಜಡ್ಜ್‌ಮೆಂಟ್‌ನ ಪ್ರಕಾರ ರೋಸ್ಟರ್ ಸಿಸ್ಟಮ್‌ನ್ನು ಇದಕ್ಕೆ ತಾವು ಅನ್ವಯ ಮಾಡಿ ಬಡ್ತಿಯನ್ನು ಕೊಟ್ಟಿದ್ದೀರಾ ತಾವೇ ಡಿಕ್ಲೇರ್ಡ್ ಪಾಲಿಸಿ ಎಂದು ಪದೇ ಪದೇ ಹೇಳುತ್ತೀರಿ

SRI B. BASAVALINGAPPA.—I am sorry, I am intervening. "The State Government, is considering regularisation of services of 344 local candidates working in the Department of Health and Family Welfare and Medical Education, the Assembly was told today. Sri Thimmegowda said, 148 candidataes out of 3 0 belonging to SCs and five to STs were the candidat who were working from 3 to 20 years." ಅಂತ ಅವರು ಹೇಳಿದ್ದಾರೆ. ಅವರಿಗೆ ವಯಸ್ಸು ಆಗುತ್ತಾ ಬಂದಿದೆ. ಅವರುಗಳು ೮-೧೦-೧೫ ವರ್ಷಗಳ ಕಾಲ ಸೇವೆ ಮಾಡಿದ್ದಾರೆ. ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲಿಯೂ ಸಾಕಷ್ಟು ವೇಕೆನ್ಸಿಗಳು ಇವೆ, ಯಾರು ಅಲ್ಲಿ ಕೆಲಸ ಮಾಡುತ್ತಿದ್ದಾರೆಯೋ ಅವರನ್ನು ರೆಗ್ಯುಲರೈಸ್ ಮಾಡಿ, ಅವರಿಗೆ ಅನುಕೂಲಮಾಡಿ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಪುನ: ಹೇಳುತ್ತಿದ್ದೇನೆ, ಇಷ್ಟು ವರ್ಷಗಳ ಕಾಲ ಸರಕಾರಿ ಸೇವೆಯಲ್ಲಿ ಇದ್ದಂತಹ ಜನರಿಗೆ ೧೦–೧೫ ವರ್ಷಗಳು ಅವರು ಸೇವೆಯಲ್ಲಿ ಇದ್ದರೆ ಅವರು ರೆಗ್ಯುಲರ್ ಮಾಡತಕ್ಕಂತಹದ್ದು ಕಾಯಿದೆ ಪ್ರಕಾರ ಇದ್ದರೆ ಖಂಡಿತಾ ಅದನ್ನು ಸರಕಾರ ಮಾಡುತ್ತದೆ. ಆದರೆ ಹೈಕೋರ್ಟಿನವರು ಏನು ನಿರ್ಣಯವನ್ನು ಕೊಟ್ಟಿದ್ದಾರೋ ಆ ನಿರ್ಣಯದ ಪ್ರಕಾರ ಇದು ಸಾಧ್ಯವಿಲ್ಲ. ಈ ವಿಚಾರವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಾನು ಇನ್ನೊಂದು ಸಲ ಬೇಕಾದರೆ ವಿಚಾರ ಮಾಡಿಸುತ್ತೇನೆ. ನನಗೆ ಗೊತ್ತಿದೆ, ಹೆಲ್ತ್ ಡಿಪಾರ್ಟಮೆಂಟಿನಲ್ಲಿ ಬಹಳಷ್ಟು ಜನ ಇದ್ದಾರೆ. ಅಂತಹವರು ನನ್ನ ಹತ್ತಿರ ಬಂದಿದ್ದರು. ನನಗೆ ಅಂತಹವರ ಬಗ್ಗೆ ತುಂಬಾ ಸಹಾನುಭೂತಿ ಖಂಡಿತಾ ಇದೆ. ಅವರನ್ನು ಕನ್‌ಫರ್ಮ್ ಮಾಡುವಂತಹ ಹೊತ್ತಿನಲ್ಲಿಯೇ ಮಾಡಬೇಕಾಗಿತ್ತು. ಈಗ ಮಾಡುವುದಕ್ಕೆ ಬರುವುದಿಲ್ಲ. ಇದೇ ಸಂದರ್ಭದಲ್ಲಿ ರೋಸ್ಟರ್ ಸಿಸ್ಟಂಅನ್ನು ಸಹ ಕಾಯ್ದೆಗೆ ಅನುಗುಣವಾಗಿ ಮಾಡಿದ್ದೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಕಾಯ್ದೆಗೆ ಅನುಗುಣವಾಗಿ ಮಾಡುವುದಕ್ಕೆ ಬರುವುದಿಲ್ಲ. ಈಗ ಕೆ. ಎ. ಎಸ್. ನವರಿಗೆ ಪ್ರೊಮೋಶನ್ ಕೊಡುವಂತಹ ವಿಚಾರ ಬಂದಾಗ ಸೀನಿಯಾರಿಟಿ ಕಮ್ ಮೆರಿಟ್ ಮೇಲೆ ಬಡ್ತಿಯನ್ನು ಕೊಡುವಾಗ ರೋಸ್ಟರ್ ಸಿಸ್ಟಂ ಬರುವುದಿಲ್ಲ. ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು ನಮ್ಮ ರಾಜ್ಯದಲ್ಲಿ ಸುಮಾರು ೮೦ ಸಾವಿರ ಸರ್ಕಾರಿ ಹುದ್ದೆಗಳು ಖಾಲಿ ಇವೆ ಅವುಗಳನ್ನು ತುಂಬತಕ್ಕಂಥ ಕೆಲಸ ಮಾಡಿಲ್ಲವೆಂದು ಹೇಳಿದರು, ಆದರೆ ಇರುವಂತಹ ಸತ್ಯ ಸಂಗತಿ ಏನೆಂದರೆ ಸುಮಾರು ೪೭ ಸಾವಿರ ಸರ್ಕಾರಿ ಹುದ್ದೆಗಳು ಮಾತ್ರ ಖಾಲಿ ಇದ್ದವು. ಕಳೆದ ಮೂರು ವರ್ಷಗಳಲ್ಲಿ ಸುಮಾರು ೫೫ ಸಾವಿರ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ನಮ್ಮ ಸರ್ಕಾರ ಬರುವುದಕ್ಕೆ ಮೊದಲು ಸುಮಾರು ೬೦–೬೫ ಸಾವಿರ ಹುದ್ದೆಗಳು ಖಾಲಿಇದ್ದವು. ಆದರೆ ನಾವು ಬರುವುದಕ್ಕಿಂತ ಮುಂಚಿತವಾಗಿ ಖಾಲಿ ಇದ್ದಂಥ ಹುದ್ದೆಗಳನ್ನು ಭರ್ತಿ ಮಾಡಿರಲಿಲ್ಲ. ನಾವು ಬಂದ ಮೇಲೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರವಾಗಿ ಹಾಗೂ ನೇಮಕಾತಿ ಸಮಿತಿಗಳ ಮುಖಾಂತರವಾಗಿ ಸುಮಾರು ೧೫ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಈ ಭರ್ತಿ ಮಾಡುವಾಗ ನಾವು ಎಲ್ಲಾ ಕಾಯ್ದೆಗಳನ್ನು ಹಾಗೂ ರೋಸ್ಟರ್ ಪದ್ಧತಿಯನ್ನು ಅಳವಡಿಸಿ ಕೊಂಡೇ ಮಾಡಿದ್ದೇವೆ. ಆದರೂ ಸಹ ನಮ್ಮಲ್ಲಿ ದಿನೇ ದಿನೇ ನಿರುದ್ಯೋಗ ಸಂಖ್ಯೆ ಜಾಸ್ತಿಯಾಗುತ್ತಿದೆ ಎನ್ನುವುದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೬ ಲಕ್ಷದ ೧೫ ಸಾವಿರ ನಿರುದ್ಯೋಗಿಗಳು ಇದ್ದಾರೆ. ಆದ್ದರಿಂದಲೇ ನಾವು ಹೊಸದಾಗಿ ಒಂದು ಔದ್ಯೋಗಿಕ ನೀತಿಯನ್ನು ಅಳವಡಿಸಿದ್ದೇವೆ. ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನ ಸಿಗಬೇಕಾಗಿತ್ತೋ ಅಷ್ಟು ಸಿಗುತ್ತಿಲ್ಲ ಎನ್ನುವುದನ್ನು ಸಹ ನಾನು ಒಪ್ಪಿಕೊಳ್ಳುತ್ತೇನೆ. ಆ ಬಗ್ಗೆ ನಾವು ಯಾವ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕೋ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಭಾಷಣ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಒಂದು ಮಾತು ಹೇಳಿದರು, ಅದೇನೆಂದರೆ ಈ ಸದನದಲ್ಲಿ ಯಾವುದೇ ಸದಸ್ಯರ ಚಾರಿತ್ರ್ಯವಧೆಯಾಗತಕ್ಕಂಥ ಮಾತು ಬರಕೂಡದು, ಆ ರೀತಿಯ ಪ್ರಸಂಗಗಳು ಬಂದರೆ ಸದಸ್ಯರಿಗೆ ನೋವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಆದರೆ ಆ ಒಂದು ವಿಚಾರವನ್ನು ನಾನು ಸಹ ನೂರಕ್ಕೆ ನೂರರಷ್ಟು ಅಥವಾ ನೂರಕ್ಕೆ ಇನ್ನೂರರಷ್ಟು ನನ್ನ ಸಹಮತಿ ಇದೆ. ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ ಇಲ್ಲಿ ಯಾರೂ ವೈಯಕ್ತಿಕ ಜಗಳ ಮಾಡುವುದಕ್ಕೆ ಬಂದಿಲ್ಲ, ಮಂತ್ರಿಗಳೇ ಆಗಲೀ ಅಥವಾ ಒಬ್ಬ ಮಾನ್ಯ ಸದಸ್ಯರೇ ಆಗಲೀ ಭ್ರಷ್ಟಾಚಾರ ಮಾಡುತ್ತಿದ್ದಾರೆನ್ನುವುದಕ್ಕೆ ಪುರಾವೆಗಳು ಸಾಕಷ್ಟು ಆಧಾರಗಳು ಇದ್ದರೆ ಅದನ್ನು ಬಹಿರಂಗಪಡಿಸತಕ್ಕಂಥ ಅಧಿಕಾರ ಎಲ್ಲಾ ಮಾನ್ಯ ಸದಸ್ಯರಿಗೂ ಇದೆ. ಆದರೆ ಅದನ್ನು ಬಹಿರಂಗ ಪಡಿಸುವುದಕ್ಕೆ ಬೇರೆ ವೇದಿಕೆ ಇದೆ. ಆ ವೇದಿಕೆಯನ್ನು ನಾವು ಈಗಾಗಲೇ ನಿರ್ಮಾಣ ಮಾಡಿಕೊಟ್ಟಿದ್ದೇವೆ. ಲೋಕಾಯುಕ್ತರನ್ನು ನೇಮಕ ಮಾಡಿದ್ದೇವೆ; ಉಪ ಲೋಕಾಯುಕ್ತರನ್ನು ನೇಮಕ ಮಾಡಿದ್ದೇವೆ. ಆದರೆ ದುರಾದೃಷ್ಟವಶಾತ್ ಕಳೆದ ಮೂರು ವರ್ಷ ಗಳಿಂದ ನಾವು ಹೆಚ್ಚಿನ ಸಮಯವನ್ನು ತೆಗೆದುಕೊಂಡು ಯಾವುದೇ ಡಾಮಿನೇಟ್ ವಿಚಾರವಾಗಿರಲಿ ಇಲ್ಲದಿರಲಿ ಅದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ, ಉದಾಹರಣೆಗೆ ಹೇಳುವುದಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳಿದರು ನಾನು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗಿದೆ, ಸಾಧ್ಯವಾಗುತ್ತಿಲ್ಲ ನಾವು ಏನೇ ಕೆಲಸ ಮಾಡಿದರು ಸಹ ಪೋಲೀಸಿನವರು ಟ್ಯಾಪ್ ಮಾಡಿ ಟೇಪ್ ಮಾಡಿಕೊಳ್ಳುತ್ತಿದ್ದಾರೆ. ಎಂದು ಹೇಳಿದರು ಇದಕ್ಕೆ ನಾನು ತಮ್ಮ ಮುಖಾಂತರವಾಗಿ ಎಲ್ಲರಿಗೂ ಉತ್ತರ ಕೊಡುವುದೇನೆಂದರೆ ಟೆಲಿಫೋನ್‌ನಲ್ಲಿ ಮಾತನಾಡುವಾಗ ಯಾವ ರೀತಿಯಲ್ಲಿ ಟ್ಯಾಪ್

ಮಾಡುತ್ತಾರೋ ಅದು ನನಗಂತೂ ಗೊತ್ತಿಲ್ಲ. ಆ ಟೆಲಿಫೋನ್ ಇಲಾಖೆ ನಮ್ಮ ಕೈಯಲ್ಲಿ ಇಲ್ಲ. ಅದು ಕೇಂದ್ರ ಸರ್ಕಾರದ ಕೈಯಲ್ಲಿ ಇದೆ, ಅದಕ್ಕೂ ನಮಗೂ ಯಾವುದೇ ಸಂಬಂಧ ಬರುವುದಿಲ್ಲ. ಇನ್ನು ಟೆಲಿಫೋನ್‌ನಲ್ಲಿ ಮಾತನಾಡುವುದನ್ನು ರೇಕಾರ್ಡ್ ಮಾಡಬಹುದು. ಟ್ಯಾಪ್ ಮಾಡಬಹುದು. ಟ್ಯಾಪ್ ಮಾಡುವುದೇ ಬೇರೆ ಟೇಪ್ ರೇಕಾರ್ಡ್ ಮಾಡುವುದೇ ಬೇರೆ. ಈಗ ನಾನು ನನ್ನ ಮನೆಯಲ್ಲಿ ಇರುವುದಿಲ್ಲ. ಆಗ ನಾವು ಒಂದು ಇನ್‌ಸ್ಟ್ರುಮೆಂಟ್ಸ್ ಇಟ್ಟು ಕೊಂಡಿದ್ದರೆ ಆಗ ಯಾರಾದರೂ ಫೋನ್ ಮಾಡಿ ವಿಷಯ ತಿಳಿಸಿದ್ದರೆ ಅದು ರೆಕಾರ್ಡ್ ಆಗಿರುತ್ತದೆ, ಆಮೇಲೆ ನಾವು ಬಂದ ಮೇಲೆ ಸ್ವಿಚ್ ಹಾಕಿ ರೇಕಾರ್ಡ್ ಆಗಿರುವುದನ್ನು ಕೇಳಬಹುದು. ಆ ಪದ್ಧತಿ ಇದೆ ಆದರೆ ನನ್ನ ಮನೆಯಲ್ಲಿ ಅಂತಹ ಮೆಷಿನ್ ಯಾವುದೂ ಇಲ್ಲ. ಅದನ್ನು ಇಟ್ಟು ಕೊಂಡಿದ್ದರೆ ಯಾವುದೇ ಕಾರಣದಿಂದ ಕಾನೂನು ಬಾಹಿರವಾಗುವುದಿಲ್ಲ......

ಶ್ರೀ ಎಸ್. ಬಂಗಾರಪ್ಪ.—ನಾನು ತಮಗೆ ಫೋನ್ ಮಾಡಿ ಮಾತನಾಡುತ್ತಿರುವಾಗ ಕಾವೇರಿ ಭವನದಲ್ಲಿ ಡಿ.ಐ.ಜಿ. ಯವರು ಫೋನ್ ಟ್ಯಾಪ್ ಮಾಡಿ ರೇಕಾರ್ಡ್ ಮಾಡಿಕೊಳ್ಳಬಹುದು. ನೀವು ನನಗೆ ಮಾಡಿದರೂ ರೇಕಾರ್ಡ್ ಮಾಡಿಕೊಳ್ಳಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ನಿಮ್ಮ ಸುತ್ತಮುತ್ತ ಪೋಲೀಸಿನವರು ಇರುತ್ತಾರೆಂದು ಸಹ ಹೇಳಿದಿರಿ, ಹೊರಗಡೆಯೂ ಸಹ ಇದ್ದಾರೆಂದು ಹೇಳಿದಿರಿ. ನಿಜ, ಯಾವ ಪೋಲೀಸಿನವರು ಇದ್ದಾರೆಂದು ತಮಗೆ ಗೊತ್ತಿಲ್ಲವೇನು? ಪೋಲೀಸಿನವರು ಎಲ್ಲಿದ್ದಾರೆ? ಏತಕ್ಕೆ ಇದ್ದಾರೆಂದು ಹೇಳುತ್ತೇನೆ. The following police officers were found in Legislators' Home trying to contact Legislators for transfer : Rama Naik, Shankar (under suspension). Poovaiah, Nagannanavar and Pattanashetty. ಇನ್ನೊಬ್ಬರು ಮಾನ್ಯ ಸದಸ್ಯರ ಜೊತೆಯಲ್ಲಿಯೇ ಇದ್ದಾರೆ. ಆ ಮೇಲೆ ಸುಮಾರು ೨೦–೨೫ ಜನ ಎಸ್.ಐ.ಗಳು who have come to Bangalore for training in the ITI have been allotted two/three rooms in the L. H. ಅವರು ಅಲ್ಲಿದ್ದಾರೆ. ಆಮೇಲೆ About five or six officers are living in the Legislators' Home on long-term basis. In addition, officers from NR AND NEAR on leave of the rank of DSP and below are staying with their constituency MLAs. ನಮಗೂ ಜವಾಬ್ದಾರಿ ಇದೆ, ನಮ್ಮ ಕರ್ತವ್ಯವೂ ಇದೆ. ಈಗ ಮೊನ್ನೆಯ ದಿವಸ ಶಾಸಕಿ ಶ್ರೀಮತಿ ಶಿವಕಾಂತ ಚತುರೆಯವರ ರೂಮಿಗೆ ರಾತ್ರಿ ಯಾರೋ ಹೋಗಿ ಅವರ ರೂಮಿನ ಬಾಗಿಲು ಬಡಿದು, ಅವರು ಬಾಗಿಲು ತೆಗೆಯಲಿಲ್ಲವೆಂದು ಹೇಳಿ ಅವರನ್ನು ಅವಾಚ್ಯ ಶಬ್ದಗಳನ್ನು ಬರೆದು ಹೋಗಿದ್ದಾರೆ. ಅಂತಹ ಸಮಯದಲ್ಲಿ ಅವರು ರಕ್ಷಣೆ ಬೇಕೆಂದು ಮಾನ್ಯಗೃಹಸಚಿವರನ್ನು ಕೇಳುತ್ತಾರೆ. ಆಗ ರಕ್ಷಣೆ ಕೊಡುವುದು ತಪ್ಪೇನು? ರಾತ್ರಿ ೧೦ ಗಂಟೆಯ ನಂತರ ಶಾಸಕರ ಭವನದಲ್ಲಿ ದರೋಡೆಯಾದರೂ ಅಪರಿಚಿತರು ನುಗ್ಗುತ್ತಾರೆ. ಮೊನ್ನೆಯ ದಿವಸ ಮಾನ್ಯ ಸದಸ್ಯರಾದಂಥ ಶ್ರೀ ಕಾನಡೆಯವರ ರೂಮಿಗೆ ಕೆಲವರು ಬಂದಿದ್ದರು. ಮಾನ್ಯ ಸದಸ್ಯರಾದ ಕಾನಡೆಯವರು ಇದಿದ್ದರೆ ನಾನೇ ಅವರನ್ನು ಕೇಳುತ್ತಿದ್ದೆ. ಅವರನ್ನು ಭೇಟಿಯಾಗಲು ಅವರ ರೂಮಿಗೆ ಮುರಳಿತಂಡನ್ ಮತ್ತು ರಾಜಣ್ಣ ಎನ್ನುವವರು ಬಂದಿದ್ದರು. ಅವರು ರಾತ್ರಿ ಸುಮಾರು ೧೦–೩೦ ನಿಮಿಷಕ್ಕೆ ಬಂದಿದ್ದರು. ಅವರ ಮೇಲೆ ಕ್ರಿಮಿನಲ್ ಕೇಸ್ ಇದೆ. ಅವರನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಬೇಕಾಗಿತ್ತು ಇವರು ಸಜ್ಜನರೇನು? ಮಾನ್ಯ ಸದಸ್ಯರಿಗೆ ರಕ್ಷಣೆ ಬೇಕೆಂದು ಕೇಳಿದಾಗ ನಾವು ರಕ್ಷಣೆ ಬೇಕೆಂದು ಕೇಳಿದಾಗ ನಾವು ರಕ್ಷಣೆ ಕೊಡದಿದ್ದರೆ ನಾಳೆ ಮಾನ್ಯ ಸದಸ್ಯರು ಗೃಹಸಚಿವರನ್ನು, ಮುಖ್ಯಮಂತ್ರಿಗಳನ್ನು ಕೇಳುತ್ತಾರೆ. ಸರ್ಕಾರ ಏನು ಮಾಡುತ್ತಿದೆ ಎಂದು ಕೇಳುತ್ತಾರೆ. ಆದ್ದರಿಂದ ಜನತೆಯ ಮಾನ ರಕ್ಷಣೆ ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ.

ವಿಧಾನ ಮಂಡಲದ ಮೊಗಸಾಲೆಗಳಲ್ಲೂ ಅಷ್ಟೆ. ಅನೇಕ ಜನ ಬರ್ತಾರೆ, ಇಲ್ಲಿ ಬರ್ತಾರೆ, ಗ್ಯಾಲರಿಯಲ್ಲಿ ಬಂದು ಕೂತುಕೊಂಡು ಗಲಾಟೆ ಮಾಡುತ್ತಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾವು ಹೇಳುತ್ತಾ ಇರುವುದು ಲೆಜಿಸ್ಲೇಟರ್ ಹೋಂ ಬಗ್ಗೆ. ಲೆಜಿಸ್ಲೇಟರ್ ಹೋಂಗೆ ಅಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಹೋಗುತ್ತಾರಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರಿಗೆ, ವಿಧಾನ ಮಂಡಲದ ಕಾರ್ಯದರ್ಶಿಯವರಿಗೆ ತಿಳಿಸಿ ಹೋಗಿದ್ದರೂ ಕೂಡ ಅನೇಕ ಜನರು ಪೋಲೀಸ್ ಆಫೀಸರ್ಸ್ ಬೇರೆ ಬೇರೆ ಊರುಗಳಿಂದ ಬಂದು ಅಲ್ಲಿರುವ ಶಾಸಕರನ್ನು ಭೇಟಿ ಆಗಲಿಕ್ಕೆ ಬರುತ್ತಾರೆ. ನಾನು ಮಾನ್ಯ ಗೃಹ ಮಂತ್ರಿಗಳಿಗೂ ಹೇಳಿದ್ದೇನೆ. ಸರ್ಕಾರೀ ಅಧಿಕಾರಿಗಳಿಗೆ ವೈಯುಕ್ತಿಕವಾಗಿ ಏನಾದರೂ ತೊಂದರೆಗಳು ಇದ್ದರೆ, ಅವರು ನಮ್ಮ ಹಾಗೆ ಮನುಷ್ಯರು. ಸಂಸಾರಸ್ಥರು ಮಕ್ಕಳು ಮರಿಗಳು ಇರುವವರು. ಯಾರಿಗಾದರೂ ಅವರ ಮನೆಯವರಿಗೆ ರೋಗರುಜಿನಗಳು ಇದ್ದರೆ ವೈಯುಕ್ತಿಕವಾಗಿ ತೊಂದರೆಗಳು ಇದ್ದರೆ ಅಂಥಾ ಕೆಲವು ಸಂದರ್ಭದಲ್ಲಿ ಅವರ ವರ್ಗಾವಣೆ ಅನುಕೂಲವಾಗುವ ರೀತಿಯಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಅದೇನೂ ತಪ್ಪಲ್ಲ ಆದರೆ ಯಾವಾಗಲೂ ಲೆಜಿಸ್ಲೇಟರ್ಸ್‌ನ್ನು ಹಿಡಿದುಕೊಂಡು ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವಂಥಾ ಹ್ಯಾಬಿಟ್ ಇರಕೂಡದು, ನಿಜವಾದ ತೊಂದರೆಗಳು ಇರಬೇಕೆ ಹೊರತು ಅದು ಸಾಮಾನ್ಯವಾದ ರೀತಿಯಲ್ಲಿ ಇರಕೂಡದು. ನಾನು ಈ ಮಾತನ್ನು ಮಾನ್ಯ ಗೃಹ ಮಂತ್ರಿಗಳಿಗೂ ಹೇಳಿದ್ದೇನೆ. ಒಂದು ವಿಚಾರ ಶಾಸಕರನ್ನು ನೋಡುವುದಕ್ಕೆ ಬರತಕ್ಕಂಥಾವರು ಯಾರೇ ಆಗಲಿ ಒಂದು ನಿರ್ದಿಷ್ಟವಾದ ಕಾರಣಕ್ಕಾಗಿ ಬಂದರೆ ಪರವಾಗಿಲ್ಲ. ಆದರೆ ಅದನ್ನೇ ಒಂದು ಹ್ಯಾಬಿಟ್ ಮಾಡಿಕೊಂಡು ಲಾಬಿ ಮಾಡುವುದಕ್ಕೆ ಬಂದರೆ ಅಥವಾ ವರ್ಗಾವಣೆಗಾಗಿ ಶಾಸಕರ ಮೇಲೆ ಪ್ರಭಾವ ಬೀರಲಿಕ್ಕೆ ಬರುವ ಅಧಿಕಾರಿಗಳ ಹೆಸರನ್ನು ಒಂದು ಪಟ್ಟಿ ಮಾಡಿ ಮುಖ್ಯ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡಿ ಎಂದು ಹೇಳಿದ್ದೇನೆ. ಮಾನ್ಯ ನಾಗರತ್ನಮ್ಮನವರು ಅಧಿಕಾರಿಗಳ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಳ್ಳದೇ ಹೋದರೆ ಸರಿ ಹೋಗುವುದಿಲ್ಲ ಎಂದು ಹೇಳಿದರು. ಇವತ್ತು ಅನೇಕ ಜನರು ರಜ ತೆಗೆದುಕೊಳ್ಳದೇ ಬರುತ್ತಾರೆ, ಇಲ್ಲೇ ಇರುತ್ತಾರೆ. ಒಬ್ಬ ಅಧಿಕಾರಿ ಒಬ್ಬ ಸದಸ್ಯರ ಹತ್ತಿರ. ಅವರ ರೂಂನಲ್ಲಿ ಸೇರಿಕೊಂಡಿದ್ದರೆ, ಅವರೇನಾದರೂ ಸಂಬಂಧಿಕರಾಗಿದ್ದರೆ. ಅವರ ರೂಂನಲ್ಲಿ ಇರಬಹುದು, ಅಥವಾ ಅವರ ಸಂಬಂಧಿಕರು ವಿಶೇಷವಾಗಿ ಚಿಕಿತ್ಸೆಗಾಗಿ ಬಂದಿದ್ದರೆ ಅವರೂ ಸಹ ಅವರ ರೂಂನಲ್ಲಿ ಇರಬಹುದು. ಆದರೆ ಯಾರಾದರೂ ವರ್ಗಾವಣೆಗಾಗಿ ಬಂದು ಅವರನ್ನು ಪೀಡಿಸಿದರೆ ಅದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರದ ನೀತಿ ಏನು ಎನ್ನುವುದನ್ನು ೧–೧½ ವರ್ಷದಿಂದಲೂ ಹೇಳಿದ್ದೇನೆ. ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ಸರ್ಕಾರಿ ಅಧಿಕಾರಿಗಳಿಗೆ ತೊಂದರೆಯಾಗದೇ ಇರುವಂಥ ರೀತಿಯಲ್ಲಿ ವರ್ಗಾವಣೆ ಆಗಬೇಕು ಎಂದು ಹೇಳಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಮಾತನಾಡುತ್ತಾ ಪ್ರೈಮರಿ ಸ್ಕೂಲ್ ಶಿಕ್ಷಕರನ್ನೂ ಎತ್ತಿ ಹಾಕುತ್ತೀರಿ ಎಂದು ಹೇಳಿದ್ದಾರೆ ನಾನು ಹೇಳುತ್ತೇನೆ. ಪ್ರೈಮರಿ ಸ್ಕೂಲ್ ಮಾಸ್ಟರ್ ನೇರವಾಗಿ ಶಾಲೆಗೆ ಹೋಗಬೇಕು ತಾನೆ. ಅವನು ಶಾಲೆಗೆ ಹೋಗುವುದಿಲ್ಲ ಅದರ ಬದಲು ಅಂಗಡಿಗೆ ಹೋಗಿ ಕುಳಿತುಕೊಂಡರೆ ಅವರು ಶಾಲೆಗೆ ಹೋಗದೆ ಹೊರಗೆ ಹೋಗಿ ಕೆಲಸ ಮಾಡಿದರೆ ಅಂಥಾವರನ್ನು ನಾವು ಏನು ಮಾಡಬೇಕು ? ಪ್ರೈಮರಿ ಶಾಲೆಯ ಶಿಕ್ಷಕರು ನನ್ನ ಹತ್ತಿರ ಬಂದಿದ್ದರು. ಅವರಿಗೆ ಈ ಮಾತನ್ನು ಹೇಳಿದ ಮೇಲೆ ಅವರು ಒಪ್ಪಿಕೊಂಡಿದ್ದಾರೆ. ಅನೇಕ ಜನ ಶಿಕ್ಷಕರು ಹಾಗೆ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ— ಅಂಥಾವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ— ನಾವು ಆ ಪ್ರೈಮರಿ ಶಾಲೆಯ ಟೀಚರ್ಸ್‌ನ್ನು ತೆಗೆದುಕೊಂಡು ಹೋಗಿ ಅಂಡಮಾನ್‌ಗೆ ಹಾಕುವುದಿಲ್ಲ. ಹಾಗೆ ಹಾಕಲೂಬಾರದು. ಕೆಲವು ಪ್ರೈಮರಿ ಸ್ಕೂಲ್ ಟೀಚರ್ಸ್ ತಿಂಗಳಿಗೆ ೪–೫ ಸಾವಿರ ರೂ.ಗಳ ಸಂಪಾದನೆಯನ್ನು ಮಾಡಿಕೊಳ್ಳುತ್ತಿರುವುದು ನನಗೆ ಗೊತ್ತು. ಇದೇ ರೀತಿಯಾಗಿರತಕ್ಕ ಕೆಲವು ೪ನೇ ದರ್ಜೆ ನೌಕರರನ್ನು ಬೇರೆ ತಾಲ್ಲೂಕಿಗೆ ವರ್ಗಾಯಿಸುವ ಹಾಗೆ ಮಾಡಿದೆ. ಬೇರೆ ತಾಲ್ಲೂಕಿಗೆ ಏತಕ್ಕಾಗಿ ವರ್ಗಾವಣೆ ಮಾಡಬೇಕು ಎಂದರೆ ಅವರು ಸರ್ಕಾರದ ಕೆಲಸವನ್ನು ಬಿಟ್ಟು ಬೇರೆ ಕಡೆ ಹೋಗಿ ಕೆಲಸ ಮಾಡಿದರೆ ಏನು ಮಾಡುವುದು, ಅದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಅದು ಅಶಿಸ್ತು ಆಗುತ್ತದೆ. ನಾನು ಇಲಾಖೆಯ ಮುಖ್ಯಾಧಿಕಾರಿಗಳಿಗೆ ಹೇಳಿದ್ದೇನೆ, ಟ್ರಾನ್ಸ್‌ಫರ್ ವಿಚಾರದಲ್ಲಾಗಲಿ. ಪ್ರಮೋಷನ್ ವಿಚಾರದಲ್ಲಾಗಲೀ ಮತ್ತಾವ ವಿಚಾರದಲ್ಲಾಗಲಿ ಅವರಿಗೆ ನ್ಯಾಯವನ್ನು ಕೊಡಬೇಕೆಂದು. ಈ ವಿಚಾರದಲ್ಲಿ ಇಲಾಖಾ ಮುಖ್ಯಾಧಿಕಾರಿಗಳಿಗೆ ನಿರ್ದೇಶನ ಕೊಟ್ಟಿದ್ದೇನೆ. ಆ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ, ಆದಷ್ಟು ಮಟ್ಟಿಗೆ ಗಂಡ ಹೆಂಡತಿಯರು ಒಂದೇ ಜಾಗದಲ್ಲಿ ಇರುವ ಹಾಗೆ ಟ್ರಾನ್ಸ್‌ಫರ್ ಮಾಡುತ್ತಾರೆ ಆದರೆ ಗಂಡ ಒಂದು ತಾಲ್ಲೂಕ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದು ಹೆಂಡತಿ ಬೇರೆ ಕಡೆ ಕೆಲಸ ಮಾಡುತ್ತಿದ್ದರೆ ಅಂದರೆ

ಬ್ಯಾಂಕ್‌ನಲ್ಲೋ, ಯಾವುದರಲ್ಲೋ ಕೆಲಸ ಮಾಡುತ್ತಿದ್ದರೆ ಅದಕ್ಕೆ ನಾವು ಏನೂ ಮಾಡಲು ವುದಕ್ಕಾಗುವುದಿಲ್ಲ. ಅಲ್ಲದೆ ಮತ್ತೆ ೩ ವರ್ಷ ಆದ ಮೇಲೆ ಅಲ್ಲಿಗೇ ವಾಪಸ್ಸು ಬರುತ್ತೇವೆಂದರೂ ಅದೂ ಆಗುವುದಿಲ್ಲ. ಗಂಡ ಯಾವುದೋ ಕೇಂದ್ರ ಸರ್ಕಾರಿ ನೌಕರನಾಗಿದ್ದು ಹೆಂಡತಿ ಟ್ರಾನ್ಸ್‌ಫರ್ ಆಗದೇ ಇರುವ ಜಾಗದಲ್ಲಿ ಇದ್ದರೆ ಅದೂ ಕಷ್ಟ. ಅವರೇನಾದರೂ ರಾಜ್ಯ ಸರ್ಕಾರದ ನೌಕರಿಯಲ್ಲಿದ್ದರೆ ಅನುಕೂಲವನ್ನು ಮಾಡಿ ಕೊಡಬಹುದು. ಆದರೆ ಪುನಃ ಪುನಃ ಅವರು ಲೆಜಿಸ್ಲೇಚರ್ ಹೋಂಗೆ ಬಂದು ನಮ್ಮ ಶಾಸಕರನ್ನು ಹಿಡಿಸಿದರೆ ಏನು ಮಾಡುವುದು? ಅನೇಕ ಜನ ನನ್ನ ಹತ್ತಿರ ಬಂದು ಹೇಳಿದರು, ನಮ್ಮನ್ನು ಬಂದು ಹಿಡಿಸುತ್ತಿದ್ದಾರೆ, ನೋಡಿ, ಹೇಗಾದರೂ ಮಾಡಿ. ಅಂತ ಹಿಡಿಸುತ್ತಿದ್ದಾರೆ ನೀವು ಅವರಿಗೆ ಒಂದು ಮಾತು ಹೇಳಿದರೆ ಸಾಕು, ಒಂದು ಮಾತು ಹೇಳಿ ಆಗಿ ಹೋಗುತ್ತದೆ ಎಂದು ಹೇಳುತ್ತಾರಂತೆ. ಈ ರೀತಿಯಾಗಿ ಒತ್ತಡ ಹಾಕಿದರೆ ಏನು ಮಾಡುವುದು? ಸರ್ಕಾರಿ ನೌಕರರಿಗೆ ತೊಂದರೆ ಮಾಡಬೇಕುಅಂತ ನಮಗೇನೂ ಇಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅವರಿಗೆ ಅನುಕೂಲತೆ ಮಾಡಿಕೊಟ್ಟಿದ್ದೇವೆ. ಮಾಡಿಕೊಡುತ್ತೇವೆ. ಆದರೆ ಅವರು ಸರಿಯಾಗಿ ನಡೆದುಕೊಳ್ಳದೇ ಇದ್ದರೆ, ಇಲ್ಲಿ ಲಾಬಿ ಮಾಡುವುದಕ್ಕೆ ಬಂದರೆ ಅಂಥದರ ಬಗ್ಗೆ ಸಂಶಯ ಬರುತ್ತದೆ, ಅವರು ಆ ಲಾಬಿಯಲ್ಲಿ ಬಂದು ಆ ಜಾಗದಲ್ಲಿ ಕೂತರೂ ಅದು ಅಶಿಸ್ತು ಆಗುತ್ತದೆ. ಅವರ ವಿರುದ್ಧವಾಗಿ ನಾವು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು character assasination ವಿಚಾರದ ಬಗ್ಗೆ ಹೇಳಿದರು. ಈ ಸಂದರ್ಭದಲ್ಲಿ ಈ ಬಗ್ಗೆ ಈ ಮನೆಯಲ್ಲಿ ಏನು ನಡೆಯಿತು, ಆ ವಿಚಾರವಾಗಿ ಪ್ರೊಸೀಡಿಂಗ್ಸ್ ಏನು ಆಗಿದೆ. ಆ ಪ್ರೊಸೀಡಿಂಗ್ಸನ್ನು ತಮ್ಮ ಮುಂದೆ ಓದುವುದಕ್ಕೆ ಬಯಸುತ್ತೇನೆ. ೧೯೮೨ ಜುಲೈ ತಿಂಗಳಲ್ಲಿ ಇರುವುದನ್ನು ಸ್ವಲ್ಪ ಮಟ್ಟಿಗೆ ಓದುತ್ತೇನೆ. ಮಾನ್ಯ ವೀರಪ್ಪಮೊಯ್ಲಿ ಅವರು ಆವಾಗ ಅರ್ಥ ಮಂತ್ರಿಗಳಾಗಿದ್ದರು. ಅವರು ತಮ್ಮ ಮನಸ್ಸಿನಲ್ಲಿ ಬಹಳ ನೊಂದುಕೊಂಡು ಈ ವಿಚಾರ ಹೇಳಿದ್ದಾರೆ. ಅದು ಈ ರೀತಿ ಇದೆ. ಅವರಿಗೆ ಈ ಬಗ್ಗೆ ಮನಸ್ಸು ಬಹಳ ನೊಂದಿದೆ. ಅದೇನು ಕಾರಣವೋ ಗೊತ್ತಿಲ್ಲ. ಅವರ general disposition ಆ ತರಹವೋ ನನಗೆ ಗೊತ್ತಿಲ್ಲ ವೈಯುಕ್ತಿಕವಾಗಿ ಆಪಾದನೆ ಆದುದರಿಂದ attack ಆಗಿದೆ. ಈ ಪ್ರೊಸೀಡಿಂಗ್ಸ್‌ನಲ್ಲಿ ಈ ರೀತಿ ಇದೆ. ಮಾನ್ಯ ವೀರಪ್ಪಮೊಯ್ಲಿ ಅವರು ಈ ರೀತಿ ಹೇಳಿದ್ದಾರೆ.

Page No. 458

"SRI. M. VEERAPPA MOILY—xxxxx "Some times we will be more senstive. Why should we be here? Afterall we are discharging responsibility as public men and I may occupy sometimes the position as Minister and some times you may occupy that position. Sometimes, we will shy away from this. Why should we unnecessarily take blames and be here in public life? When you make alle gations you must also understand that there are also people who are sensitive on this thing, Alright, if you want to drive away some of the sensitive people from public life. you go on marking allegations. We will be out from this public life. Why should we be here?"

ಇದು ಮಾನ್ಯ ಬಂಗಾರಪ್ಪನವರು ಮಾಡಿದ ಭಾಷಣಕ್ಕೆ ಉತ್ತರವಾಗಿ ಅವರು ಹೇಳಿದ್ದು ಆಮೇಲೆ ಮುಂದೆ ಏನು ಇದೆ ಎಂದರೆ ಅದು ಈ ರೀತಿಯಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ — ಸೆನ್ಸಿಟೀವ್ ಯಾರಿಲ್ಲ ಎಂದು ಹೇಳಿಬಿಡಿ. ಅವರ ಮೇಲೆ ನಾವು ಮಾಡುತ್ತೇವೆ. ಆಮೇಲೆ ಏನು ಮಾಡುತ್ತೇವೆ ಎನ್ನುವುದನ್ನು ಹೇಳಲಿಲ್ಲ...ನಗು ಮುಂದುವರೆಯುತ್ತಾ ಹೀಗೆ ಇದೆ

"ಶ್ರೀ ಎಸ್. ಬಂಗಾರಪ್ಪ— ಮಾನ್ಯ ಸಚಿವರು ಸಾರ್ವಜನಿಕ ಜೀವನದಲ್ಲಿರುವವರಿಗೆ ಅಪಾದನೆ ಮಾಡಬೇಕು ಎಂದು ಮಾಡುತ್ತಿದ್ದಾರೆ ಎಂದು. ಆ ಉದ್ದೇಶದಿಂದ ನಾವು ಆಪಾದನೆ ಮಾಡಿಲ್ಲ. ನನ್ನ

ಮಾತನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಚೆನ್ನಾಗಿತ್ತು. ನಮ್ಮ ಉದ್ದೇಶ ನಿಮಗೂ, ನಿಮ್ಮ ಸರ್ಕಾರಕ್ಕೂ ಅಥವಾ ಯಾರಿಗೂ ಕೆಟ್ಟ ಹೆಸರು ತರಬೇಕೆಂದಲ್ಲ. ಸದುದ್ದೇಶದಿಂದಲೇ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ ಆದರೆ ಎರಡನೇ ವಿಚಾರ ತಾವೇನು ಹೇಳಿದಿರಿ ಡೀಲ್‌ಸ್ಟ್ರೈಕ್ ಮಾಡಿದ್ದೇವೆಂದು ಅದರ ಬಗ್ಗೆ ನಾನು ಹೇಳಿದೆ. ಸಾರ್ವಜನಿಕ ಕ್ಷೇತ್ರದಲ್ಲಿರುವುದು it is accidental that I became a Minister or sometimes you become a Minister. Not that, we have chased after power. We have come here to discharge our responsibility to the best of our abilities. If such allegations are made without any foundation or basis, that will affect some people particularly the sensitive people like us. Sometimes, we feel disgusted with this. That is all I wanted to tell ಆಮೇಲೆ ನೆಕ್ಸ್ಟ್... ಇದು ಜುಲ್ಮೈ ಆಗಿರಲ್ಲಿ.

Mr. Speaker.—It is a guideline for all.

ಶ್ರೀ ರಾಮಕೃಷ್ಣ ಹೆಗಡೆ.—ಮೂರು ವರ್ಷದಿಂದ ನಾನು ನೋಡುತ್ತಿದ್ದೇನೆ. ನಾವು ಇಲ್ಲಿ ಬರುವುದು ಪರಸ್ಪರ ಮಣ್ಣು ಎರಚುವುದಕ್ಕಲ್ಲ. ಬಹುಶ: ಎಲ್ಲರದೂ ಗುರಿ ಒಂದೇ. ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸಬೇಕು. ಸರ್ಕಾರ ತಪ್ಪು ಮಾಡಿದರೆ, ತಪ್ಪನ್ನು ಎತ್ತಿ ತೋರಿಸಲಿ, ನಾನು ಹೇಳುತ್ತೇನೆ. ದಯಮಾಡಿ ತಾವು ಅಪಾರ್ಥ ಮಾಡಿಕೊಳ್ಳಬಾರದು. ಇಲ್ಲಿ ಈ ಇಷ್ಯೂ ಮೇಲೆ ಮಾತನಾಡಿರುವವರು ಎಷ್ಟು ಜನ? ಶ್ರೀಮತಿ ನಾಗರತ್ನಮ್ಮನವರು ಕೆಲವು ವಿಷಯಗಳನ್ನು ಎತ್ತಿದರು. ಮಾನ್ಯ ಬಸವಲಿಂಗಪ್ಪನವರು ಕೆಲವು ವಿಷಯ ಹೇಳಿದರು; ಮಾನ್ಯ ವೀರಪ್ಪ ಮೊಯ್ಲಿಯವರು ಕೆಲವು ವಿಷಯ ಹೇಳಿದರು, ಮಾನ್ಯ ಕೆ.ಹೆಚ್. ಪಾಟೀಲರು ಕೆಲವು ವಿಷಯ ಎತ್ತಿದರು. ಆದರೆ ಮಾನ್ಯ ಬಂಗಾರಪ್ಪನವರು ಯಾವ ಇಷ್ಯೂ ಮೇಲೆ ಮಾತನಾಡಿದರು? ನಾನು ಏನು ನಿರೀಕ್ಷೆ ಮಾಡಿದ್ದೆ ಎಂದರೆ, ಬಜೆಟ್ ಭಾಷಣದಿಂದ, ಈ ಒಂದು ಹೌಸ್ ಏನಿದೆ, ಇದು ಒಂದು ಐಡಿಯಾ ಕೊಡುತ್ತದೆ ಎಂದು ಭಾವಿಸಿದ್ದೆ. ಈಗ ನಾವೆಲ್ಲರೂ ಕುಳಿತುಕೊಂಡು ಯೋಚನೆ ಮಾಡಿ, ನ್ಯಾಶನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಯಾವ ಪ್ರಪೋಸಲ್‌ನ್ನು ನಾವು ಇಟ್ಟಿದ್ದೆವೂ ಆ ಪ್ರಪೋಸಲ್‌ಗೆ ಅನುಗುಣವಾಗಿ ಈ ಬಜೆಟ್ ತಯಾರು ಮಾಡಿದ್ದೇವೆ. ನಾವು ಬರುವ ೧೫ ವರ್ಷಗಳಲ್ಲಿ ನಾವು ಯಾವ ದಾರಿಯಲ್ಲಿ ಹೋಗಬೇಕು? ಯಾವ ದಿಕ್ಕನ್ನು ಸೂಚನೆ ಮಾಡಿದ್ದೇವೊ, ಯಾವ ಕಾರ್ಯಕ್ರಮ ರೂಪು ರೇಷೆಗಳನ್ನು ಹಾಕಿಕೊಂಡಿದ್ದೇವೋ ಇದರ ಬಗ್ಗೆ ಒಂದಾದರು ಮಾತು ಬಂತೆ ? ಹೇಳಬಹುದಾಗಿತ್ತು, ಇದನ್ನು ನಾವು ಒಪ್ಪಿದ್ದೇವೆ, ಇದು ಕಷ್ಟವಾಗಬಹುದು, ಇದರಲ್ಲಿ ಇಂತಹ ತೊಂದರೆ ಬರಬಹುದು ಇದು ಅವ್ಯವಹಾರ, ಇದು ಕನಸು ಎಂಬಂದನ್ನೆಲ್ಲಾ ಹೇಳಬಹುದಿತ್ತು......

ಶ್ರೀ ಎಸ್. ಬಂಗಾರಪ್ಪ.—ಅವ್ಯವಹಾರ ಎಂದರೆ, ನೀವು ಅಪಾದನೆ ಎನ್ನುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲ, ಅಲ್ಲ ಅವ್ಯವಹಾರಿಕ ಅಂದೆ ಸಾರಿ, ಅವ್ಯವಹಾರ ಅಲ್ಲವೇ ? ವ್ಯವಹಾರಿಕವಾದುದಲ್ಲ ಎಂದು ಅಂದರೆ (ನಗು) ಅಲ್ಲ ಅವ್ಯವಹಾರಿಕ ಅಂತ ನೀವು ಹೇಳ್ತೀರಿ ಅಂತ ನನಗೆ ಗೊತ್ತು ಕೆಲವು ಸಲ ಚರ್ಚೆ ಆಗಬಹುದು. ಚರ್ಚೆ ಆಗುವಾಗ, ಆ ಕಡೆ ಕುಳಿತಂಥ ಮಾನ್ಯ ಸದಸ್ಯರು ಏನು ಹೇಳಿದರೂ ನಾವು ಶಾಂತಿಯಿಂದ ಕೇಳುತ್ತೇವೆ. ಒಮ್ಮೆ ಮನಸ್ಸಿನಲ್ಲಿ ಉದ್ರೇಕ ಭಾವನೆಗಳು ಬಂದರೂ ಕುಳಿತುಕೊಂಡಿರುತ್ತೇವೆ. ಅದರಂತೆ ನಾವು ಏನಾದರೂ ಒಂದು ಮಾತು ಹೇಳುತ್ತೇವೆ. ಅದಕ್ಕೆ ಪ್ರತಿಕ್ರಿಯೆಯನ್ನು ಸ್ವೀಕಾರ ಮಾಡತಕ್ಕಂಥ ಸೌಜನ್ಯ, ಉದಾರತೆ ಇರಬೇಕು. ಇಲ್ಲದೇ ಹೋದರೆ ಅಂತಹ ಮಾತನ್ನು ಆಡಬಾರದು. ಇದು ಒನ್ ವೇ ಟ್ರಾಫಿಕ್ ಆಗುವುದಿಲ್ಲ. ನಾನು ಸೂಚನೆ ಮಾಡುತ್ತೇನೆ, ಮಾನ್ಯ ಮೊಯ್ಲಿಯವರು ಹೇಳಿದ ಮಾತನ್ನು ಹೇಳುತ್ತೇನೆ. ಆದರಲ್ಲಿ ವೈಯಕ್ತಿಕವಾದ ಆರೋಪ, ಅದು ಪ್ರತ್ಯಕ್ಷವಾಗಿ ಬರುವುದು ಇರಲಿ ಅಥವಾ ಅಪ್ರತ್ಯಕ್ಷವಾಗಿ ಬರುವುದು ಇರಲಿ ಅದರ ಬಗ್ಗೆ ಚರ್ಚೆ ಮಾಡೋಣ. ಆ ಒಂದು ಸೌಜನ್ಯ ಇಲ್ಲದೇ ಹೋದರೆ ಹೇಳುವುದು ಬೇಡ. ವಿರೋಧ ಪಕ್ಷದನಾಯಕರು ಹೋದ ಸಭೆಯಲ್ಲಿ ಒಂದು ಮಾತು ಹೇಳಿದರು. ನಿರ್ಲಾನ್ಸ್‌ಗೆ ಒಂದು ದೊಡ್ಡ ಫ್ಯಾಕ್ಟರಿ ಕೊಟ್ಟರು ಎಂದೂ, ಇದರಲ್ಲಿ ದೊಡ್ಡ ಅವ್ಯವಹಾರ ನಡೆದಿದೆ ಎಂದು. ನಮಗೆ ಆಶ್ಚರ್ಯ. ಒಂದೊಂದು ಸಲ ಮನಸ್ಸಿನಲ್ಲಿ ಭಾವನೆಗಳು ಬರುತ್ತವೆ. ಆ ಕಡೆ ಕುಳಿತವರಿಗೂ,

ಭಾಷಣ ಮಾಡುವುದು ಜನರ ಹಿತವನ್ನು ಹಾಗೂ ಜನ ಸೇವೆಯನ್ನು ಮಾಡುವುದಕ್ಕೆ ಎಂಬುದು ಇರಬೇಕು ಅದು ಬಿಟ್ಟು ಪಬ್ಲಿಸಿಟಿ ಪಡೆಯುವುದಕ್ಕೆ ಕೆಲವೊಂದು ಮಹತ್ವ ಇಲ್ಲದೇ ಇರುವ ಮಾತನ್ನು ಹೇಳಿದರೆ ಪಬ್ಲಿಸಿಟಿ ಸಿಗುತ್ತದೆಂದು, ಅದನ್ನು ಹೇಳಿಕೊಂಡು ಹೋದರೆ, ಅದರಿಂದ ಏನೂ ಆಗುವುದಿಲ್ಲ. ಏನಾದರೂ ಅವ್ಯವಹಾರ ನಡೆದಿದ್ದರೆ, ಅದನ್ನು ಹೇಳಲಿ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ, ಎಸ್ಟಿಮೇಟ್ಸ್ ಕಮಿಟಿ ಇದೆ, ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಇದೆ ಈ ಮನೆಗೆ ಸಂಪೂರ್ಣ ಅಧಿಕಾರ ಇದೆ. ಬಿಚ್ಚಿ ಬಿಚ್ಚಿ ಶೋಧನೆ ಮಾಡಲಿ ಮಾನ್ಯ ವೀರಪ್ಪ ಮೊಯ್ಲಿಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿ ಅಧ್ಯಕ್ಷರು. ಅವರು ಹೋದಸಲ ಒಂದು ರಿಪೋರ್ಟ್ ಕೊಟ್ಟರು ಬಾಗೂರು ಕಣಿವೆ ಯೋಜನೆಯ ಬಗ್ಗೆ ಸಂದೇಹಾಸ್ಪದವಾಗಿದೆ ಎಂದು ಹೇಳಿದರು. ಅದಕ್ಕೆ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡಿ ಎಂದರು, ನಾವು ಅದನ್ನು ಮಾಡಲಿಲ್ಲವೇ? ಹಿಂದೆ ಇದು ಆಗಿತ್ತೆ? ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಂಥ ವರದಿಯನ್ನು ಈ ಸಭೆಯಲ್ಲಿ ತಂದು, ಅದನ್ನು ರಿಜೆಕ್ಟ್ ಮಾಡಿದಂಥ ಉದಾಹರಣೆಗಳು ಇಲ್ಲವೆ? ಆದ್ದರಿಂದ ಇದಕ್ಕೆ ಮರ್ಯಾದೆ ಕೊಡಬೇಕಾಗುತ್ತದೆ. ಇವರ ಮಾತನ್ನೂ ಕೇಳಬೇಕಾಗುತ್ತದೆ ಅವರು ಅಂದು ಅಕಸ್ಮಾತ್ತಾಗಿ ಆ ನಿರ್ಣಯಕ್ಕೆ ಬಂದಿರಬಹುದು, ಆ ಮಾತು ಬೇರೆ ಸಮಿತಿಯವರು ಹೇಳಿದಂಥಹ ಮಾತನ್ನು ಗೌರವಿಸಬೇಕಾಗುತ್ತದೆ, ಆ ಸಮಿತಿಯೂ ಕೂಡ ಈ ಮನೆಯಲ್ಲಿ ಆರಿಸಿದ್ದೇ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಬೊಮ್ಮಾಯಿಯವರೂ ಇಲ್ಲಿಯೇ ಇದ್ದಾರೆ. ಅವರು ಆಗ ಕೈಗಾರಿಕಾ ಮಂತ್ರಿಗಳಾಗಿದ್ದರು. ನಾವು ಅಧಿಕಾರಕ್ಕೆ ಬಂದ ಕೆಲವೇ ದಿವಸದಲ್ಲಿ ಮಾನ್ಯ ಬೊಮ್ಮಾಯಿಯವರು ನನ್ನ ಹತ್ತಿರ ಒಂದು ಫೈಲು ಹಿಡಿದುಕೊಂಡು ಬಂದರು. ಸ್ಟೇಪಲ್ ಫೈಬರ್ ಒಂದು ದೊಡ್ಡ ಪ್ರಾಜೆಕ್ಟ್. ಸುಮಾರು ೪೦–೫೦ ಕೋಟಿ ರೂಪಾಯಿಗಳಾಗಬಹುದು. ಅಲ್ಲಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದು ಇದನ್ನೆಲ್ಲಾ ನೋಡಿದರೆ, ಯಾರ ಹೆಸರು ರೆಕ್‌ಮೆಂಡ್ ಆಗಿ ಬಂದಿತ್ತೋ ಅವರ ಹೆಸರನ್ನು ಟೆಕ್ನಿಕಲ್ ಕಮಿಟಿಯವರು ಕ್ಲಿಯರ್ ಮಾಡಲಿಲ್ಲ. ಕೆ.ಎಸ್.ಐ.ಡಿ.ಸಿ. ಅವರೂ ರೆಕ್‌ಮೆಂಡ್ ಮಾಡಿರಲಿಲ್ಲ ನಾವು ವಾಪಸ್ ಕಳುಹಿಸಿಕೊಟ್ಟೆವು. ಟೆಕ್ನಿಕಲ್ ಕಮಿಟಿಯವರು ಪ್ರತ್ಯೇಕವಾದ ಹೆಸರು ಕೊಡಲಿ, ಅವರು ಏನು ಕೊಡುತ್ತಾರೋ ಅದನ್ನು ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದೆ. ಅವರು ಏನು ಕೊಡುತ್ತಾರೆ, ಅದರಲ್ಲಿ ಸರ್ಕಾರದ ಹಸ್ತಕ್ಷೇಪ ಒಂದು ಚೂರೂ ಇಲ್ಲ. ಅದು ೧೯೮೨ನೇ ಇಸವಿ ಕೊನೆ ಆದುದರಿಂದ ಹಿಂದೆ ಟೆಕ್ನಿಕಲ್ ಕಮಿಟಿಯವರು ಏನು ತೀರ್ಮಾನ ಮಾಡಿದರು ಅದನ್ನು ಸರ್ಕಾರ ಬದಲಾಯಿಸಬೇಕೆಂಬ ಕಾರಣ ಏನಿತ್ತೋ, ಅದು ನನಗೆ ಗೊತ್ತಿಲ್ಲ. ಕೆ.ಎಸ್.ಐ.ಡಿ.ಸಿ. ನವರು ತೀರ್ಮಾನ ಮಾಡಿದರು. ಅದನ್ನು ಕೇಂದ್ರ ಸರ್ಕಾರಕ್ಕೆ ರೆಕ್‌ಮೆಂಡ್ ಮಾಡಿ ಕಳುಹಿಸಿಕೊಟ್ಟೆ. ಅದು ಇದುವರೆಗೂ ಆಗಿಲ್ಲ. ಅದು ಬೇರೆ ಕಡೆಯಾಗಿದೆ ಈ ಒಂದು ಉದಾಹರಣೆಯನ್ನು ಏಕೆ ಕೊಡುತ್ತಿದ್ದೇನೆಂದರೆ ಅವರು ಮೊನ್ನೆ ಒಂದು ವಿಷಯವನ್ನು ಹೇಳಿದರು. ನಾವು ಬಂದಮೇಲೆ ಎಷ್ಟೋ ಜನರಿಗೆ ಡಿಸ್ಟಲರಿ, ಬ್ರಿವರೀಸ್ ಕೊಟ್ಟಿದ್ದೇವೆಂದು. ಬೀದರ್‌ನಲ್ಲಿ ಟಾಪಿಯೋಕಾ ಆಧಾರದಮೇಲೆ ಆ ಬೇಸಿಸ್ ಮೇಲೆ ಡಿಸ್ಟಲರಿ ಕೊಟ್ಟಿದ್ದೀರಿ. ಇದು ಎಲ್ಲಿ ಎಂದು ನನಗೆ ಗೊತ್ತಿಲ್ಲ, ನಾನು ಹೇಳಿದೆ, ಇದು ನಮ್ಮ ಸರ್ಕಾರದವರೆಗೆ ಈ ವಿಚಾರ ಬರುವುದಿಲ್ಲ. ಎಕ್ಸೈಸ್ ಕಮೀಷನರ್ ಅವರಿಗೇ ಅಧಿಕಾರ ಇರುತ್ತದೆ. ಅವರೂ ಕೂಡ, ನಮಗೆ ಬಹಳಷ್ಟು ಅರ್ಜಿಗಳು ಬಂದಿವೆ, ಡಿಸ್ಟಲರಿ ಬಂದಿವೆ. ಮಾನ್ಯ ಜೆ.ಹೆಚ್. ಪಟೇಲರು ಈ ಖಾತೆಯ ಮಂತ್ರಿಗಳಾಗಿದ್ದಾಗ, ಕ್ಯಾಬಿನೆಟ್‌ನಲ್ಲಿ ಕೇಳಿದರು, ಏನು ತೀರ್ಮಾನ ಮಾಡಬೇಕೆಂದು ಕೇಳಿದರು. ಅದಕ್ಕೆ ನಾನು ಏನು ಬಂದರೂ ಮೂರು ಜನರದ್ದು ಕಮಿಟಿ ಮಾಡಿ, ಅದರಲ್ಲಿ ಹೋಂ ಸೆಕ್ರಟರಿ ಇಂಡಸ್ಟ್ರೀಸ್ ಕಮೀಷನರ್, ಎಕ್ಸೈಸ್ ಕಮೀಷನರ್ ಅವರನ್ನು ಹಾಕಿ ಆ ಕಮಿಟಿಯವರು ಎಲ್ಲಾ ನೋಡಿ, ವರದಿ ಕೊಡುತ್ತಾರೆ. ಎಂದು ಅವರು ಈಗಾಗಲೇ ೩–೪ ಮೀಟಿಂಗ್ ಮಾಡಿದ್ದಾರೆ, ಇನ್ನೂ ಕೊನೆಯ ತೀರ್ಮಾನ ತೆಗೆದುಕೊಂಡಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾರಿಗೂ ಕೂಡ ಡಿಸ್ಟಿಲರಿ ಲೈಸೆನ್ಸ್ ಕೊಟ್ಟಿಲ್ಲ.

ಆದರೆ ಬೇರೆಬೇರೆಯವರಿಗೆ ಕೊಟ್ಟಿದ್ದೀರಿ, ಮತ್ತೊಬ್ಬರಿಗೆ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ; ಅದು ಪೇಪರಿನಲ್ಲಿ ಬಂತು ಹೌದೋ ಅಲ್ಲವೋ. ಸಜ್ಜೆಷನ್ ಏನದು.೫ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಈಗ ಕೊಟ್ಟಿಲ್ಲ, ಆದರೆ ಕೊಡಬೇಕಾಗುತ್ತದೆ. ಯಾವುದೇ ಒಂದು ನಿರ್ಣಯ ತೆಗೆದುಕೊಂಡರೂ ಅದರಲ್ಲಿ ಅವ್ಯವಹಾರ ಇದೆ, ಅದರಲ್ಲಿ ಏನೋ ವ್ಯವಹಾರ ನಡೆದಿದೆ ಎಂದು ಈ ತರಹ ಮಾತನ್ನು ಹೇಳುತ್ತಾ ಹೋದರೆ...

ಶ್ರೀ ಎಸ್. ಬಂಗಾರಪ್ಪ.—ಯಾರಿಗೂ ಕೊಟ್ಟಿಲ್ಲವೆ?

ಶ್ರೀ ರಾಮಕೃಷ್ಣ ಹೆಗಡೆ.—ಯಾರಿಗೂ ಕೊಟ್ಟಿಲ್ಲ. ೧೯೮೩ ರಿಂದ ಒಂದೂ ಬ್ರಿವರಿಯಾಗಲಿ ಅಥವಾ ಡಿಸ್ಟಿಲರಿಗೇಯಾಗಲಿ ಯಾವುದಕ್ಕೂ ಒಂದು ಹೊಸ ಲೈಸನ್ಸನ್ನು ನಾವು ಕೊಟ್ಟಿಲ್ಲ. ಯಾರ್ಯಾರು ಅರ್ಜಿ ಹಾಕಿದ್ದಾರೆ ಎಂದು ಹೇಳುತ್ತೇನೆ, ಬಂದಿರತಕ್ಕ ಅರ್ಜಿಗಳನ್ನು ಹೇಳುತ್ತೇನೆ. ಕೆಮಿಕಲ್ಸ್ ಬೇರೆ. Applications received for grant of distillary licence for manufacturing spirit from ಮ್ಯಾನೇಜಿಂಗ್ ಡೈರೆಕ್ಟರ್ ಈಶ್ವರಿ ಡಿಸ್ಟಿಲರೀಸ್ ಅಂಡ್ ಕೆಮಿಕಲ್ಸ್ ಬೀದರ್, ಇವರು ೧೯೮೩ನೇ ಇಸವಿಯಲ್ಲಿ ಅರ್ಜಿ ಹಾಕಿರುವುದು. ಎರಡನೆಯದಾಗಿ ಎಸ್. ಇಬ್ರಾಹಿಂ ಶಿವಮೊಗ್ಗ ೧೯೮೫ರಲ್ಲಿ. ಚಿನ್ನಪ್ಪ. ಬೆಂಗಳೂರು ೧೯೮೫ ರಲ್ಲಿ. ಶಿವಾಜಿ ಡಿಸ್ಟಿಲರೀಸ್, ಮೈಸೂರು ೧೯೮೫ ರಲ್ಲಿ ವೇಣುಗೋಪಾಲರೆಡ್ಡಿ, ಬೆಂಗಳೂರು ೧೯೮೫ರಲ್ಲಿ. ರಾಜ್ ಡಿಸ್ಟಿಲರೀಸ್ ಶಿರೂರ್ ಹೌಸ್, ಬೆಂಗಳೂರು ೧೯೮೫ ರಲ್ಲಿ. ಮ್ಯಾನೇಜಿಂಗ್ ಡೈರೆಕ್ಟರ್ ಎಗ್ನಿಮ ಕೆಮಿಕಲ್ಸ್ ಬೆಂಗಳೂರು ೧೯೮೬ ರಲ್ಲಿ ಇದು ಇಷ್ಟು. ಆಮೇಲೆ applications received for grant of distillery licence for maunfacture of fenny out of fruits like apple, pineapple, cashew-nuts, grapesetc, from ಆರ್. ಟಿ. ಹಬೀಬ್, ಹುಬ್ಬಳ್ಳಿ ೧೯೮೪ ರಲ್ಲಿ ಅಮೃತ್ ಡಿಸ್ಟಿಲರೀಸ್ ೧೯೮೪ ರಲ್ಲಿ ಹುಬ್ಬಳ್ಳಿ. ಅರುಣಕುಮಾರ್ ಶೆಟ್ಟಿ ೧೯೮೫ ರಲ್ಲಿ. ದಿ ಚೇರ್ಮನ್, ಮೆಪರ್ರ್ ಕೆನರಾ ಬ್ರಿವರೀಸ್ ೧೯೮೫ ರಲ್ಲಿ, ಅದು ಸಿರಸಿ. ರೇಣುಕಾ ಎಂಟರ್‌ಪ್ರೈಸಸ್, ಹುಬ್ಬಳ್ಳಿ ೧೯೮೫ ರಲ್ಲಿ ಉಮೇಶ್ ಶೆಟ್ಟಿ, ಮಂಗಳೂರು ೧೯೮೬ರಲ್ಲಿ ರಾಮಕೃಷ್ಣ ನಾಯಕ್, ಕುಮಟ್ ೧೯೮೬ ರಲ್ಲಿ. ಆಮೇಲೆ ತೇಜೇಂದ್ರ ಬಲರಾಜ್ ೧೯೮೬ ರಲ್ಲಿ, ಬೆಂಗಳೂರು, ಆಮೇಲೆ ಪರಮೇಶ್ವರ, ಹೊನ್ನಾವರ್ ೧೯೮೬ ರಲ್ಲಿ ಇಷ್ಟು ಬಂದಿವೆ.

ಶ್ರೀ ಎಸ್ ಬಂಗಾರಪ್ಪ.—ಹುಬ್ಬಳ್ಳಿಯವರಿಗೆ ಯಾರಿಗೂ ಹೊಸ ಲೈಸನ್ಸ್ ಕೊಟ್ಟಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಹೊಸ ಲೈಸನ್ಸ್ ನಾವು ಕೊಟ್ಟಿಲ್ಲ. ಆದರೆ ಕಳೆದ ೨-೩ ವರ್ಷಗಳಿಂದ ಅರ್ಜಿ ಪೆಂಡಿಂಗ್‌ನಲ್ಲಿದೆ. ಕಮಿಟಿಯವರು ಒಂದು ತೀರ್ಮಾನ ಮಾಡಿದಾಗ ನಾವು ಅವರಿಗೆ ಕೊಡುತ್ತೇವೆ. ಸರ್ಕಾರ ಸಾಮಾನ್ಯವಾಗಿ ಮಾಡತಕ್ಕಂಥ ಕೆಲಸವಿದು ಅದಕ್ಕೂ ಕೊಡುತ್ತೇವೆ, ಇದಕ್ಕೂ ಕೊಡುತ್ತೇವೆ. ಕಮಿಟಿಯವರು ಯಾವರೀತಿ ರೆಕಮೆಂಡ್ ಮಾಡುತ್ತಾರೋ ಅದರ ಆಧಾರದ ಮೇಲೆ ಸಂಬಂಧಪಟ್ಟ ಮಂತ್ರಿಗಳು ನಿರ್ಣಯ ತೆಗೆದುಕೊಳ್ಳುತ್ತಾರೆ.

ಶ್ರೀ ಜಿ. ನಾರಾಯಣ್‌ಕುಮಾರ್.—ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ವಿಷಯ ತಿಳಿಸಬೇಕು, ೨೭-೨-೮೬ ರಲ್ಲಿ ಮಾನ್ಯ ವೀರಪ್ಪಮೊಯಿಲಿಯವರು ಹೇಳಿದ್ದಾರೆ. ಬಂಗಾರಪ್ಪನವರು ಆಧಾರವಿಲ್ಲದೆ ವಿಷಯ ತಿಳಿದುಕೊಳ್ಳುವುದಕ್ಕೆ ತೊಂದರೇನೂ ತೆಗೆದುಕೊಳ್ಳದೆ ಆಪಾದನೆ ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗ ತಾವು ಏನು ಓದಿರೋ ಅದೇ ಕಲಂನಲ್ಲಿ ತೆಗೆದುನೋಡಬೇಕು ಎಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಕೆಮಿಕಲ್ಸ್ ಇಂಡಸ್ಟ್ರೀಸ್ ವಿಚಾರದಲ್ಲಿ ಅವರು ಹೇಳಿದರು. ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದೇ ಮಾತನ್ನು ಅನೇಕ ಸಲ ಹೇಳತಕ್ಕಂಥ ಅಭ್ಯಾಸ ಇದೆ. ಬಹುಶಃ ಅವರು ಎರಡು ವರ್ಷಗಳ ಹಿಂದೆ ಈ ಮಾತನ್ನು ಹೇಳಿದರು, ಹೋದವರ್ಷವೂ ಈ ಮಾತನ್ನು ಹೇಳಿದರು. ಅದೇನೆಂದರೆ, ಜೆ. ಹೆಚ್. ಪಟೇಲರ ಮಗನಿಗೆ ಲೈಸನ್ಸ್ ಸಿಕ್ಕಿದೆ ಎಂದು.

ಶ್ರೀ ಎಸ್. ಬಂಗಾರಪ್ಪ.—ಕಳೆದ ವರ್ಷ ಹೇಳಿದೇನೇ?

ಶ್ರೀ ರಾಮಕೃಷ್ಣ ಹೆಗಡೆ.—ಇದೇ ವಿಚಾರ ಬಂದಿತ್ತು. ಅದನ್ನು ತಂದುಕೊಟ್ಟಿದ್ದಾರೆ. ಆ ಮಾತನ್ನು ಹೋದವರ್ಷ ಹೇಳಲಿಲ್ಲ ಎಂದು ಈ ಸಲ ಹೇಳಿದಿರಿ.

ಶ್ರೀ ಎಸ್. ಬಂಗಾರಪ್ಪ.—ನೀವು ಸರಿಯಾಗಿ ಓದಿಕೊಂಡು ಹೇಳಿದರೆ ಉತ್ತಮ, ನಿಮ್ಮ ರಾಜಕೀಯ ಆರೋಗ್ಯಕ್ಕೆ For the first time I raised this issue about three years back in the Assembly...

ಅಧ್ಯಕ್ಷರು.—ತಾವು ಕೂಡಿ,

ಶ್ರೀ ರಾಮಕೃಷ್ಣ ಹೆಗಡೆ.—ಯಾರ್ಯಾರಿಗೆ ಕೊಟ್ಟಿದ್ದೇವೆ ಎನ್ನತಕ್ಕಂಥ ಲಿಸ್ಟನ್ನು ಈ ಮನೆಯ ಟೇಬಲ್ ಮೇಲೆ ಇಡಲಿಕ್ಕೆ ನಾನು ಸಿದ್ಧನಿದ್ದೇನೆ. ಅದರಲ್ಲಿ ನಿಮಗೆ ಕಾಣಬಹುದು. ಕಾಂಗ್ರೆಸ್-ಐ
ಪಕ್ಷದ ಒಂದು [illegible] ಇದು ಹ್ಯಾಗಿದೆ
ಅವರು ಯಾರೇ ಇರಲಿ ಬೇರೆ ಪಕ್ಷದವರು ಹೇಳಲಿಕ್ಕೆ ನಾನು
ತಯಾರು ಇಲ್ಲ.

ಪಕ್ಷದ ಒಂದು ಹುದ್ದೆಯಲ್ಲಿದ್ದಂತಹವರಿಗೂ ಕೂಡ ಇದು ಹೋಗಿದೆ. ಅವರು ಯಾರೇ ಇರಲಿ, ಅವರ ಹೆಸರು ಹೇಳಲಿಕ್ಕೆ ನಾನು ತಯಾರಿಲ್ಲ.

ಶ್ರೀ ಜೆ. ಹೆಚ್. ಪಟೇಲ್,—ಮೊನ್ನೆ ನನ್ನ ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವಾಗ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಒಂದು ಪ್ರಶ್ನೆ ಕೇಳಿದರು. ಎಷ್ಟು ಕೆಮಿಕಲ್ ಇಂಡಸ್ಟ್ರೀಸ್ ಮಾಡಿದಿರಿ ಎಂದು ಮತ್ತೆ ಯಾರ್ಯಾರಿಗೆ ಲೈಸನ್ಸ್ ಕೊಟ್ಟಿದ್ದೀರಿ ಆಮೇಲೆ ಮಂತ್ರಿಗಳ ಸಂಬಂಧಿಗಳಿಗೆ ಲೈಸನ್ಸ್ ಕೊಟ್ಟಿದ್ದೀರಾ ಎಂದು ಕೇಳಿದರು. ನಾನು ಉತ್ತರ ಕೊಡುವಾಗ ಹೇಳಿದೆ, ಬೇರೆಯವರಿಗೆ ಲೈಸನ್ಸ್ ಕೊಟ್ಟಿರುವುದು ಗೊತ್ತಿಲ್ಲ, ನನ್ನ ಮಗನಿಗೆ ಲೈಸನ್ಸ್ ಕೊಟ್ಟಿರುವುದು ಹೌದು ಎರಡು ವರ್ಷಗಳ ಕೆಳಗೆ ಅವರು ಬಿ.ಕಾಂ. ಗ್ರಾಜುಯೇಟ್, ಮೊದಲು ಬೇರೆ ವ್ಯಾಪಾರ, ಸಿಮೆಂಟ್, ಸ್ಟೀಲ್ ವ್ಯಾಪಾರ ಮಾಡುತ್ತಿದ್ದ. ಅನಂತರ ಇಂಡಸ್ಟ್ರೀಸ್ ಮಾಡುತ್ತೇನೆ ಎಂದು ಹೇಳಿದ, ಮಾಡಿದ್ದಾನೆ. ಆ ಇಂಡಸ್ಟ್ರೀ ನಡೆಯುತ್ತಿದೆ ಎಂದು ಹೇಳಿದೆ. ಹೋಲ್‌ಸೇಲ್ ಆಗ ಇನ್ನೊಂದು ಮಾತನ್ನು ಹೇಳಿದೆ. ಇದರೊಳಗೆ ಕುಹಕ ಇಲ್ಲದೇ ಹೋದರೆ ನಾನು ಒಪ್ಪಿಕೊಳ್ಳುತ್ತೇನೆ. ಅಧಿಕಾರದಲ್ಲಿರತಕ್ಕವರು ತಮ್ಮ ಅಧಿಕಾರದ ಯಾವುದೇ ಸಂಳಿವು, ಯಾವುದೇ ಅವರ ಪ್ರಭಾವದಿಂದ ನನ್ನ ಕುಟುಂಬದವರಿಗೆ ಉದ್ಯೋಗವಾಗಲಿ ಗಳಿಕೆಯಾಗಲಿ ಮಾಡಬಾರದು. ಇದು ಅಭಿಮಾನದ 'ಮಾತಾದರೆ ಒಪ್ಪಿಕೊಳ್ಳುತ್ತೇನೆ. ಆದರೆ ಮಹಾತ್ಮ ಗಾಂಧಿಯವರು ಒಬ್ಬರು ಇದಕ್ಕೆ ಎಕ್ಸೆಪ್‌ಷನ್ ಅವರನ್ನು ಬಿಟ್ಟರೆ ಜವಹರಲಾಲ್ ನೆಹರೂ ರವರು ತಮ್ಮ ಮಗಳೇ ಪ್ರಧಾನಿ ಆಗಬೇಕು ಎಂದು ಇಚ್ಛೆಪಟ್ಟಿದ್ದರಲ್ಲಿ ತಂದೆಯ ಅಭಿಮಾನ ಇರಬಹುದು. ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ಮಗನೇ ಪ್ರಧಾನಮಂತ್ರಿಯಾಗಬೇಕು ಎಂದು ಅಥವಾ ಮಾರುತಿಕಾರ್ ಲೈಸನ್ಸ್ ಕೊಟ್ಟಿದ್ದರಲ್ಲಿ ತಾಯಿ ಅಭಿಮಾನ ಇರಬಹುದು. ಆದರೆ ನಾನು ಇದನ್ನು ಆ ದೃಷ್ಟಿಯಿಂದ ನೋಡುವುದು ಅಲ್ಲ. ಮಹಾತ್ಮಾಗಾಂಧಿಯವರ ಹಾಗೆ ಇರುವುದಕ್ಕೆ ಸಾಧ್ಯವಾದರೆ ಅದಕ್ಕಿಂತ ಎತ್ತರವಿಟ್ಟಿದ್ದಾದರೆ ಒಳ್ಳೆಯದು. ಅದರ ಉದ್ದೇಶ. ನಾನು ನೆಹರೂರವರ ಮಟ್ಟಕ್ಕೆ ಏಕೆ ಬಂದೆ ಅಂದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ ಒಂದು ನಿಮಿಷ.

ಶ್ರೀ ಜೆ. ಹೆಚ್. ಪಟೇಲ್,—ಇನ್ನೊಂದು ಮಾತು. ಮಾನ್ಯ ಬಂಗಾರಪ್ಪನವರ ಮಕ್ಕಳು ಏನು ಕೆಲಸ ಮಾಡುತ್ತಾರೋ ನನಗೆ ಗೊತ್ತಿಲ್ಲ. ಅವರ ತಂದೆಯವರು, ಅವರ ಆಸ್ತಿ ನನಗೆ ಗೊತ್ತು. ೨೫ ವರ್ಷಗಳ ಹಿಂದೆ ನಮ್ಮ ಜೊತೆಗೆ ಇದ್ದಾಗಿನದು ಗೊತ್ತು, ಆಮೇಲೆ ಅವರು ನಮ್ಮನ್ನು ಬಿಟ್ಟು ಬೇರೆ ಯಾವುದೋ ದಾರಿಗೆ ಹೋದರು, ನಾನು ಈ ಕಡೆ ಬಂದೆ. ನನ್ನ ತಂದೆ ಆಸ್ತಿ ಮನೆತನದ ಆಸ್ತಿ ಅವರಿಗೂ ಗೊತ್ತು. ಅವರ ಆಸ್ತಿಗಿಂತ ದೊಡ್ಡ ಆಸ್ತಿ ನಮ್ಮದು. ಆದರೆ ಅವರ ಮಗ ಏನು ಕೆಲಸ ಮಾಡುತ್ತಾನೋ ಏನೋ ಅದನ್ನು ನಾನು ನೋಡುವುದಕ್ಕೆ ಹೋಗುವುದಿಲ್ಲ ಹಾಗೆಯೇ ಅದು ನನಗೆ ಗೊತ್ತಿಲ್ಲ ಬಹುಶಃ ಅವರಿಗೆ ಯಾವುದೂ ಇಂಡಸ್ಟ್ರೀಸ್ ಇಲ್ಲದೆ, ಯಾವುದೇ ಒಂದು ಉದ್ಯೋಗ ವಿಲ್ಲದೆ ಜೀವನ ಮಾಡುವಷ್ಟು ಈಗಾಗಲೇ ಮಾಡಿಬಿಟ್ಟಿದ್ದರೆ ಉದ್ಯೋಗ ಬೇಡ ಎಂದು ಹೇಳಬಹುದು ಆದರೆ ನನ್ನ ಮಗನಿಗೆ ಒಂದು ಉದ್ಯೋಗ ಬೇಕು,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಹಾತ್ಮಗಾಂಧೀಜಿಯವರನ್ನು ಬಿಟ್ಟು ನೆಹರೂರವರು ತಮ್ಮ ಮಗಳನ್ನು ಪ್ರಧಾನಮಂತ್ರಿ ಮಾಡತಕ್ಕಂಥ ವಿಚಾರ ಅಥವಾ ಶ್ರೀಮತಿ ಇಂಧಿರಾ ಗಾಂಧಿಯವರು ತಮ್ಮ ಮಗನನ್ನು ಪ್ರಧಾನಮಂತ್ರಿ ಮಾಡತಕ್ಕಂಥ ವಿಚಾರದಲ್ಲಿ ಅಭಿಮಾನ ಇತ್ಯಾದಿ ವಿಚಾರ ಹೇಳಿದ್ದಾರೆ. ಈ ಮಾತನ್ನು ಪದೇ ಪದೇ ನಾವು ಚರ್ಚೆ ಮಾಡಿದ್ದೇವೆ. ಉತ್ತರವೂ ಕೂಡ ಕೊಟ್ಟಿದ್ದೇವೆ. ಪಕ್ಷದ ತೀರ್ಮಾನ ಆದಾಗ ಅದಕ್ಕೆ ಎಲ್ಲರೂ ಬದ್ಧರಾಗಿರಬೇಕು. ಮೊನ್ನೆ ನೀವು ರಾಜೀನಾಮೆ ಕೊಟ್ಟಮೇಲೆ ಪಕ್ಷದ ತೀರ್ಮಾನ ಅಂದರಲ್ಲ ಅದಕ್ಕಿಂತ ದೊಡ್ಡ ತೀರ್ಮಾನ. ಅದು. ಆ ಸಂದರ್ಭದಲ್ಲಿ ಪಾರ್ಲಿಮೆಂಟ್ ಸದಸ್ಯರು, ವರ್ಕಿಂಗ್ ಕಮಿಟಿ, ಇಡೀ ಪಕ್ಷವೇ ತೀರ್ಮಾನ ಮಾಡಿರತಕ್ಕ ವಿಚಾರ. ನೆಹರೂರವರ ಕಾಲ ಇರಬಹುದು ಅಥವಾ ಎಐಸಿಸಿ ಪ್ರೆಸಿಡೆಂಟ್ ಇತ್ಯಾದಿ ಇರಬಹುದು. ಏಕೆಂದರೆ, ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಮಾನ್ಯ ಸಭಾಧ್ಯಕ್ಷರೆ, ನೆಹರೂರವರು...

ಅಧ್ಯಕ್ಷರು.—ಸಾಕು ಅಷ್ಟಕ್ಕೆ. ಅವರು ಏನೋ ಒಂದು ಹೇಳಿದರು, ನೀವು ಹೇಳಿದಿರಿ, ಸಾಕು.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿದ್ದು ರಿಕಾರ್ಡ್‌ನಲ್ಲಿದೆ. ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಇಲ್ಲದೇಹೋದರೆ ಒನ್‌ಸೈಡ್ ಆಗುತ್ತದೆ.

ಅಧ್ಯಕ್ಷರು.—ಆಮೇಲೆ ಹೇಳಿ, ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್, ಬಂಗಾರಪ್ಪ.—ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾದಾಗ ನೆಹರೂರವರು ಜೀವಂತವಾಗಿ ಇದ್ದಿದ್ದರೆ ಅದನ್ನು ನಾನು ಒಪ್ಪುತ್ತಿದೆ. ನೆಹರೂರವರು ತೀರಿಕೊಂಡು ಹೋಗಿ ಅನಂತರ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಪ್ರಧಾನಮಂತ್ರಿಯಾದರು ಎನ್ನತಕ್ಕಂಥ ವಿಚಾರ ಅವರ ಗಮನದಲ್ಲಿ ಇಲ್ಲದೇ ಇರತಕ್ಕಂಥಾದ್ದು ನೋಡಿ ನನಗೆ ಖೇದವಾಗಿದೆ.

೨-೩೦ ಪಿ. ಎಂ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ನೆಹರೂ ಅವರ ಕಾಲದಲ್ಲಾಗಲೀ, ಅನಂತರ ಬಂದ ಇಂದಿರಾ ಗಾಂಧಿಯವರ ಕಾಲದಲ್ಲಾಗಲೀ ಬಂಗಾರಪ್ಪನವರಿಗೂ ಕಾಂಗ್ರೆಸ್‌ನವರಿಗೂ ಅರ್ಥಾತ್ ಸಂಬಂಧವೇ ಇರಲಿಲ್ಲ. ಈಗ ದೊಡ್ಡದಾಗಿ ಕಾಂಗ್ರೆಸ್ ಸಂಸ್ಕೃತಿ ಬಗ್ಗೆ ಮೆಚ್ಚಿ ಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ —ನೀವೂ ಕೂಡ ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದೀರೆ ಹೊರತು ನೆಹರೂ, ಇಂದಿರಾ ಕಾಂಗ್ರೆಸ್‌ನಲ್ಲಿರಲಿಲ್ಲ ಬಿಡಿ. ಸೋಷಲಿಸ್ಟ್ ಪಾರ್ಟಿಯಲ್ಲಿದ್ದು ಅದನ್ನು ಛಿದ್ರ ಮಾಡಿ ಬಿಟ್ಟಿರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಶ್ರೀ ನೆಹರೂರವರಾದ ನಂತರ ಶ್ರೀಮತಿ ಇಂದಿರಾಗಾಂಧಿಯೇ ನೇರವಾಗಿ ಅಧಿಕಾರಕ್ಕೆ ಬರಲಿಲ್ಲ. ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನ ಮಂತ್ರಿಗಳಾಗಿದ್ದರು ಎಂಬುದನ್ನು ಅವರು ಮರೆತಿದ್ದಾರೆ. ಇನ್ನು ನಿಮ್ಮ ಪಕ್ಷದಲ್ಲಿ ವಂಶಪಾರಂಪರ್ಯವನ್ನು ರಕ್ಷಿಸಬೇಕೆಂದು ತೀರ್ಮಾನವಾಗಿದ್ದರೆ ಅದು ನಿಮ್ಮ ಪಕ್ಷಕ್ಕೆ ಬಿಟ್ಟ ವಿಚಾರ. ಈ ಕಾರಣವನ್ನು ಕೊಟ್ಟುಕೊಂಡು ಇವರ ಮಕ್ಕಳಿಗೆ ಉದ್ಯೋಗ ಕೊಡಬೇಕೆಂದು, ಇಂಡಸ್ಟ್ರಿಗೆ ಲೈಸೆನ್ಸ್ ಕೊಡಬೇಕೆಂದು ಹೇಳುತ್ತಾ ನನ್ನ ಆಸ್ತಿ ಬಗ್ಗೆ ಹೇಳಿದ್ದಾರೆ. ನನ್ನ ಆಸ್ತಿ ಎಷ್ಟು ಇತ್ತು ಎಂಬುದು ಅವರಿಗೆ ಗೊತ್ತು. ಹಾಗೆಯೇ ಅವರ ಸಾಲದ ವಿಚಾರವೂ ನನಗೆ ಗೊತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.—೧೯೬೭ನೇ ಇಸವಿಯಲ್ಲಿ ನಿಮ್ಮ ಎಲೆಕ್ಷನ್ ಖರ್ಚಿಗೆ ದುಡ್ಡನ್ನು ನಾನು ಕೊಟ್ಟಿದ್ದು ಜ್ಞಾಪಕದಲ್ಲಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ನನ್ನ ತಾಲ್ಲೂಕಿಗೆ ಬಂದು ಎಲೆಕ್ಷನ್ ಕ್ಯಾನ್‌ವಾಸ್‌ಗೆ ನನ್ನ ಕಾರನ್ನು ಇಸಿದುಕೊಂಡು ನೀವು ಕ್ಯಾನ್‌ವಾಸ್ ಮಾಡಿದ್ದು ನನಗೆ ಗೊತ್ತಿಲ್ಲವೇ ? ಹಿಂದೆ ಎಲ್ಲ ಬೀಡಿ ಸೇದು ಕೊಂಡು ಯಾರಾದರೂ ನೋಡುವಾಗ ಸಿಗರೇಟ್ ಸೇದುವವರು ನೀವು ಎಂದು ಜನ ಎಲ್ಲ ಮಾತನಾಡಿ ಕೊಳ್ಳುತ್ತಾರೆ, ಇದು ಗೊತ್ತೇ ?

ಶ್ರೀ ಜೆ. ಹೆಚ್. ಪಟೇಲ್.— ಈ ಸದನದಲ್ಲಿ ಯಾರ್‍ಯಾರದು ಎಷ್ಟೆಷ್ಟಿತ್ತು ಎಂಬ ಬಗ್ಗೆ ಚರ್ಚಿಸುವುದು ಬೇಡ. ಪಬ್ಲಿಕ್ ಮೀಟಿಂಗ್ ಮಾಡೋಣ, ಬರುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಪಬ್ಲಿಕ್ ಮೀಟಿಂಗನ್ನು ನೀವು ಮಾಡಿ, ಆಮೇಲೆ ನಾವೂ ಮಾಡುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಏನೇ ಆದರೂ ಕೆಲಸಕ್ಕೆ ಬಾರದ ಮಾತು ಆಡುವುದೇ ಇವರ ಕೆಲಸ.

(ಗೊಂದಲ)

ಅಧ್ಯಕ್ಷರು.—ನೀವು ಹೀಗೆ ಮಾತನಾಡಿದರೆ ಅದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೋಡಿ ನಾನು ಪದೇ ಪದೇ ಹೇಳಿದ್ದೇನೆ. ಅವರು ಹೇಳುವುದಕ್ಕೆಲ್ಲ ಅವಕಾಶ ಕೊಟ್ಟು ನಾವು ಉತ್ತರ ಹೇಳುವಾಗ ಮಾತ್ರ ರೆಕಾರ್ಡ್‌ಗೆ ಹೋಗುವುದಿಲ್ಲ ಎಂದು ಹೇಳುವುದು

ಸರಿಯೋ ಅಲ್ಲ. ನೀವು ನಮಗೆ ಸಹಕಾರ ಕೊಟ್ಟರೆ ನಾವೂ ನಿಮಗೆ ಸಹಕಾರ ಕೊಡುತ್ತೇವೆ. ಅವರು ಹೇಳಿದ್ದರಿಂದ ನಾನೂ ಹೇಳಬೇಕಾಗಿದೆ. ಪಟೇಲರೇ ಇದರಿಂದ ನಿಮ್ಮ ಮಂತ್ರಿ ಮಂಡಲದ ಅಧಿಕಾರ ದುರುಪಯೋಗ ಸ್ಪಷ್ಟವಾಗಿ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮುಖ್ಯಮಂತ್ರಿಗಳು ಚೆನ್ನಾಗಿ ಉತ್ತರ ಕೊಡುತ್ತಾರೆ. ಈ ಮಧ್ಯೆ ಅನಾವಶ್ಯಕವಾಗಿ ಸಲ್ಲದ ವಿಚಾರಗಳನ್ನು ಹೇಳಿ ಎರಡೂ ಕಡೆಯ ಸದಸ್ಯರು ಗದ್ದಲ ಮಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಆ ಕಡೆಯವರು ಗಲಾಟೆ ಮಾಡಿದರೆ ಅದೆಲ್ಲ ರೆಕಾರ್ಡ್‌ಗೆ ಹೋಗಬೇಕು. ಆದರೆ ನಾನು ವಿರೋಧ ಪಕ್ಷದ ನಾಯಕನಾಗಿ ಹೇಳುವುದೂ ರೆಕಾರ್ಡ್‌ಗೆ ಹೋಗುವುದು ಬೇಡ ಎಂದರೆ ಹೇಗೆ ಅಧ್ಯಕ್ಷರೇ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೊಂದು ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅನೇಕ ವಸ್ತುಗಳ ಮೇಲೆ ನೀವು ಸೇಲ್ಸ್ ಟ್ಯಾಕ್ಸನ್ನು ಎಕ್ಸೆಂಪ್ಟ್ ಮಾಡಿ ನೋಟಿಫಿಕೇಷನ್ ಹೊರಡಿಸಿದ್ದೀರಿ, ಇದರ ಹಿನ್ನೆಲೆ ಏನು ಎಂದರು ಯಾರಿಗೋ ಫೇವರ್ ಮಾಡುವುದಕ್ಕೆ ನೀವು ಹೀಗೆ ಮಾಡಿದ್ದೀರಿ ಎಂದರು.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರಕ್ಕೆ ರೆವಿನ್ಯೂ ಅದರಿಂದ ಕಡಿಮೆಯಾಗುತ್ತದೆ ಎಂದು ನಾನು ಹೇಳಿದ್ದು.

ಶ್ರೀ ರಾಮಕೃಷ್ಣ ಹೆಗಡೆ.—ಅವರ ತಿಳಿವಳಿಕೆಗಾಗಿ ಇಷ್ಟು ಹೇಳುತ್ತೇನೆ. ನಾವು ನೋಟಿಫಿಕೇಷನ್ ಹೊರಡಿಸಿರುವುದು, ಬಜೆಟ್‌ನಲ್ಲಿ ಏನು ಅನೌನ್ಸ್ ಮಾಡಿದ್ದೇವೋ ಅದಕ್ಕೆ ಅನುಗುಣವಾಗಿದೆಯೇ ಹೊರತು ತದ್ವಿರುದ್ಧವಾಗಿ ಯಾವುದರ ಮೇಲೂ ಹೊರಡಿಸಿಲ್ಲ. ಈ ಸಲದ ಬಜೆಟನ್ನು ಈ ಮನೆ ಮುಂದೆ ಇಟ್ಟ ಮೇಲೂ ಕೂಡ ಕೆಲವು ವಸ್ತುಗಳ ಮೇಲೆ ನಾವು ಈಗ ಹಾಕುತ್ತಿದ್ದಂಥ ಸೇಲ್ಸ್ ಟ್ಯಾಕ್ಸನ್ನು ಕಡಿಮೆ ಮಾಡಬೇಕೆಂದು ಮನವಿಯು ಬಂದಿರುವುದರಿಂದ, ಉದಾಹರಣೆಗೆ ಪ್ಲಾಸ್ಟಿಕ್, ಇದು ಸಣ್ಣಪುಟ್ಟ ಕೊಡ ತಂಬಿಗೆಗಳಿಗೆ ಬಳಸುವ ಕಚ್ಚಾ ಸಾಮಗ್ರಿಗಳು ಎಂದರೆ ಸ್ಕ್ರಾಪ್. ಆ ಸ್ಕ್ರಾಪ್ ಮೇಲೂ ಸೇಲ್ಸ್ ಟ್ಯಾಕ್ಸ್ ಹಾಕಿದರೂ ತೊಂದರೆಯಾಗುತ್ತದೆ, ಏಕೆಂದರೆ ಅವನ್ನು ಬಡಬಗ್ಗರು ಬಳಸುವುದು ಎಂದು ಮನವಿ ಬಂತು. ಆದ್ದರಿಂದ ಅದನ್ನು ನಾನು ಮನ್ನಾ ಮಾಡಲಿಕ್ಕೆ ಬಯಸುತ್ತೇನೆ. ಆ ಪ್ರಕಾರ ಕಾಯಿದೆಗೆ ತಿದ್ದುಪಡಿಯಾಗುತ್ತದೆ. ಹೊಸದಾಗಿ ಬಿಲ್ ಮಧ್ಯಾಹ್ನ ಬರುತ್ತದೆ, ಅಪ್ರೋಪ್ರಿಯೇಷನ್ ಬಿಲ್ ಜೊತೆಗೆಯೇ ಇನ್ನೂ ಐದು ಬಿಲ್ಲನ್ನು ತಮ್ಮ ಮುಂದೆ ತರುತ್ತೇವೆ.

ಇನ್ನೊಂದು ವಿಚಾರ ಪ್ರಸ್ತಾಪಿಸಿದರು. ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್ ಟ್ಯಾಕ್ಸ್‌ನಲ್ಲಿಯೂ ಕೂಡ ಬಹಳ ಅರಿಯರ್ಸ್ ಇದೆ ಎಂದು ಹೇಳುತ್ತಾರೆ. ಕಾರಣ ಏನು ಎಂದು ಯೋಚನೆ ಮಾಡಬೇಕು. ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಸುಮಾರು ೫೦ ಕೋಟಿ ರೂಪಾಯಿಗಳು ಕೇವಲ ಕಾಫಿ ಬೋರ್ಡ್ ಒಂದರಿಂದಲೇ ಬರಬೇಕಾಗಿದೆ. ಮೊದಲು ಇದರ ವಿವಾದ ಇತ್ತು ಆಮೇಲೆ ಹೈಕೋರ್ಟ್ ತೀರ್ಮಾನ ಕೊಟ್ಟಿದೆ. ಆ ತೀರ್ಮಾನದ ಮೇಲೆ ಅವರು ಅಪೀಲು ಹೋಗಿದ್ದಾರೆ. ಅಲ್ಲಿ ಸ್ಟೇ ಆರ್ಡರ್ ಕೊಟ್ಟಿಲ್ಲ ಒಂದೇ ಸಲ ಸ್ಟೇ ಆರ್ಡರ್ ಕೊಡುವುದಕ್ಕೆ ಆಗುವುದಿಲ್ಲವೆಂದೂ ಹೇಳಿದ್ದಾರೆ. ಅರಿಯರ್ಸ್ ಹೆಚ್ಚಾಗಿರುವುದು ಕೋರ್ಟಿನಲ್ಲಿರುವುದರಿಂದ ಹೊರತು ಬೇರೆ ಕಾರಣದಿಂದ ಅಲ್ಲ, ವಸೂಲು ಮಾಡಲು ಸಧ್ಯಕ್ಕೆ ಆಗಿಲ್ಲ. ಇನ್ನೂ ಕೆಲವು ಕಿಸ್ತಿನಲ್ಲಿವೆ. ಅನೇಕ ಪ್ರಕರಣಗಳಲ್ಲಿ ಮೋಸದ ವ್ಯವಹಾರ ಕೂಡ ಆಗುತ್ತದೆ. ಇದಕ್ಕೆ ಒಂದು ಕೇಸ್ ತಮಗೆ ಹೇಳುತ್ತೇನೆ. ಒಬ್ಬ ಎಕ್ಸೈಜ್ ಕಂಟ್ರಾಕ್ಟರ್ ೧೯೮೫ನೇ ಇಸವಿಯಲ್ಲಿ ಮೂರು ತಿಂಗಳ ಕಿಸ್ತು ಕಟ್ಟಲಿಲ್ಲ. ಅದು ೨೮ ಲಕ್ಷ ೪೦ ಸಾವಿರ, arrack shop rentals, ಮೂರೂ ಅಂಗಡಿಗಳದ್ದು. ಡೆಪ್ಯುಟಿ ಕಮಿಷನರ್ ಜುಲೈ ೨ನೇ ತಾರೀಖಿಗೆ ೧೯೮೫ ನೇ ಇಸವಿ. ಚನ್ನರಾಯ ಪಟ್ಟಣದ ತಹಸೀಲ್ದಾರರಿಗೆ ಪತ್ರ ಬರೆದು ಮೂರು ಕಿಸ್ತುಗಳನ್ನು ಕಟ್ಟಿಲ್ಲ, ಆದ್ದರಿಂದ ತಕ್ಷಣ ನೀವು ಕ್ರಮ ತೆಗೆದುಕೊಳ್ಳಬೇಕು ಮತ್ತು ಆಸ್ತಿಯನ್ನು ಜಫ್ತಿ ಮಾಡಬೇಕೆಂದರು. ಆಗ ಆ ಆಸ್ತಿಯು ಒಂದು ಅವಿಭಕ್ತ ಕುಟುಂಬಕ್ಕೆ ಸೇರಿತ್ತು.

೫೦ ಕುಟುಂಬದ ಪರವಾಗಿ ೯ನೇ ತಾರೀಖು ಸಿ.ವಿ. ಗಂರುಪೇಗೌಡ ಎನ್ನುವವರು ತಹಶೀಲ್ದಾರರಿಗೆ ಒಂದು ಪತ್ರವನ್ನು ಬರೆದರು. ಅದು ಏನೆಂದರೆ, ''ನಾವು ೫೦ ಜನರ ಒಂದು ಕುಟುಂಬ, ಅದರಲ್ಲಿ ಒಬ್ಬ ನಮ್ಮ ಬಂಧು. ಅವನು ಸಿ.ವಿ. ರಂಗೇಗೌಡ ಎನ್ನುವವನು. ನಮ್ಮ ೧ ಲಕ್ಷ ರೂಪಾಯಿಯನ್ನು ತೆಗೆದುಕೊಂಡು ನಮ್ಮ ಕುಟುಂಬದಿಂದ ಪ್ರತ್ಯೇಕವಾಗಿದ್ದಾನೆ. ಆದುದರಿಂದ ಅವನ ಹೆಸರನ್ನು ಆಸ್ತಿಯ ರಿಜಿಸ್ಟರ್‌ನಿಂದ ತೆಗೆದು ಕಡಿಮೆ ಮಾಡಬೇಕೆಂದು ಪತ್ರ ಬರೆದರು'' ತಹಶೀಲ್ದಾರರು ಅದೇ ದಿವಸ ಒಂದು ಆರ್ಡರ್‌ನ್ನೂ ಮಾಡಿ ಶ್ರೀ ರಂಗೇಗೌಡ ಅವರ ಹೆಸರನ್ನು ಕಡಿಮೆ ಮಾಡಬೇಕು ಎನ್ನುವ ಆರ್ಡರ್ ಮಾಡಿದರು. ಆಮೇಲೆ ಅದನ್ನು ಡೆಪ್ಯೂಟಿ ಕಮಿಷನರ್‌ಗೆ ೧೬ ನೇ ತಾರೀಖು ಕಳುಹಿಸಿದರು. ಅವರು ಅದಕ್ಕೆ ತದ್‌ವಿರುದ್ಧವಾದ ಮತ್ತೊಂದು ವರದಿಯನ್ನು ಕೊಟ್ಟಿದ್ದಾರೆ. ಅಂದರೆ ಮೋಸ ಯಾವ ರೀತಿ ನಡೆಯುತ್ತಿದೆ ಎನ್ನುವುದರ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟೆ. ಇನ್ನು ಅನೇಕ ಉದಾಹರಣೆಗಳು ಇರಬಹುದು. ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ಹೇಳಿದ್ದು ಮೋಸದ ಉದಾಹರಣೆ, ನೀವು ಮಾಡಿದ್ದು ಅದೇ ಉದಾಹರಣೆ,

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ಮಾನ್ಯ ಶ್ರೀನಿವಾಸ್‌ರವರು ನೆನಪು ಮಾಡಿ ಕೊಟ್ಟರು. ಕ್ಯಾರೆಕ್ಟರ್ ಅಸಾಸಿನೇಷನ್ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದ ಕೊನೆಯಲ್ಲಿ – ''ನೀವು ಮನೆ ಕಟ್ಟಿಸಿದ್ದೀರಿಯೆಂದು.'' ಹೇಳಿದರು ಅದು ನಿಜ ಮನೆಯನ್ನು ನಾನು ಕಟ್ಟಿಸಿದ್ದೇನೆ.

ಶ್ರೀ ಬಿ, ಬಸವಲಿಂಗಪ್ಪ.—ನೀವು ಕೇಳಿದಿರಿ ಅಂತಾ ಅವರು ಹೇಳಿದರು.

ಶ್ರೀ ರಾಮಕೃಷ್ಣ ಹೆಗಡೆ.—ಯಾರೋ ಹೇಳಿದ್ದಾರೆ ಎನ್ನತಕ್ಕ ಆಧಾರದ ಮೇಲೆ ಇಲ್ಲಿ ಕುಳಿತು ಮಾತನಾಡುವುದಕ್ಕೆ ಇದು ಏನು ಸಂತೆಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಯಾರೋ ಹೇಳುತ್ತಾರೆಂದು ನೀವು ಕೂಡ ಹೇಳಿಕೆಯನ್ನು ಓದಿದರಲ್ಲ. ಅದೇ ಕೆಲಸ ಇದು ಕೂಡ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮನೆಯನ್ನು ಕಟ್ಟಿಸಿದ್ದು ೧೯೬೦ ರಲ್ಲಿ. ನಿಮಗೆಲ್ಲಾ ಅದು ಗೊತ್ತಿರತಕ್ಕ ವಿಚಾರ ಆ ವಿಚಾರಕ್ಕೆ ಹೆಚ್ಚು ಹೋಗುವುದಿಲ್ಲ, ಅದರ ಬಗ್ಗೆ ಒಂದು ಸಮಿತಿಯನ್ನು ಬೇಕಾದರೆ ಮಾಡಿ. ನನಗೆ ಎಲ್ಲಿಂದ ಹಣ ಬಂತು ? ಎಷ್ಟು ಬಂತು ಎಂಬುದರ ಬಗ್ಗೆ ? ವಿಚಾರಣೆ ಮಾಡಿಸಿ ಅದು ಬೇರೆ ವಿಚಾರ. ಆದರೆ ನನಗೆ ಆಶ್ಚರ್ಯ ಏನು ಗೊತ್ತೇ ? ಇವತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು ಅವತ್ತು ಸಹಾ ಈ ಮನೆಯ ಸದಸ್ಯರಾಗಿದ್ದರು. ಆವಾಗ ನಮ್ಮ ಪಕ್ಷದ ಸದಸ್ಯರಾಗಿರಲಿಲ್ಲ. ಅದೇ ಸಮಯದಲ್ಲಿ ಅವರು ಹಾಗೆ ಹೇಳಲಿಲ್ಲ.

ಶ್ರೀ ಎಸ್, ಬಂಗಾರಪ್ಪ.—ಯಾರಿಗೆ ಗೊತ್ತು ಹೀಗೆ ಮಾಡುತ್ತೀರಿ ಅಂತ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಸುಮಾರು ೨೦ ವರ್ಷವಾದ ಮೇಲೆ........

ಶ್ರೀ ಎಸ್. ಬಂಗಾರಪ್ಪ.—ಯಾರಿಗೆ ಗೊತ್ತು ? ಹೇಗೆ ಗೊತ್ತಾಗುತ್ತದೆ?

ಶ್ರೀ ರಾಮಕೃಷ್ಣ ಹೆಗಡೆ.—ಏಕೆ ಗೊತ್ತಾಗುವುದಿಲ್ಲ ? ನೀವೇ ಪೇಪರ್‌ನಲ್ಲಿ ಬಂದಿತ್ತೆಂದು ಹೇಳಿದಿರಿ.

ಶ್ರೀ ಎಸ್. ಬಂಗಾರಪ್ಪ.—ಒಂದು ಸಾರಿ ಮನೆಯನ್ನು ಕಟ್ಟಿದ ತಕ್ಷಣ ಅದು ದೇಶಕ್ಕೆಲ್ಲಾ ಗೊತ್ತಾಗಬೇಕಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಪೇಪರ್‌ನಲ್ಲಿ ಬಂದಿದೆಯೆಂದು ಹೇಳುತ್ತೀರಲ್ಲ. ಹಾಗಾದರೆ ಯಾವ ಪೇಪರ್ ಅದು ? ಯಾವ ಪೇಪರ್‌ನಲ್ಲಿ ಒಂದು ಶಬ್ದ ಅದರ ಬಗ್ಗೆ ಬಂದಿತ್ತು ಆ ಕಾಲದಲ್ಲಿ ?

ಶ್ರೀ ಎಸ್. ಬಂಗಾರಪ್ಪ.—ಆ ಕಾಲದಲ್ಲಿ ಬೇಕಾದಷ್ಟು ಬಂದಿತ್ತು, ಬೇಕಾದರೆ ತೋರಿಸೋಣ.

ಶ್ರೀ ರಾಮಕೃಷ್ಣ ಹೆಗಡೆ.—ಪೇಪರ್‌ನಲ್ಲಿ ಬಂದಿದ್ದರೆ ಆ ಪೇಪರ್ ಇಲ್ಲಿದೆ. ಇವತ್ತು ಯಾರೋ ಕಳುಹಿಸಿಕೊಟ್ಟರು. ಪೇಪರ್‌ನಲ್ಲಿ ಬಂದಿದೆ ಎಂದರೆ ಅದನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. ಮಾನ್ಯ

ಬಂಗಾರಪ್ಪನವರ ಪರಿಚಯವನ್ನು ಶ್ರೀ ಕೆ. ಎಚ್. ಶ್ರೀನಿವಾಸರವರು ಮಾಡಿದ ಭಾಷಣದ ವರದಿಯಿಂದಲೇ ಓದಿ ಹೇಳುತ್ತೇನೆ ''ಈ ಮನೆಯು ಭೂ ಸುಧಾರಣಾ ಕಾನೂನಿನ ಬಗ್ಗೆ ಮಾನ್ಯ ಬಂಗಾರಪ್ಪನವರು ಭಾಷಣ ಮಾಡಿದರು.'' ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಏನು ಲೋಪದೋಷಗಳಿವೆ ಎನ್ನುವುದರ ಬಗ್ಗೆ ಹೇಳಿದರು. ಮಾನ್ಯ ಅಧ್ಯಕ್ಷರೇ, ನಿಜ. ಲ್ಯಾಂಡ್‌ಟ್ರಿಬ್ಯುನಲ್‌ಗಳಲ್ಲಿ ಲೋಪದೋಷಗಳು ಆಗಿದ್ದಾವೆ. ಸರ್ಕಾರ ಅದರ ಬಗ್ಗೆ ಸತತವಾಗಿ ಕಣ್ಣು ಇಡಬೇಕಾದುದು ಅಗತ್ಯವಿದೆ. ಎಲ್ಲೆಲ್ಲಿ ಲೋಪದೋಷಗಳು ಇವೆಯೋ ಅದರ ಬಗ್ಗೆ ವರದಿ ತರಿಸಿಕೊಂಡು ಬದಲಾವಣೆ ಮಾಡಬೇಕು. ಹಿಂದಿನ ಸರ್ಕಾರವೂ ಅದೇ ಕೆಲಸ ಮಾಡಿತ್ತು. ಈ ಸರ್ಕಾರವೂ ಅದನ್ನೆ ಮಾಡಬೇಕೇ ಹೊರತು ಬೇರೆ ಗತ್ಯಂತರವಿಲ್ಲ. ಹಿಂದೆ ಇದ್ದಂಥ ಅವರಿಗೆ ಸಂಬಂಧಪಟ್ಟಂಥ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಅವರ ಜನಗಳನ್ನೇ ಅಲ್ಲಿ ಇಟ್ಟುಕೊಂಡು ಏನು ಕೆಲಸಗಳು ನಡೆದಿವೆ ಅದು ಮಾತ್ರ ಮೂರೇ ಮೂರು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ನಾನು ಹೇಳತಕ್ಕದ್ದು ಆರೋಪದ ದೃಷ್ಟಿಯಿಂದಲ್ಲ, ಪ್ರಾಮಾಣಿಕವಾಗಿ ನಮ್ಮನ್ನು ನಾವು ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು ಎನ್ನತಕ್ಕ ಕಳಕಳಿಯ ದೃಷ್ಟಿಯಿಂದ ನಾನು ಹೇಳಲಿಕ್ಕೆ ಬಯಸುತ್ತೇನೆ. ಮೊದಲನೆಯದು ಸೊರಬ ತಾಲ್ಲೂಕಿನ ಲಕ್ಕುವಳ್ಳಿ ಗ್ರಾಮದಲ್ಲಿ, ಸರ್ವೆ ನಂಬರ್ ೧೧೪-೧೧೫ರಲ್ಲಿ ಇದಕ್ಕೆ ಬಸಪ್ಪ ಸನ್ ಆಫ್ ಮೂಗೂರು ಪರಸಪ್ಪ ಎನ್ನತಕ್ಕವರು ಫಾರಂ ನಂಬರ್ ೭ನ್ನು ಗೇಣೀದಾರರ ಪರವಾಗಿ ಹಾಕಿದರು''......

Sri S. BANGARAPPA.---I am on a point of order,

ಅಧ್ಯಕ್ಷರು.--ಪೂರ್ತಿ ಓದಲಿ ಇರಿ.

Sri S. BANGARPPA.---I am on a point of order under the rules. ಈ ವಿಷಯದಲ್ಲಿ ಮೊನ್ನೆ ನಾನೇ ಕೂಡ ಹೇಳಿದೆ. ನನ್ನ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ವಿಷಯ ಹೈಕೋರ್ಟಿನಲ್ಲಿರುವುದರಿಂದ ಇದು ಸಬ್‌ಜ್ಯೂಡಿಸ್ ಆಗುತ್ತದೆಯೆಂದು ನಾವು ಚರ್ಚೆ ಮಾಡಬಾರದೆಂದು ಹೇಳಿದ್ದೇವೆ. ನನಗೇನೂ ಅಭ್ಯಂತರ ಇಲ್ಲ. ತಾವು ಬೇಕಾದರೆ ರೂಲಿಂಗ್ ಕೊಟ್ಟರೆ ಇನ್ನೂ ಅನೇಕ ವಿಷಯಗಳು ಇವೆ ಬೇಕಾದರೆ ಚರ್ಚೆ ಮಾಡೋಣ. ಹೈಕೋರ್ಟಿನಲ್ಲಿ ಈ ವಿಚಾರ ಇರುವುದರಿಂದ ಆ ವಿಚಾರ ಎತ್ತುವುದಿಲ್ಲ ಎನ್ನತಕ್ಕ ಹೇಳಿಕೆಯನ್ನು ಕೊಟ್ಟು ನಿಲ್ಲಿಸಿದ್ದೇವೆ. ಸಬ್‌ಜ್ಯೂಡಿಸ್ ಆಗುತ್ತದೆಂದು ಏನನ್ನು ಹೇಳುವುದಕ್ಕೆ ಹೋಗಲಿಲ್ಲ, ಅಷ್ಟು ಹೇಳಿದರೆ ನೀವೇನಾದರು ಅವರಿಗೆ ಅವಕಾಶ ಕೊಟ್ಟರೆ ಬೇರೆ ಕೋರ್ಟಿನಲ್ಲಿ ಅನೇಕ ವಿಚಾರಗಳು ಇವೆ. ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ತಾವು ರೂಲಿಂಗ್ ಕೊಡಬೇಕು. ಅವರು ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಈ ವಿಚಾರ ಕೋರ್ಟಿನಲ್ಲಿದೆ ಎನ್ನತಕ್ಕ ಮಾತನ್ನು ಹೇಳಿದ್ದೇವೆ. ತಾವು ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧಪಕ್ಷದ ನಾಯಕರು ಕ್ರಿಯಾಲೋಪ ಎತ್ತಿದ್ದಾರೆ, ಯಾವುದೇ ವಿಚಾರ ಹೈಕೋರ್ಟಿನಲ್ಲಿದ್ದರೆ ಅದು ಸಬ್ ಜ್ಯೂಡಿಸ್ ಆಗುತ್ತದೆಂದು ಹೇಳಿದ್ದಾರೆ ಆದರೆ ಮುಖ್ಯ ಮಂತ್ರಿಗಳು ಈ ಮನೆಯ ನಡವಳಿಕೆಗಳ ಮೇಲೆ ಮಾತಾನಾಡಿದ್ದಾರೆ. ಇದು ಅಭಿಪ್ರಾಯವಲ್ಲ ಈ ಮನೆಯ ಹಿಂದಿನ ನಡವಳಿಕೆಗಳನ್ನು ಕೋಟ್ ಮಾಡುತ್ತಾ ಇದ್ದಾರೆ. ಇದರಲ್ಲಿ ಕ್ರಿಯಾಲೋಪ ಎನ್ನುವ ಪ್ರಶ್ನೆಯೇ ಇರುವುದಿಲ್ಲ. ಸಬ್ ಜ್ಯೂಡಿಸ್ ಪ್ರಶ್ನೆ ಏನು ಬಂತು ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸಾರಾಯಿ ಬಾಟ್ಲಿಂಗ್ ಕಂಟ್ರಾಕ್ಟ ಕೂಡ ಸುಪ್ರೀಮ್ ಕೋರ್ಟಿನಲ್ಲಿದೆ. ಆ ವಿಚಾರ ಕೂಡ ಚರ್ಚೆಯಾಗಿದೆ ಮತ್ತು ನಡವಳಿಕೆಯಲ್ಲಿದೆ. ಅದರ ಬಗ್ಗೆ ಕೂಡ ಚರ್ಚೆ ಮಾಡೋಣ ತಾವು ಅವಕಾಶ ಕೊಟ್ಟರೆ. ಬೇರೆ ಬೇರೆ ಕೋರ್ಟಿನಲ್ಲಿ ಇರುವುದನ್ನೆಲ್ಲಾ ಕೂಡ ತೆಗೆದುಕೊಳ್ಳೋಣ,

ಅಧ್ಯಕ್ಷರು. ನಿಮಗೆ ರೂಲಿಂಗ್ ಕೊಡುತ್ತೇನೆ ದಯಮಾಡಿ ಕುಳಿತುಕೊಳ್ಳಿ.

SRI K. H. SRINIVAS.--It is not a point of order on a point of order. I want to raise a separate point of order. ಅವರಿಗೆ ರೂಲಿಂಗ್ ಕೊಟ್ಟ ಮೇಲೆ ನಾನು ಹೇಳುತ್ತೇನೆ. ನೀವು ತಕ್ಷಣ ಅವರಿಗೆ ರೂಲಿಂಗ್ ಕೊಟ್ಟರೆ ನಾನು ಕುಳಿತುಕೊಳ್ಳುತ್ತೇನೆ, ಇಲ್ಲದಿದ್ದರೆ ನಾನು ಒಂದು ಪ್ರತ್ಯೇಕವಾದ ಕ್ರಿಯಾಲೋಪ ಕೇಳಬೇಕಾಗುತ್ತದೆ.

ಅಧ್ಯಕ್ಷರು.—ಇವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಅವರು ಹೇಳುತ್ತಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಎಂ. ರಘುಪತಿ.—ನಡವಳಿಕೆಯಲ್ಲಿ ಏನು ಬಂದಿದೆ ಅಷ್ಟು ವಿಷಯವನ್ನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಯಾವ ಆಕ್ಷೇಪಣೆಯೂ ಇಲ್ಲ. He cannot raise a point of order when there is already a point of order.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಚರ್ಚೆ ಮಾಡುವುದು ಬೇರೆ, ಕೊಟೇಷನ್ ಕೊಡುವುದು ಬೇರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉದಾಹರಣೆಯನ್ನು ನಾವು ಕೊಡುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಕೊಡಿ, ಯಾರು ಬೇಡವೆಂದು ಹೇಳಿದರು. ಈಗ ಯಾವ ಪೇಪರ್‌ನಲ್ಲಿ ವಿಚಾರ ಬಂದಿದೆ ಅದನ್ನೇನಾದರೂ ಉಲ್ಲೇಖ ಮಾಡಿದೇನೇ ? ಇಲ್ಲ. ನಾನೇನಾದರೂ ಪೇಪರ್‌ನ್ನು ಓದಿ ಹೇಳಿದೇನೇ ? ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನನಗೆ ರೂಲಿಂಗ್ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ ನನಗೆ ಇದೇ ವಿಚಾರವನ್ನು ಎತ್ತುತ್ತಾರೆಂದು ಗೊತ್ತು. ಸಬ್‌ಜ್ಯೂಡಿಸ್ ಆಗುತ್ತದೆಂದು ಗೊತ್ತು. ಪೇಪರ್‌ನಲ್ಲೂ ಅದೇ ವಿಚಾರ ಬಂದಿದೆ ಅಂತಾ ಗೊತ್ತು. ಆದ್ದರಿಂದ ಇದನ್ನು ಬಿಟ್ಟುಬಿಟ್ಟೆ. ಈ ಮನೆಯ ನಡವಳಿಕೆಗಳನ್ನು ಇಲ್ಲಿ ಓದಿ ಹೇಳುವುದು ತಪ್ಪಾಗುವುದಿಲ್ಲ. ಆದರೂ...ಅದನ್ನು ನಾನು ಓದುವುದಕ್ಕೆ ಬಯಸುವುದಿಲ್ಲ, ಅದನ್ನು ಅಲ್ಲಿಗೇ ಬಿಡುತ್ತೇನೆ.

(ಗೊಂದಲ)

ಇದೇ ಮನೆಯ ನಡವಳಿಕೆಗಳನ್ನು ರೆಕಾರ್ಡೆಡ್ ಇಲ್ಲಿ ಓದಿ ಹೇಳುವುದು ಅದು ಎಂದೂ ತಪ್ಪಾಗುವುದಿಲ್ಲ. ಆದರೂ ಅದನ್ನು ಇಲ್ಲಿ ಓದಲಿಕ್ಕೆ ಬಯಸುವುದಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ವಿಧಿಬಿಂದುವನ್ನು ಎತ್ತಿದ್ದೇನೆ.

ಅಧ್ಯಕ್ಷರು.—ಶ್ರೀನಿವಾಸ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ಹೇಗೆ ಆಗುತ್ತದೆ ಮಾನ್ಯ ಅಧ್ಯಕ್ಷರೇ ?

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಧಿಬಿಂದುವನ್ನು ಎತ್ತಿದ್ದಾರೆ, ಅದರ ಮೇಲೆ ರೂಲಿಂಗ್ ಕೊಡುವುದು ಇದ್ದರೆ ಆ ವಿಷಯದ ಮೇಲೆ ಮಾತನಾಡುವುದು ಇದೆ. ಏಕೆಂದರೆ ಇದು ಸದನಕ್ಕೆ ಸಂಬಂಧಪಟ್ಟ ವಿಚಾರ. ಏಕೆಂದು ಹೇಳಿದರೆ... ..

ಅಧ್ಯಕ್ಷರು.—ತಾವು ಯಾವುದರ ಬಗ್ಗೆ ಮಾತನಾಡುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವುದು ವಿಧಿಬಿಂದುವನ್ನು ವಿರೋಧ ಪಕ್ಷದ ನಾಯಕರು ಎತ್ತಿದ್ದಾರೆ, ಆ ವಿಚಾರದಲ್ಲಿ ಏನು ಓದುತ್ತಿದ್ದಾರೆ. ಆ ವಿಧಿ ಬಿಂದುವಿನ ವಿಚಾರದ ಸಂಗತಿ ಕರ್ನಾಟಕ ಹೈ ಕೋರ್ಟಿನಲ್ಲಿದೆ. ಅದು ಸಬ್ ಜ್ಯುಡೀಸ್ ಏಕೆಂದರೆ ಇಲ್ಲಿ ಚರ್ಚೆಗೆ ವಿಷಯ ಕಾಣಿಸಲಿಲ್ಲ. ಈಗ ರೂಲ್ ೩೧೧ ಇದೆ, ನಿಯಮ ೩೧೧ ರಲ್ಲಿ ಮಾತನಾಡಬೇಕಾದರೆ ಪಾಲಿಸಬೇಕಾದಂಥ ನಿಯಮಗಳಲ್ಲಿ ಒಂದನೆಯ ನಿಯಮದಲ್ಲೇ ಇದೆ. "ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕದ್ದಲ್ಲ."

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಏಕೆಂದು ಹೇಳಿದರೆ ಆ ರೀತಿ ಮಾತನಾಡುವುದಕ್ಕಾಗುವುದಿಲ್ಲ. ಈಗ ಸನ್ಮಾನ್ಯ ಸಭಾ ನಾಯಕರು ಅದನ್ನು ಓದುತ್ತಾರೆ. ಓದಿದ ಕೂಡಲೇ ಅದು ನಿಲ್ಲುವುದಿಲ್ಲ. ಅದರ ಬಗ್ಗೆ ಸ್ಪಷ್ಟೀಕರಣ ಕೇಳುತ್ತಾರೆ. ಅದರ ಬಗ್ಗೆ ಹೇಳಿಕೆ ಕೊಡುತ್ತಾರೆ. ಆದ್ದರಿಂದ ಇಂಥ ಒಂದು ಏನೋ ಅವಸರದಲ್ಲಿ ನಾವು ಇಂಥ ಹೊಸ ಸಂಪ್ರದಾಯಗಳನ್ನು ಹಾಕಿ ಸಬ್ ಜ್ಯುಡೀಸ್ ಬಗ್ಗೆ ಹೊಸ ವ್ಯಾಖ್ಯಾನವನ್ನು ಕೊಡುತ್ತಾ ಬಂದರೆ ಇವತ್ತು ಸಭಾನಾಯಕರಿಗೆ ಅನುಕೂಲವಾಗಿರಬಹುದು. ಆದರೆ ಮುಂದೆ ಇದರಿಂದ ಅನಾನುಕೂಲಗಳೂ ಆಗತಕ್ಕಂಥ ಪ್ರಸಂಗ ಜಾಸ್ತಿ ಬರಬಹುದು ಆದ್ದರಿಂದ ಈ ಸದನದಲ್ಲಿ ಪರಿಪಾಲಿಸತಕ್ಕಂಥ ನಿಯಮಗಳನ್ನು ತುಳಿದು ಮುಂದೆ ಹೋಗತಕ್ಕಂಥ ಪ್ರಸಂಗ ಬರಬಹುದು ಆದ್ದರಿಂದ ಆ ಬಗ್ಗೆ ಎಚ್ಚರಿಕೆಯನ್ನು ಸದನಕ್ಕೆ ಕೊಡುತ್ತಿದ್ದೇನೆ. ಆದ್ದರಿಂದ ದಯಮಾಡಿ ಈ ಪರಿಪಾಠಕ್ಕೆ ನಾವು ಕೈಹಾಕುವುದು ಬೇಡ.

SRI K. H. SRINIVAS.—I am on a point of order.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಈ ಸಬ್ ಜ್ಯುಡೀಸ್......

(ಗೊಂದಲ)

ಯಾವುದೇ ಒಂದು ವಿಚಾರ ನ್ಯಾಯಾಲಯದ ಮುಂದಿದೆ ಎನ್ನುವ ಬಗ್ಗೆ ಇದು ಸಬ್ ಜ್ಯುಡೀಸ್ ಆಗುತ್ತದೆ ಎಂದು ಹೇಳಬೇಕಾದರೆ ಮೊದಲನೆಯದಾಗಿ.....

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಸಬ್ ಜ್ಯುಡೀಸ್ ವಿಚಾರ ಹೇಳುವಾಗ ಮೊದಲು ತಾವು ನಿರ್ಣಯ ಕೊಡುವ ಬಗ್ಗೆ ಕೋರ್ಟಿನಲ್ಲಿದ್ದಂಥ ಮೊಕದ್ದಮೆಯ ವಿಚಾರದಲ್ಲಿ ನಿಮಗೆ ರಿಕಾರ್ಡ್ಸ್ ಬರ ಬೇಕಾಗಿರುತ್ತದೆ. ಅದರಲ್ಲಿ ಇದ್ದಂಥ ಇಸ್ಯೂಸ್, ಇಲ್ಲಿರತಕ್ಕಂಥದ್ದನ್ನು ಪರಿಶೀಲನೆ ಮಾಡ ಬೇಕಾಗುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಈ ಸಭೆಯಲ್ಲಿ ಅಸಭ್ಯ ರೀತಿಯಿಂದ ವರ್ತನೆಯನ್ನು ಮಾಡಿದರೂ ಕೂಡಾ ತಾವು ಗಮನಕ್ಕೆ ತೆಗೆದುಕೊಳ್ಳದೆ ಇದ್ದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಸಲಹೆ ಇಷ್ಟೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅಲ್ಲಿ ಯಾರು ಕೂಗಿದರು. ಅದರ ಬಗ್ಗೆ ತಮ್ಮ ಅಭಿಪ್ರಾಯ ಕೊಡಿ. ಅವರಿಗೆ ಸ್ವಲ್ಪ ತಿಳಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಹೆಚ್ಚಿನ ಚರ್ಚೆ ಬೇಕಾಗಿಲ್ಲ. ಇದು ಸಬ್ ಜ್ಯುಡೀಸ್ ಆಗು ತ್ತದೆಯೋ ಇಲ್ಲವೋ ಎಂದು ಹೇಳುವುದರ ಬಗ್ಗೆ ಚರ್ಚೆ ಬೇಡ ಏಕೆಂದರೆ ಯಾವುದಾದರೂ ಒಂದು ಕೋರ್ಟಿನಲ್ಲಿರತಕ್ಕಂಥದ್ದರ ಬಗ್ಗೆ ಪ್ರಸ್ತಾಪ ಮಾಡುವುದು ಅಥವಾ ಅದರ ಬಗ್ಗೆ ಚರ್ಚೆ ಮಾಡ ತಕ್ಕಂಥದ್ದು ಒಂದು ಆದರೆ ಎಷ್ಟೋ ವರ್ಷಗಳ ಹಿಂದೆ ಆಗಿರತಕ್ಕಂಥ ನಡವಳಿಕೆಗಳು ಈ ತನಕ (ರೆಕಾರ್ಡೆಡ್) ಇದೆ. ಅದನ್ನು ಇಲ್ಲಿ ಓದಿ ಹೇಳತಕ್ಕದ್ದು. ನಂತರ ಚರ್ಚೆ ಮಾಡಿದರೂ ಅದೂ ಆಗು ತ್ತದೆ. ಅದು ಏನೂ ಇಲ್ಲಾ. ಅದರೂ ಬೇಡಾ. ಏತಕ್ಕೆ ಬೇಡ ಎಂದರೆ.........

SRI. K. H. SRINIVAS.—I am on a point of order.

ಶ್ರೀ ರಾಮಕೃಷ್ಣ ಹೆಗಡೆ.—ಮುಗಿಸುತ್ತೇನೆ. ಸ್ವಲ್ಪ ಕೇಳಿ.

(ಗೊಂದಲ)

ಅಧ್ಯಕ್ಷರು.—ಏನು ಹೇಳುತ್ತಾರೋ ಕೇಳಿ, ಇನ್ನೂ ರೂಲಿಂಗ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಹಿಂದೆ ವೀರಪ್ಪ ಮೊಯ್ಲಿಯವರು ಈ ಸದನದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಪ್ರಸ್ತಾಪ ಇಷ್ಟೆ. ಅವರು ಏನಾದರೂ ಉದ್ದೇಶ್ಯವಾಗಿ ಹೇಳಿದರೋ ಅದರ ಬಗ್ಗೆ ತಾವು ಏನಾದರೂ ಹೇಳತಕ್ಕಂಥದ್ದು ವಾಸ್ತವಿಕ. ಸುಮ್ಮ ಸುಮ್ಮನೆ ಏತಕ್ಕೆ ಹೇಳುತ್ತೀರಿ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ. ನನಗೆ ಮಾನ್ಯ ಮುಖ್ಯ ಮಂತ್ರಿಗಳ ವರಸೆ ಗೊತ್ತಿದ್ದರಿಂದ ನನ್ನ ಹತ್ತಿರ ಅವರ ಹತ್ತಿರ ಇದ್ದಂತೆ ಪೋಲೀಸ್ ಇಲ್ಲದೇ ಇದ್ದರೂ ಕೂಡಾ ಇದನ್ನು ಓದಬಹುದು ಎಂದು ಆ ದಾಖಲೆಗಳನ್ನು ಇಟ್ಟುಕೊಂಡು ಬಂದಿದ್ದೇನೆ ಅದಕ್ಕಾಗಿ ನೀವು ನನಗೆ ಒಂದು ಪಾರಿತೋಷಕ ಕೊಡಬೇಕು. ಪೋಲೀಸ್ ಗಿಲೀಸ್ ಇಲ್ಲದೆ ನೀವು ಯಾವ ವರಸೆ ಹಾಕಬಹುದೆಂದು ತಿಳಿದುಕೊಂಡು ಪ್ರೊಸಿಡಿಂಗ್ಸನ್ನು ನಾನು ಇಟ್ಟುಕೊಂಡು ಬಂದಿದ್ದೇನೆ. ಅವರು ಓದುವುದರ ಬಗ್ಗೆ ಅಭ್ಯಂತರ ಇಲ್ಲ. ಯಾರದೂ ಅಭ್ಯಂತರ ಬೇಕಾಗಿಲ್ಲ. ಅವರ ಅಭಿಪ್ರಾಯ ಏನಾದರೂ ನಾನು ಆ ಆರೋಪಗಳನ್ನು ಆ ದಿವಸ ಇವರು ಮಾಡಿದ್ದೇ ಎಂದು ಈ ಸದನದ ಮೂಲಕ ಹೇಳುವುದು ಇದ್ದರೆ ಅದು ಖಂಡಿತವಾಗಿಯೂ ಇಲ್ಲ. ದಯವಿಟ್ಟು ಓದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನೀವೇ ಓದಿ........

ಶ್ರೀ ಕೆ. ಹೆಚ್. ಶ್ರೀನಿವಾಸ್.—ಓದುತ್ತೇನೆ. ನಾನು ಆ ಪೋರ್ಷನ್ ಏನೂ ಓದುವುದಿಲ್ಲ. ನಾನು ಏನು ಹೇಳಿದೆ ಎಂದರೆ...

ಶ್ರೀ ಎಂ. ರಘುಪತಿ.—ಅನುಕೂಲವಾಗಿರುವುದು ಮಾತ್ರ ಓದಬೇಡಿ. ಅನಾನುಕೂಲವಾಗಿರುವುದನ್ನು ಓದಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಏನು ಹೇಳುತ್ತಿದ್ದೇನೆಂದರೆ ಮುಖ್ಯ ಮಂತ್ರಿಗಳು ಯಾವುದಾದರೂ ತಮ್ಮ ವಾದಕ್ಕೆ ಪುಷ್ಟಿ ಕೊಡುವ ಪೋರ್ಷನ್ ಮಾತ್ರ ಓದಿ ಬೇರೆ ಬಿಟ್ಟರೆ ಸತ್ಯಕ್ಕೆ ಅಪಚಾರವಾಗುತ್ತದೆ, ನನಗೂ ಅಪಚಾರವಾಗುತ್ತದೆ, ಬಂಗಾರಪ್ಪನವರಿಗೂ ಅಪಚಾರವಾಗುತ್ತದೆ. ಕೋರ್ಟಿಗೂ ಆಗುತ್ತದೆ. ಅದಕ್ಕೋಸ್ಕರವಾಗಿ ಅದು ಆಗಬಾರದು, ಆ ದೃಷ್ಟಿಯಿಂದ ಹೇಳುತ್ತಿದ್ದೇನೆ ಇವತ್ತು ಏನು ಸಂದರ್ಭ ಬಂತೆಂದರೆ ಲ್ಯಾಂಡ್ ಟ್ರಿಬ್ಯೂನಲ್‌ನ ಕೆಲಸಗಳ ವಿಚಾರದಲ್ಲಿ ಮಾನ್ಯ ಶ್ರೀ ಬಂಗಾರಪ್ಪನವರು ಆವತ್ತು ಆ ಬಜೆಟ್ ಚರ್ಚೆ ಇನಿಸಿಯೇಟ್ ಮಾಡಿ ಮಾತನಾಡಿದರು. ಅಂಥ ಸಂದರ್ಭದಲ್ಲಿ ಕೆಲವು ಅಪವಾದಗಳು ಯಾವ ರೀತಿ ಬರುತ್ತದೆ ಎನ್ನುವುದನ್ನು ನನ್ನ ಮೇಲೆ ಹೇಗೆ ಪಬ್ಲಿಕ್ ಲೈಫ್ ಇವತ್ತು ಏನು ಥೀಸಿಸ್ ಮಾನ್ಯ ಮುಖ್ಯ ಮಂತ್ರಿಗಳು ಎದುರಿಗೆ ಇಟ್ಟಿದ್ದಾರೆ. ಲಘುವಾಗಿ ಯಾರು ಯಾರ ಮೇಲೆ ಅಪಾದನೆ ಮಾಡಬಾರದು ಅನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಟ್ಟು ನಾನು ಪ್ರಸ್ತಾಪವನ್ನು ಮಾಡಿದ್ದೇನೆ. ಇಡೀ ಭಾಷಣವನ್ನು ನೀವು ಓದಿದರೆ ಗೊತ್ತಾಗುತ್ತದೆ. ನಾನು ಒಂದು ರೆಂಟ್ ಕಂಟ್ರೋಲ್ ಮನೆಯಲ್ಲಿದ್ದೆ. ಅವರು ಅಷ್ಟು ಸುಲಭವಾಗಿ ಹಗ್ಗ ಹಾಕಿ ಎಳೆದು ಬಿಟ್ಟರೆ ಸಿಕ್ಕಿಬೀಳುವುದಿಲ್ಲ,

ಅಧ್ಯಕ್ಷರು.—ಅವರೂ ಓದುವುದಿಲ್ಲ ನೀವು ಓದುವುದಿಲ್ಲ ಎಂದು ಹೇಳುತ್ತೀರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಏನು ಹೇಳುತ್ತಿದ್ದೇನೆಂದರೆ ನಾನು ಒಂದು ರೆಂಟ್ ಕಂಟ್ರೋಲ್ ಮನೆಯಲ್ಲಿದ್ದರೆ, ಆ ಮನೆ ನನ್ನದು ಎಂದು ಒಂದು ಪತ್ರಿಕೆಯಲ್ಲಿ ಬರೆದರು. ಆ ಪತ್ರಿಕೆಯವರನ್ನು ಕೇಳಿದರೆ ಇವರು ಏನು ಬರೆದರು. ಇವರು ಅರಸುರವರ ಕಾರ್ಯದರ್ಶಿಯಾಗಿದ್ದರು. ಮೂರು ತಿಂಗಳಲ್ಲಿ ಆ ಮನೆಯನ್ನು ಕೊಂಡುಕೊಂಡರು ಎಂದು ಇದೆ. ಅವರು ನಮಗೆ ಬಹಳ ಬೇಕಾದ ಪತ್ರಕರ್ತರು. ಅವರನ್ನು ಕೇಳಿದರೆ ಆ ಮನೆಗೆ ಶ್ರೀನಿವಾಸ್ ಎಂದು ಹೆಸರಿದೆ. ಕೊನೆಗೆ ನಾನು ಕೇಳಿದೆ. ಕರಿ ಬಣ್ಣದ ಸೀರೆ ಉಟ್ಟವರೆಲ್ಲರೂ ನನ್ನ ಹೆಂಡತಿಯೇ ಎಂದು ಮಾರ್ಕೆಟ್ಟಿನಲ್ಲಿದ್ದವರನ್ನೆಲ್ಲಾ ಕರೆದರೆ ಏನಾಗುತ್ತದೆ ? ಸದಾಶಿವನಗರದಲ್ಲಿ ೪ ಡಜನ್ ಮನೆಗೆ ಶ್ರೀನಿವಾಸ ಎಂದು ಹೆಸರಿದೆ. ಆ ಓನರ್ ಹೆಸರು ಶ್ರೀನಿವಾಸರಾವ್. ಆ ಮನೆಯನ್ನು ಬಿಟ್ಟು ಬೇರೆ ಮನೆಗೆ ಬಾಡಿಗೆಗೆ ಹೋದ ಮೇಲೆ ಆಗ ಅರ್ಥವಾಯಿತು. ಅಲ್ಲಿರುವ ಜನರು ಆಗ ಇವರ ಮನೆಯಲ್ಲ ಎಂದು ತಿಳಿದುಕೊಂಡರು. ಇದನ್ನು ಇಲ್ಲಿ ಹೇಳಿಬಿಟ್ಟು ಇದೇ ರೀತಿ ಆರೋಪ ಪ್ರತಿಯೊಬ್ಬರ ಮೇಲೂ ಬರುತ್ತದೆ. ಹಾಗೆಯೇ ಬಂಗಾರಪ್ಪನವರ ಮೇಲೂ ಅಪಾದನೆ ಬರಬಹುದು. ಈ ರೀತಿ ನಾನು ಮಾಡುವುದಕ್ಕೆ ತಯಾರಿಲ್ಲ ಎಂದು ಹೇಳಿ

ಒಂದು ಮೆಮೋರಾಂಡಂನ್ನು ಅವತ್ತು ಸೊರಬದ ಲ್ಯಾಂಡ್ ಟ್ರಿಬ್ಯೂನಲ್‌ನ ಸಂಬಂಧದಲ್ಲಿ ಮೆಮೋರಾಂಡಂನ್ನು ಅವತ್ತೇ ಇಲ್ಲೆಲ್ಲಾ ಹಂಚಿದರು. ಅವತ್ತೇ ಏತಕ್ಕೆ ಹಂಚಿದರೋ ಎಂದು ಗೊತ್ತಿಲ್ಲ. ಇಲ್ಲೆಲ್ಲಾ ಹಂಚಿದರು. ನನ್ನ ಕೈಯಲ್ಲಿಯೂ ಬಂತು. ಆ ಮೆಮೋರಾಂಡಮ್‌ನಲ್ಲಿ ಆ ರೀತಿ ಇದೆಯೆಂದು ಇದು ಸತ್ಯವೆಂದು ನಾನು ಹೇಳುವುದಿಲ್ಲ. ಅದರಲ್ಲಿಏನು ಹೇಳಿದ್ದಾರೆ ಎನ್ನತಕ್ಕದ್ದನ್ನು ನಾನು ಸ್ಪಷ್ಟಪಡಿಸುತ್ತೇನೆ.

೩-೦೦ ಪಿ. ಎಂ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿದೆ ಅಧ್ಯಕ್ಷರೆ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇಂಥವರು ಮೆಮೋರಾಂಡಮ್ ಹೊರಡಿಸಿದ್ದಾರೆ ಅದರಲ್ಲಿರತಕ್ಕ ಆರೋಪಗಳನ್ನು ಎತ್ತಿಹಿಡಿಯುವುದಕ್ಕೆ ಬಯಸುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನನ್ನ ಆರೋಪಗಳು ಏನೂ ಇಲ್ಲ. ಮೆಮೋರಾಂಡಮ್ ಇದ್ದರೆ ತರಿಸಿಕೊಂಡು ವಿಮರ್ಶೆ ಮಾಡಬಹುದು. ಈಗ ಅದು ಕೋರ್ಟ್‌ನಲ್ಲಿರುವುದರಿಂದ ನನ್ನ ಸಾಕ್ಷಿಯನ್ನು ದಯವಿಟ್ಟು ಉಪಯೋಗಿಸಿಕೊಳ್ಳಬೇಕಾದ ಅಗತ್ಯವಿಲ್ಲ. ನೀವು ನನ್ನ ಸಾಮರ್ಥ್ಯದ ಮೇಲೆ ಬೇಕಾದರೆ ಮಾಡಿಕೊಳ್ಳಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಯಾರು ಔಟ್ ಆಫ್ ಕಾಂಟೆಸ್ಟ್ ಕೋಟ್ ಮಾಡುತ್ತಾರೆ ಎನ್ನುವುದು ಮಾನ್ಯ ಸದನಕ್ಕೆ ಗೊತ್ತಾಗಿದೆ. ಅವರು ಏನು ಹೇಳಿದರು ಅಂದರೆ ಅದು ಈ ರೀತಿ ಇದೆ. (೨೨ನೇ ಜುಲೈ ೧೯೮೨ ಪುಟ-೨೯)

"ನಾನು ಅದರಲ್ಲಿರತಕ್ಕಂಥ ಆರೋಪಗಳನ್ನು ಎತ್ತಿ ಹಿಡಿಯುವುದಕ್ಕೆ ಬಯಸುವುದಿಲ್ಲ. ಅದರಲ್ಲಿ ಬೇರೆ ಬೇರೆ ಆರೋಪಗಳು ಇವೆ. ಬಂಗಾರಪ್ಪನವರು, ಅವರ ಸ್ನೇಹಿತರು ಸಂಬಂಧಿಕರು, ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ, ಏಜೆನ್ಸಿ ಪಡೆದುಕೊಂಡಿದ್ದಾರೆಂದು ಅದರಲ್ಲಿ ರುವಂತೆ ನಾನು ಹೇಳುವುದಕ್ಕೆ ಬಯಸುವುದಿಲ್ಲ".

ಶ್ರೀ ಎಸ್. ಬಂಗಾರಪ್ಪ.—ಏನು ಹೇಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದು ಬೇಕಾಗಿಲ್ಲ, ಅದನ್ನು ನಾನು ಹೇಳುವುದಿಲ್ಲ. ಯಾವುದರ ಬಗ್ಗೆ ಕಣ್ಣಿಗೆ ಕಾಣುವಂಥ ಅತ್ಯಂತ ಸ್ಪಷ್ಟವಾದಂತಹ ಪುರಾವೆಗಳಿವೆಯೋ,

ನನ್ನ ಕೈಯಲ್ಲಿ ದಾಖಲೆಗಳಿವೆಯೋ ಅದರ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ". ಏಜೆನ್ಸಿ ತೆಗೆದುಕೊಂಡಿದ್ದು ಮತ್ತು ಯಾರ್ಯಾರು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ ಅದನ್ನು ಪ್ರಸ್ತಾಪ ಮಾಡುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ಮೆಮೋರಾಂಡಮ್‌ನಲ್ಲಿ ಏನೇನು ಹೇಳಿದ್ದಾರೆ ಏನೇನು ಇದೆ ಅದನ್ನು ಕೋಟ್ ಮಾಡಿ ಹೇಳಿದ್ದೇನೆ. ಮುಂದಿನ ಪ್ಯಾರಾಗ್ರಾಫ್‌ನಲ್ಲಿ ಏನು ಹೇಳಿದ್ದೇನೆ ಎಂಬುದನ್ನು ತಾವು ಹೇಳಲಿಲ್ಲ. ಅಲ್ಲಿ ಏನು ಹೇಳಿದ್ದೇನೆಂದರೆ, ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ, ನಾನು ಹೇಳತಕ್ಕಂಥಾದ್ದು ಆರೋಪದ ದೃಷ್ಟಿಯಿಂದ ಅಲ್ಲವೆಂದು ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೆ. ಎಚ್. ಶ್ರೀನಿವಾಸ್‌ರವರಿಗೆ ಪ್ರಿಡಿಕಮೆಂಟ್ ಇದೆ ಅದನ್ನು ನಾನು ಅಪ್ರಿಸಿಯೇಟ್ ಮಾಡುತ್ತೇನೆ.

SRI K. H. SRINIVASA.—I know that the Chief Minister is very smart. ಇವರ ಪ್ರಯೋಗವನ್ನು ತಡೆದುಕೊಳ್ಳುವ ಶಕ್ತಿ ನಮಗಿದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ ಇಡೀ ಭಾಷಣವನ್ನು ಓದಿದರೂ ಅದರಲ್ಲಿ ನಿಮಗೇನು ಸಿಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏನನ್ನೂ ಓದುವುದಿಲ್ಲವೆಂದು ಹೇಳಿದೆ. ನಾನಾಗಿಯೇ ಏತಕ್ಕೆ ಹೇಳಿದ್ದೇನೆಂದರೆ...

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ ಇದು ಏನಾಗಿದೆ ಅಂದರೆ......

ಅಧ್ಯಕ್ಷರು.—ಅವರು ಓದುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಒಂದು ಮಾತು ಹೇಳುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಈಸ್ಟ್ ಇಂಡಿಯಾ ಕಂಪನಿ ತರಹ, ಅದಕ್ಕೆ ಅವರು ಹೇಳುವುದಿಲ್ಲ. ಈಸ್ಟ್ ಇಂಡಿಯಾ ಕಂಪನಿ ಹೋಗಿ ಬಹಳ ದಿವಸ ಆಯಿತು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏತಕ್ಕೆ ಓದುವುದಿಲ್ಲ ಅಂತ ಹೇಳಿದೆ ಅಂದರೆ, ಇದು ಕೋರ್ಟ್‌ನಲ್ಲಿರುವುದರಿಂದ ಸಬ್ ಜ್ಯುಡೀಸ್ ಆಗುತ್ತದೆನ್ನುವ ಕಾರಣದಿಂದ ಓದುವುದಿಲ್ಲವೆಂದು ನಾನು ಹೇಳಲಿಲ್ಲ. ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ ಓದಿದರೆ ಶ್ರೀನಿವಾಸ್‌ರವರು ಹೇಳಿದಹಾಗೆ ಒಂದೇ ಒಂದು ಭಾಗ ಓದಿ ಇನ್ನೊಂದು ಭಾಗ ಬಿಟ್ಟು ಬಿಡುತ್ತಾರೆನ್ನುವ ತಪ್ಪು ಕಲ್ಪನೆ ಬರಬಾರದು ಆದ್ದರಿಂದ ಅದನ್ನು ಇಲ್ಲಿಗೆ ಬಿಟ್ಟು ಬಿಡುತ್ತೇನೆ. ಇದು ಪುಟ ೨೪ ರಿಂದ ಶುರುವಾಗಿ ಅವರು ಬಹಳ ಉದ್ದವಾದ ಭಾಷಣವನ್ನೇ ಮಾಡಿದ್ದಾರೆ, ಪುಟ ೨೪ ರಿಂದ ೪೧ರವರೆಗೆ ಇದೆ.

ಶ್ರೀ ಎಸ್. ಬಂಗಾರಪ್ಪ,—ಒಂದೇ ಸಬ್ಜೆಕ್ಟ್ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು ಒಂದೇ ಒಂದು ಸಬ್ಜೆಕ್ಟ್. ೨೨ನೇ ಜುಲೈ ೧೯೮೨ ರಂದು ನಡೆದಂತಹ ಸಭೆಯ ನಡವಳಿಕೆ. ಇದನ್ನು ಮಾನ್ಯ ಸದಸ್ಯರುಗಳು ಓದಿಕೊಳ್ಳಬಹುದು. ಬಹಳ ಹೊತ್ತಾಯಿತು. ನನ್ನ ಗಂಟಲು ಕೂಡ ಕೆಡುತ್ತಿದೆ ಅದಕ್ಕಾಗಿ ನಾನು ಓದುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ಓದಿದರೆ ನಿಮ್ಮ ವಾದ ಬಿದ್ದುಹೋಗುತ್ತದೆ ಅದಕ್ಕೋಸ್ಕರ ಓದುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಏನಾದರೂ ಹೇಳುವುದು ಇದ್ದರೆ ಕೊನೆಯಲ್ಲಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಕೊನೆಯದಾಗಿ ನಾನು ಮಾನ್ಯ ಸದಸ್ಯರೆಲ್ಲರಿಗೂ ಮತ್ತು ಮುಖ್ಯವಾಗಿ ವಿರೋಧ ಪಕ್ಷದ ನಾಯಕರಿಗೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮುಂದಾದರೂ ಸ್ವಲ್ಪಮಟ್ಟಿಗೆ ಏನಾದರೂ ವಿಮರ್ಶೆ ಮಾಡುವಾಗ ಬುದ್ಧಿಯನ್ನು ಉಪಯೋಗಿಸಬೇಕು. ಯಾವುದನ್ನು ಪ್ರಸ್ತಾಪ ಮಾಡಬೇಕು, ಯಾವುದನ್ನು ಪ್ರಸ್ತಾಪ ಮಾಡಬಾರದು ಎನ್ನುವುದರ ಬಗ್ಗೆ ಈಗ ನನ್ನ ಅಭಿಪ್ರಾಯದಲ್ಲಿ ಆ ಕಡೆ ಕುಳಿತವರು ಈ ಕಡೆ ಕುಳಿತವರು ಅವರ ಮೇಲೆ ವೈಯಕ್ತಿಕವಾಗಿ ಆರೋಪಗಳನ್ನು ಮಾಡಬಹುದು. ಅದನ್ನು ಬಿಟ್ಟು ಅವರ ಸಂಬಂಧಿಕರ ಮೇಲೆ ಮತ್ತೊಬ್ಬರ ಮೇಲೆ ಆರೋಪ ಮಾಡಿದರೆ ಅವರು ಇಲ್ಲಿ ಬಂದು ಡಿಫೆಂಡ್ ಮಾಡುವುದಕ್ಕಾಗುವುದಿಲ್ಲ. ಇಂತಹದ್ದನ್ನು ಅವಾಯ್ಡ್ ಮಾಡುವುದು ಒಳ್ಳೆಯದು. ಮುಖ್ಯವಾಗಿ ರಾಜ್ಯದ ಜನತೆಯ ಸಮಸ್ಯೆಗಳ ಬಗ್ಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ನಮ್ಮ ಲಕ್ಷ್ಯವನ್ನು ನಮ್ಮ ಗಮನವನ್ನು ಕೇಂದ್ರೀಕರಿಸುವುದು ಒಳ್ಳೆಯದು. ಮಾನ್ಯ ವೀರಪ್ಪಮೊಯ್ಲಿಯವರು ಎಷ್ಟು ನೊಂದುಕೊಂಡಿದ್ದಾರೆನ್ನುವುದನ್ನು ಅವರು ಹೇಳಿದ ಮಾತನ್ನೆ ಹೇಳಿದರು ಸಾಕು. (ಪುಟ–೪೪೨, ೨೨ನೇ ಜುಲೈನ ೧೯೮೨ರ ನಡವಳಿಕೆ) ಮಾನ್ಯ ಮೊಯಿಲಿಯವರು ಮತ್ತು ಬಂಗಾರಪ್ಪ ಅವರ ಸಂವಾದ ಹೀಗಿದೆ.

> ''ಶ್ರೀ ಎಂ. ವೀರಪ್ಪ ಮೊಯಿಲಿ.—ಅಭ್ಯಾಸ ಮಾಡದೆ, ಯಾರಿಗೋ ಹೇಳಬೇಕಾದ ವಿಷಯಗಳನ್ನು ಇಲ್ಲಿ ಹೇಳಿದ್ದೀರಿ. It has gone into the records, It may be for the gallary not for this House,
>
> ಶ್ರೀ ಎಸ್. ಬಂಗಾರಪ್ಪ.—ಹೇಳಿ, ಹೇಳಿ, ಎಷ್ಟು ದಿವಸ ಇದನ್ನು ಹೇಳುವುದಕ್ಕಾಗುತ್ತದೆ?
>
> ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರಿಂದ ತಮ್ಮ ರಾಜಕೀಯ ಇಲ್ಲಿ ನಡೆಯುವುದಿಲ್ಲ. ತಾವು ರಾಜಕೀಯ ನಿರಾಸೆಯಿಂದ ಮೂರ್ತಿವತ್ತಾಗಿ ಬಂದು ಕೆಲವು ಆಪಾದನೆಗಳನ್ನು ಮಾಡುವಾಗ ತನ್ನ ತಲೆಯನ್ನು ತಾನೇ ಕತ್ತರಿಸತಕ್ಕ ಆತ್ಮಹತ್ಯೆ ಮಾಡಿಕೊಳ್ಳತಕ್ಕ ಕೆಲಸವನ್ನು ಅವರು ಮಾಡಿದ್ದಾರೆ.
>
> ಶ್ರೀ ಎಸ್. ಬಂಗಾರಪ್ಪ.—ನಾನು ನಿರಾಸೆ ಮೂರ್ತಿವತ್ತಾಗಿ ಬಂದಿದ್ದಾರೆ ತಾವು ಲಂಚ ಗಂಳಿತನದ ಮೂರ್ತಿವತ್ತಾಗಿ ಬಂದು ಮಾತನಾಡುತ್ತಿದ್ದೀರಿ ಅದನ್ನೂ ಕೂಡ ಹೇಳುತ್ತೇನೆ.''

ಈ ತರಹ ಸಂಭಾಷಣೆಯನ್ನು ತಾವು ಮಾಡಿದ್ದೀರಿ. (ಸಭೆಯಲ್ಲಿ ನಗು)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಹೆಗಡೆಯವರೇ ನಿಮ್ಮ ಬಗ್ಗೆ ಕೂಡ ನಮ್ಮಲ್ಲಿ ದಾಖಲೆಗಳಿವೆ.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಒಂದೇ ಒಂದು ಅದು ವ್ಯಥೆಯೂ ಹೌದು, ಆಶ್ಚರ್ಯವೂ ಹೌದು, ಸ್ವಲ್ಪ ಮಟ್ಟಿಗೆ ವಿಷಾದನೀಯವೂ ಹೌದು. ಆ ಕಡೆ ಕುಳಿತಿರತಕ್ಕವರೆಲ್ಲರೂ ಈ ಕಡೆ ಕುಳಿತಿರತಕ್ಕವರೆಲ್ಲರೂ ಒಂದೇ, ಎಲ್ಲರೂ ಒಂದೇ ಪಕ್ಷದವರು. ಎಲ್ಲರೂ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ಖಾತೆಗಳ ಬಗ್ಗೆ ಭಾಷಣವನ್ನು ಮಾಡುತ್ತಾರೆ, ಮಾಡಿದ್ದಾರೆ, ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುತ್ತಾರೆ ? ಆದರೆ ಬಾಕಿಯವರು ಯಾರೂ ಈ ತರಹ ಭಾಷಣವನ್ನು ಏತಕ್ಕೆ ಮಾಡುವುದಿಲ್ಲ ? ಕೇವಲ ಮಾನ್ಯ ಬಂಗಾರಪ್ಪನವರ ಬಾಯಿಯಿಂದ ಮಾತ್ರ ಇಂತಹ ಮಾತುಗಳು ಏತಕ್ಕೆ ಬರುತ್ತವೆ ? ಅವರು ಅಲ್ಲಿ ಕುಳಿತಿರಲಿ ಇಲ್ಲಿ ಕುಳಿತಿರಲಿ, ಅವರು ಅಲ್ಲೇ ಕೂಡುತ್ತಾರೆಂದು ನಾನು ಹೇಳುವುದಿಲ್ಲ ಅವರು ಇಲ್ಲಿಗೂ ಬರಬಹುದು. ಅಲ್ಲೇ ಕೂಡುತ್ತಾರೋ ಅದು ಬೇರೆ. ಯಾರೊಬ್ಬರು ವೈಯಕ್ತಿಕ ಭಾಷಣವನ್ನು ಟೀಕೆಗಳನ್ನು ಮಾಡುವುದಿಲ್ಲ ಮಾನ್ಯ ವೀರಪ್ಪ ಮೊಯಿಲಿಯವರು ಇಂತಹ ವಿರೋಧ ಪಕ್ಷದ ನಾಯಕರಾಗಿದ್ದಾಗ ಅವರು ಭಾಷಣವನ್ನು ನಾನು ಕೇಳಲಿಲ್ಲವೇ ? ಅವರು ಏತಕ್ಕೆ ಇಂತಹ ಭಾಷಣವನ್ನು ಮಾಡಲಿಲ್ಲ, ಸರ್ಕಾರದ ನೀತಿಯು ಬಗ್ಗೆ ಕಟುವಾಗಿ ಬೇಕಾದಂತಹ ಅತ್ಯಂತ ಕಠೋರವಾದಂತಹ ಶಬ್ದಗಳನ್ನು ಉಪಯೋಗಿಸಿ ಭಾಷಣ ಮಾಡಿದ್ದಾರೆ. ಅವರು ಸಾಹಿತಿಗಳು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮೊಯಿಲಿಯವರು ಇಲ್ಲಿ ಭಾಷಣ ಮಾಡಿದಾಗ ನೀವು ಇಲ್ಲಿ ಒಪ್ಪಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಸಾಹಿತಿಗಳು ಅವರಿಗೆ ಬೇಕಾದಂತೆ ಟೀಕೆಗಳನ್ನು ಮಾಡುವುದು ಗೊತ್ತು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮ್ಮ ಈಸ್ಟ್ ಇಂಡಿಯಾ ಕಂಪನಿ ಭಾಷಣ ಸಾಕು ಇಲ್ಲಿಗೆ ಮುಗಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರಿಗೂ ಕೂಡ......

SRI J. H. PATEL.—The people get the Govt They deserve we have a leader whom we deserve and they have a leader whom they deserve.

SRI S. BANGARAPPA.—You have got a Chief Minister whom you deserve and he has got a Minister whom he deserve.

ಶ್ರೀ ರಾಮಕೃಷ್ಣ ಹೆಗಡೆ.—ಮಾರ್ಕೆಟ್‌ನಲ್ಲಿ ಕೇಳತಕ್ಕಂಥ ಸಂದ್ಬಿ, ಅದಕ್ಕೆ ಬಣ್ಣ ಬಳಿದು ಮಾನ್ಯಿಫೈ ಮಾಡಿ...

ಶ್ರೀ ಕೆ. ಎಚ್. ಶ್ರೀನಿವಾಸ್.—ಇದನ್ನು ಈಸ್ಟ್ ಇಂಡಿಯಾ ಕಂಪನಿಯವರಿಗೆ ಹೇಳಿದರೆ, ಇಂಡಿಯಾವನ್ನೇ ಕೊಟ್ಟುಬಿಟ್ಟು ಹೊರಟುಹೋಗುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಊಹಾ-ಪೋಹಗಳಿಗೆಲ್ಲಾ ಪುಷ್ಟಿ ಕೊಟ್ಟು ಈ ಸದನದಲ್ಲಿ ಪ್ರಸ್ತಾಪ ಮಾಡುವಂಥಾದ್ದು ಹೋಗಬೇಕು. ನನ್ನ ಇಲಾಖೆಯ ಬೇಡಿಕೆಗಳನ್ನು ಈ ಸದನ ಶಿಫಾರಸ್ಸು ಮಾಡಿ ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡು ಕೊನೆಗೊಂದು ಸುಭಾಷಿತವನ್ನು ಹೇಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಿ, ಮತ್ತು ಅದರ ನೀತಿಯನ್ನು ತಿಳಿದುಕೊಳ್ಳಿ.

''ಮೂರ್ಖ ಚಿನ್ಹಾನಿ ಷಡತಿ
ಗರ್ವೋದುರ್ವಚನಂ ಮಂಖೇ
ವಿರೋಧೊ ದೀರ್ಘವಾದಶ್ಚ
ಕೃತ್ಯಾ ಕೃತ್ಯಂ ನಮಸ್ಯತೇ''

ನಮಸ್ಕಾರ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಭಾಷಣವನ್ನು ಮಾಡಬೇಕಾದರೆ ಇತ್ತೀಗೆಚೆ ಕೆ.ಎ.ಎಸ್. ಜ್ಯೂನಿಯರ್ ಸ್ಕೇಲ್‌ನಲ್ಲಿರತಕ್ಕಂತಹರಿಗೆ ಬಡ್ತಿಯನ್ನು ಕೊಟ್ಟಿರುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದೆ. ಒಂದೇ ವರ್ಗಕ್ಕೆ ಬಡ್ತಿಯನ್ನು ಕೊಟ್ಟಿದ್ದಿರಿ. ಅದನ್ನು ೧೯೭೭ರ ಬ್ಯಾಚ್‌ಗೆ ಅನ್ವಯ ಮಾಡಿ, ೧೯೭೮ರ ಬ್ಯಾಚ್‌ಗೆ ಅದನ್ನೇ ಏಕೆ ಅನ್ವಯ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದ್ದೆ. ಸುಮಾರಾಗಿ ೮ ಜನ ಅಧಿಕಾರಿಗಳು ಒಂದೇ ಕೋಮಿಗೆ ಸೇರಿದವರಿಗೆ ಬಡ್ತಿಯನ್ನು ಕೊಟ್ಟಿರುತ್ತೀರಿ. ಆ ಬಗ್ಗೆ ಹೊರಡಿಸಿದಂತಹ ಆರ್ಡರ್‌ನ್ನು ಕೋಟ್ ಮಾಡಿ ಹೇಳಿದ್ದೆ. ಆದರ ದಿನಾಂಕ ೫-೩-೮೬ ಅಂತ ಕಾಣುತ್ತೆ. ಆದಕ್ಕೆ ಮಾನ್ಯಮುಖ್ಯಮಂತ್ರಿಗಳು ಉತ್ತರ ಹೇಳಲಿಲ್ಲ. ಅದಕ್ಕೆ ವಿವರಣೆಯನ್ನು ಈಗಲಾದರೂ ಕೊಡಬೇಕು. ಎರಡನೆಯದಾಗಿ ಬಡ್ತಿ ಯೋಜನೆಯ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ, ಆ ಸಮಿತಿಯ ವರದಿ ಬಂದ ಮೇಲೆ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ರಾಜ್ಯ ಸರ್ಕಾರ ನೇಮಕ ಮಾಡಿರುವಂತಹ ಸಮಿತಿ ಇದು. ಆ ಸಮಿತಿಯು ವರದಿಯನ್ನು ಕೊಟ್ಟ ಮೇಲೆ ಆ ವರದಿಯನ್ನು ಆಧರಿಸಿ ಆ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವೇನು ಎಂಬುದನ್ನೂ ಕೂಡ ಇಲ್ಲಿ ಹೇಳಬೇಕಾಗುತ್ತದೆ. ಮೂರನೆಯದಾಗಿ ಅವರು ಹೇಳಿದ್ದಾರೆ, ಬರೀ ಪಬ್ಲಿಸಿಟಿಗೋಸ್ಕರ ಹೇಳತಕ್ಕಂತಹ ಮಾತಾಗುತ್ತದೆ ಎಂದು ಒಂದು ಸಂದರ್ಭದಲ್ಲಿ ಅವರು ಉತ್ತರ ಕೊಡುವಾಗ ಹೇಳಿದ್ದಾರೆ. ಅದನ್ನು ಕೈಬಿಡುವಂಥದ್ದು ಬಹಳ ಒಳ್ಳೆಯದು. ಅಂತಿಮವಾಗಿ ಸಂಸ್ಕೃತದಲ್ಲಿ ಶುಭಾಶಯವನ್ನು ಹೇಳಿದ್ದಾರೆ. ಅದು ನಮಗೆ ಅರ್ಥವಾಗಲಿಲ್ಲ. ಅದರ ಪೂರ್ಣ ವಿವರ ಗೊತ್ತಾಗಲಿಲ್ಲ.

ಅಧ್ಯಕ್ಷರು.—ಪತ್ರಿಕೆಯವರು ಆದನ್ನು ಭಾಷಾಂತರ ಮಾಡಿ ಪತ್ರಿಕೆಯಲ್ಲಿ ಹಾಕುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಸರಿಯಾಗಿ ಅರ್ಥವಾಗಿದ್ದರೆ, ಸರಿಯಾದ ಉತ್ತರವನ್ನೇ ಕೊಡಬಹುದಾಗಿತ್ತು. ಒಂದು ಮಾತನ್ನು ಹೇಳುವುದಾದರೆ ಚಾರಿತ್ರ್ಯವಧೆಯನ್ನು ಮಾಡುವ ಬಗ್ಗೆ ನಾವು ಕೆಲವು ನೀತಿ ನಿರೂಪಣೆಯನ್ನು ನಿರೂಪಿಸಬೇಕೆಂದು ಹೇಳಿದ್ದಾರೆ, ಆ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಅವರು ನಮಗೆ ಹೇಳಿರುವಂತಹದ್ದು ನೋಡಿದರೆ ನಾವು ಅವರ ಮೇಲೆ ಒಂದು ಕೆಟ್ಟ ಅಭಿಪ್ರಾಯವನ್ನು ಇಟ್ಟುಕೊಂಡು ಯಾವಾಗಲೂ ಆಪಾದನೆ ಮಾಡುತ್ತಿದ್ದೇನೆ ಎನ್ನುವ ಅರ್ಥದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ,

ಅಧ್ಯಕ್ಷರು.—ಬೇಗ ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಅವತ್ತು ರೆಕ್ಟಿಫೈಡ್ ಸ್ಪಿರಿಟ್ ವಿಚಾರ ಬಂದಾಗ ಆಪಾದನೆಯನ್ನು ಮಾಡಿದ್ದೆ. ಅದರ ಬಗ್ಗೆ ಇವತ್ತು ನ್ಯಾಯಾಂಗ ವಿಚಾರಣೆಯಾಗುತ್ತಿರುವುದರಿಂದ ಅದರ ಬಗ್ಗೆ ಹೇಳುವುದಿಲ್ಲ. ಅರಾಕ್ ಬಾಟ್ಲಿಂಗ್ ಕಾಂಟ್ರಾಕ್ಟ್ ಬಗ್ಗೆ ಆಪಾದನೆ ಮಾಡಿದ್ದೆ ನಾನು ಏನೇನು ಹೇಳಿದ್ದೇನೋ ಅವೆಲ್ಲಾ ಸತ್ಯ ಇದೆ ಎಂಬುದು ಹೈಕೋರ್ಟ್ ಜಡ್ಜ್‌ಮೆಂಟ್ ಮುಖಾಂತರವೇ ತೀರ್ಮಾನವಾಗಿದೆ. ನಾನು ಇಲ್ಲಿ ಮಾಡಿರತಕ್ಕಂತಹ ಆಪಾದನೆಗಳೆಲ್ಲವೂ ಹೈಕೋರ್ಟಿನ ಜಡ್ಜ್‌ಮೆಂಟ್‌ನಲ್ಲಿ ಸಾಬೀತಾಗಿವೆ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಮಾಡಿದ ಆಪಾದನೆಗಳೆಲ್ಲವೂ ಸಾಬೀತಾಗಿವೆಯೋ ?

ಶ್ರೀ ಎಸ್. ಬಂಗಾರಪ್ಪ.—ಎಕ್ಸೈಜ್ ಇಲಾಖೆಯವರು ಕಾನೂನಿಗೆ ವಿರೋಧವಾಗಿ ಮಾಡಿದ್ದಾರೆಂದು ನಾವು ಏನು ಹೇಳಿದ್ದೇವೆ ಅದನ್ನು ಅವರು ಎತ್ತಿ ಹಿಡಿದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನೆಪೋಟಿಸಂ ಇದೆ ಅಂತ ಹೇಳಿದ್ದಾರೆಯೋ ? ಕರಪ್ಷನ್ ಮಾಡಿದ್ದಾರೆ ಎಂದು ಹೇಳಿದ್ದಾರೆಯೆ ?

ಶ್ರೀ ಎಸ್. ಬಂಗಾರಪ್ಪ.—ಎಕ್ಸೈಜ್ ಇಲಾಖೆಯವರು ರೂಲ್ಸಿಗೆ ವಿರೋಧವಾಗಿ ಮಾಡಿದ್ದಾರೆಂದು ಹೇಳಿದ್ದಾರಲ್ಲ !

ಶ್ರೀ ರಾಮಕೃಷ್ಣ ಹೆಗಡೆ.—ಕೆಎಎಸ್ ಅಧಿಕಾರಿಗಳ ಪ್ರಮೋಷನ್ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಅಷ್ಟೇ ಅಲ್ಲ, ಇನ್ನೂ ೩-೪ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಶ್ರೀಮಾನ್ ಶಾನಪ್ಪನವರು ಹಾಗೂ ಶ್ರೀಮಾನ್ ಮೊಯ್ಲಿಯವರು ಮಾತನಾಡಿದ್ದಾರೆ. ಅದರಲ್ಲಿ ನಾನು ಇಷ್ಟೇ ಹೇಳುತ್ತೇನೆ. ಇದರಲ್ಲಿ ಯಾವುದೇ ತರಹದ ಕಾಯಿದೆಗೆ ವಿರೋಧವಾಗಿ, ಹೈಕೋರ್ಟಿನ

ಜಡ್ಜ್‌ಮೆಂಟ್‌ಗೆ ವಿರೋಧವಾಗಿ ಯಾವುದೇ ಕ್ರಮವನ್ನಾಗಲಿ, ನಿರ್ಣಯವನ್ನಾಗಲಿ ಸರ್ಕಾರ ತೆಗೆದುಕೊಂಡಿಲ್ಲ. ಪ್ರಮೋಷನ್ ಕೊಟ್ಟಿರತಕ್ಕಂತಹವರಲ್ಲಿ ೮ ಜನವೂ ಒಂದೇ ಜಾತಿಗೆ ಸೇರಿದವರಾಗಿದ್ದಾರೆ ಅಂತ ಹೇಳಿದ್ದಾರೆ ಅದು ನಿಜ ಅಲ್ಲ. ೫ ಜನ ಬ್ರಾಹ್ಮಣರು, ೫ ಜನ ಲಿಂಗಾಯಿತರು ೩ ಜನ ಒಕ್ಕಲಿಗರು, ಒಬ್ಬರು ವೈಶ್ಯರು, ಒಬ್ಬರು ಬಲಿಜ ಜನಾಂಗಕ್ಕೆ ಸೇರಿದವರು. ಹಾಗೂ ಇನ್ನೊಬ್ಬರು ಹರಿಜನರು. ಬ್ರಾಹ್ಮಣರನ್ನಾಗಲಿ, ಲಿಂಗಾಯಿತರನ್ನಾಗಲಿ, ಯಾವುದೇ ಒಂದು ಜಾತಿಗೆ ಸಂಬಂಧಪಟ್ಟವರಿಗೆ ಪ್ರಮೋಷನ್‌ನನ್ನು ಕೊಡತಕ್ಕಂತಹದ್ದು ನಮ್ಮ ಕೈಯಲ್ಲಿಲ್ಲ. ಕೆಎಎಸ್ ಅಧಿಕಾರಿಗಳನ್ನು ನೇಮಕ ಮಾಡತಕ್ಕಂತಹವರು ಲೋಕ ಸೇವಾ ಆಯೋಗದವರು.

ಶ್ರೀ ಎಸ್. ಬಂಗಾರಪ್ಪ.—ನಾವು ಅದನ್ನು ಕೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಪ್ರಮೋಷನ್ ಕೊಡುವುದರಲ್ಲಿ ಏನೂ ವ್ಯತ್ಯಾಸ ಮಾಡುವುದಕ್ಕೆ ಬರುವುದಿಲ್ಲ. ಈ ವಿಚಾರದಲ್ಲಿ ಒಂದು ಸಂಪೂರ್ಣವಾದ ಹೇಳಿಕೆಯನ್ನು ನಮ್ಮ ಕಂದಾಯ ಮಂತ್ರಿಗಳು ಒಂದೆರಡು ದಿವಸಗಳಲ್ಲಿ ಸ್ಟೇಟ್‌ಮೆಂಟ್‌ನ್ನು ಮಾಡುತ್ತಾರೆ ಅದು ಏನಿದೆಯೋ ಅದನ್ನು ಸಂಪೂರ್ಣವಾಗಿ ನಿಮ್ಮ ಮುಂದೆ ಇಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕೆಲವು ಅಧಿಕಾರಿಗಳ ಹೆಂಡತಿಯರು ನನ್ನ ಹತ್ತಿರ ಬಂದು ವಿನಂತಿ ಮಾಡಿಕೊಂಡರು. ಅದು ಏನೆಂದರೆ ಅವರ ಮನೆಯವರು ಕಾಯಿಲೆ ಬಿದ್ದಾಗ ಸಂಬಳದಲ್ಲಿ ಸಬ್ಸಿಡಿಯರಿ ಅಲೋಯನ್ಸನ್ನು ಕೊಡುವುದಕ್ಕೆ ಸರ್ಕಾರ ಏನಾದರೂ ಸಹಾಯ ಮಾಡಬೇಕು ಎಂದು. ಇದಕ್ಕೆ ಇರತಕ್ಕಂಥ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಅದರ ಬಗ್ಗೆ ಏನಾದರೂ ಸಹಾಯ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರಿ ನೌಕರರಾದವರು ಕಾಯಿಲೆ ಬಿದ್ದಾಗ ಅವರಿಗೆ ನಿಯಮದ ಪ್ರಕಾರ ಅವರಿಗೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರಿಗೆ ಆಗಾಗ್ಗೆ ಔಷಧಿ ಖರ್ಚು ಹಾಗೂ ಆಪರೇಷನ್ ಚಾರ್ಜಸ್ ಕೊಡುತ್ತಾರೆ. ಆದರೆ ಅವರ ಸಂಬಳದಲ್ಲಿ ಒಂದು ಕಾಸೂ ಕೊಡುತ್ತಾ ಇಲ್ಲ ಇದರಿಂದಾಗಿ ಅವರ ಮನೆಯಲ್ಲಿರುವಂತಹವರು ಜೀವನ ಮಾಡುವುದಕ್ಕೆ ಏನೂ ಇಲ್ಲದೆ ಹುಚ್ಚರಂತಾಗಿದ್ದಾರೆ. ಅಂತಹವರಿಗೆ ಏನಾದರೂ ಸಹಾಯ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅಂತಹ ಕೇಸುಗಳೆಲ್ಲಾ ಸಾಮಾನ್ಯವಾದುದಲ್ಲ. ಅಸಮಾನ್ಯವಾದದು. ಅಂತಹ ಕೇಸುಗಳನ್ನು ತಾವು ನನ್ನ ಗಮನಕ್ಕೆ ತಂದರೆ ಸಹಾಯದ ವ್ಯವಸ್ಥೆ ಮಾಡುತ್ತೇನೆ, ಈ ಹಿಂದೆಯೂ ಮಾಡಿದ್ದೇವೆ. ಒಬ್ಬ ಅಧಿಕಾರಿಗಳಿಗೆ ಹೃದಯ ಚಿಕಿತ್ಸೆ ಬೇರೆ ಯಾವುದೋ ದೊಡ್ಡ ಕಾಯಿಲೆ ಇದ್ದರೆ, ಅದನ್ನು ಅವರ ಸ್ವಂತ ಹಣದಿಂದ ಗುಣಪಡಿಸುವುದಕ್ಕಾಗುವುದಿಲ್ಲ, ಅಂತಹ ಒಬ್ಬ ಅಧಿಕಾರಿಯನ್ನು ವಿದೇಶಕ್ಕೆ ಸರ್ಕಾರದ ಖರ್ಚಿನಲ್ಲಿ ಕಳುಹಿಸಿಕೊಟ್ಟಿದ್ದೇವೆ. ಆದ್ದರಿಂದ ಅಂತಹದ್ದು ಯಾವುದಾದರೂ ಇದ್ದರೆ ನನ್ನ ಗಮನಕ್ಕೆ ತನ್ನಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ಸಹಕಾರಿ ಸಂಸ್ಥೆಗಳಲ್ಲಿ ನಾಮಿನೇಷನ್ ಪದ್ಧತಿಯನ್ನು ಇನ್ನು ಮುಂದೆ ಜಾರಿಯಲ್ಲಿಟ್ಟುಕೊಳ್ಳುವುದಿಲ್ಲವೆಂದು ಹೇಳಿದರು. ಹಿಂದಿನಿಂದ ನಾಮಿನೇಷನ್‌ನ್ನು ಏಕೆ ಮಾಡುತ್ತಿದ್ದರು ಅಂದರೆ, ಕೆಲವೇ ಪಟ್ಟಭದ್ರ ಹಿತಾಶಕ್ತಿಗಳು ಸಹಕಾರಿ ಕ್ಷೇತ್ರದಲ್ಲಿ ಅವರೇ ಹೆಚ್ಚು ಆಸಕ್ತಿ ವಹಿಸಿ, ಅವರಿಗೇ ಸೀಮಿತವನ್ನಾಗಿ ಮಾಡಿಕೊಂಡು, ಅದರ ಕಾರ್ಯಚಟುವಟಿಕೆಯನ್ನು ಇಟ್ಟುಕೊಂಡಿದ್ದರು. ಬೇರೆ ಯಾರಿಗೂ ಅನುಕೂಲವಾಗಬಾರದು, ಅಥವಾ ಯಾರಿಗೂ ಸದಸ್ಯತ್ವ ಮಾಡಿಕೊಳ್ಳಕೂಡದು ಎಂದು ಆ ರೀತಿ ಮಾಡುತ್ತಿದ್ದರು. ಅದನ್ನು ಶ್ರೀಮಾನ್ ದೇವರಾಜ್ ಅರಸ್‌ರವರು ಇದ್ದಂತಹ ಕಾಲದಲ್ಲಿ ಗಮನಿಸಿ ಯಾವ ಜಾತಿಯವರಿಗೆ ಪ್ರಾತಿನಿಧ್ಯ ಇಲ್ಲವೋ ಅಂತಹವರಿಗೆ ರಕ್ಷಣೆ ಕೊಡುವುದಕ್ಕೋಸ್ಕರ ಈ ವ್ಯವಸ್ಥೆ ಮಾಡಿದರು. ಅದನ್ನು ಹಿಂದೆ ಇದ್ದಂತೆ ಮುಂದುವರಿಸಿಕೊಂಡು ಹೋಗುವುದು ಒಳ್ಳೆಯದು. ಮತ್ತೆ ಸುಮಾರು ೫೫ ಸಾವಿರ ಪುರಸಭೆ ನೌಕರರು ಇಡೀ ರಾಜ್ಯದಲ್ಲಿ ಮುಷ್ಕರವನ್ನು ಮಾಡುತ್ತಿದ್ದಾರೆ, ಅವರ ಒಂದೇ ಒಂದು ಬೇಡಿಕೆ ಏನೆಂದರೆ, ಅವರಿಗೂ ಕೆ.ಸಿ.ಎಸ್.ಆರ್. ಅನ್ನು ಅನ್ವಯ ಮಾಡಿ ಎಂದು ಕೇಳುತ್ತಿದ್ದಾರೆ. ಅವರು

ಕಳೆದ ೮-೯ ದಿವಸಗಳಿಂದಲೂ ಮುಷ್ಕರವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಸ್ಪಷ್ಟವಾಗಿ ಸರ್ಕಾರದ ನಿಲುವು ಏನು ಎಂಬುದನ್ನು ತಾವಾದರೂ ತಿಳಿಸಬೇಕು.

ಮೂರನೆಯದಾಗಿ ಕಳೆದ ಸುಮಾರು ವರ್ಷಗಳಿಂದಲೂ ಹೈದರಾಬಾದ್ ಕರ್ನಾಟಕ ಏರಿಯಾ ಡವಲಪ್‌ಮೆಂಟ್ ಬೋರ್ಡ್ ಆಗಬೇಕೆಂದು ಕೇಳುತ್ತಲೇ ಇದ್ದೇವೆ. ಇಲ್ಲಿಯವರೆವಿಗೂ ಅದರ ಬಗ್ಗೆ ತಾವು ಏನೂ ಪ್ರಸ್ತಾಪ ಮಾಡಿಲ್ಲ. ಈ ಮೂರು ವಿಚಾರಗಳ ಬಗ್ಗೆ ತಾವು ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಮೂರು ವಿಚಾರಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯ ವಿಷಯವಾದ ಸಹಕಾರ ಸಂಘಗಳ ನೇಮಕಾತಿ ವಿಚಾರದಲ್ಲಿ ಹೇಳುವುದಾದರೆ. ದಿವಂಗತ ಮಾನ್ಯ ಶ್ರೀ ದೇವರಾಜ್ ಅರಸ್ ರವರು ಈ ಉದ್ದೇಶದಿಂದಲೇ ನೇಮಕಾತಿ ವಿಚಾರವನ್ನು ವಾಪಸ್ಸು ಆಚರಣೆಗೆ ತಂದರು ಎಂಬ ವಿಚಾರವು ನನಗೆ ಗೊತ್ತಿದೆ. ಆದರೆ ಅವರು ಹೋದ ಮೇಲೆ ಅವರ ಉದ್ದೇಶ ಸಫಲವಾಗಲಿಲ್ಲ ರಾಜಕೀಯ ಪ್ರಭಾವದ ಮೇಲೆ ನೇಮಕಾತಿ ಮಾಡುವುದು ಪ್ರಾರಂಭ ವಾಯಿತು ಆದರೆ ನಮ್ಮ ಸರ್ಕಾರ ಬಂದ ಮೇಲೆ ಮೂರು ಸದಸ್ಯರನ್ನು ನೇಮಕಾತಿ ಮಾಡಬೇಕಾದರೂ ಒಬ್ಬರನ್ನೂ ಪರಿಶಿಷ್ಠ ವರ್ಗದಿಂದಲೂ, ಒಬ್ಬರನ್ನು ಹಿಂದುಳಿದ ವರ್ಗದಿಂದಲೂ ನೇಮಕಾತಿ ಮಾಡ ಬೇಕೆಂಬ ಆದೇಶವನ್ನು ಕಡ್ಡಾಯವಾಗಿ ಮಾಡಿದ್ದೇವೆ. ಈ ವಿಚಾರದಲ್ಲಿ ನಾನು ಹೇಳಬೇಕಾಗಿರುವ ಅಂಶ ಏನೆಂದರೆ ಪ್ರತಿಯೊಂದು ಸೊಸೈಟಿಯಲ್ಲಿಯೂ, ಪ್ರತಿಯೊಂದು ಕೋ ಅಪರೇಟಿವ್ ಇನ್‌ಸ್ಟಿಟ್ಯೂಷ ನಲ್ಲಿಯೂ ಮೆಂಬರ್ ಶಿಪ್ ಯೂನಿವರ್ಸಲ್ ಆಗಿರಬೇಕು ಉದಾಹರಣೆಗೆ ಹೇಳಬೇಕೆಂದರೆ ಪಿ.ಎಲ್.ಡಿ. ಬ್ಯಾಂಕ್‌ಗೆ ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕಂತಹ ಪ್ರತಿಯೊಂದು ಹೌಸ್ ಹೋಲ್ಡ್‌ಗೆ ಅನ್ವಯಿಸ ಬೇಕು. ಆಗ ತನ್ನಿಂದ ತಾನೇ ಎಲ್ಲಾ ವರ್ಗಗಳಿಗೂ ಪ್ರಾತಿನಿಧ್ಯ ಸಿಗುತ್ತದೆ.

ಇನ್ನು ಎರಡನೆಯ ವಿಚಾರದಲ್ಲಿ ಮುನಿಸಿಪಾಲಿಟಿ ನೌಕರರು ಕಳೆದ ೮-೯ ವರ್ಷಗಳಿಂದಲೂ ಮುಷ್ಕರ ಹೂಡುತ್ತಿದ್ದಾರೆ; ನೀವು ಏನು ಮಾಡುತ್ತಿದ್ದೀರೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅವರ ಪ್ರತಿನಿಧಿಗಳು ನನ್ನ ಬಳಿ ಬಂದಿದ್ದರು. ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಕೂಡ ನನ್ನ ಬಳಿ ಈ ವಿಚಾರವಾಗಿ ಮಾತನಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ನೌಕರರ ಪ್ರತಿ ನಿಧಿಗಳ ಜೊತೆ ಮಾತನಾಡುತ್ತಾರೆ ಮುಷ್ಕರವು ಬಹಳ ಬೇಗ ಮುಕ್ತಾಯವಾಗುತ್ತದೆಂಬ ಭರವಸೆ ನನಗೆ ಇದೆ.

ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಮಾನ್ಯ ಸದಸ್ಯರಾದ ಖರ್ಗೆಯವರು ಹೇಳಿದ್ದಾರೆ. ಈ ವಿಷಯದ ಬಗ್ಗೆ ಬಹಳ ವರ್ಷಗಳಿಂದಲೂ ಒತ್ತಾಯ ಬರುತ್ತಲೇ ಇದೆ ಬೋರ್ಡ್ ಮಾಡಬೇಕಾದರೆ ಅದಕ್ಕೆ ಸಾಕಷ್ಟು ಹಣವನ್ನು ನಾವು ಒದಗಿಸಬೇಕಾಗುತ್ತದೆ. ಬೋರ್ಡ್ ಇದ್ದೂ ಕೂಡ ಹಣ ಒದಗಿಸದಿದ್ದರೆ ಅದು ಏನೂ ಪ್ರಯೋಜನವಾಗುವುದಿಲ್ಲ ಆದರೆ ನಾನು ಮಾನ್ಯ ಸದಸ್ಯರಿಗೆ ಮತ್ತು ಆ ಭಾಗದ ಇತರ ಸ್ನೇಹಿತರಿಗೆ ಹೇಳುವುದು ಇಷ್ಟೇ. ಇನ್ನು ೫ ವರ್ಷಗಳ ನಂತರವಾಗಲೀ ೧೦ ವರ್ಷಗಳ ನಂತರವಾಗಲೀ, ಅಥವಾ ೧೫ ವರ್ಷಗಳ ನಂತರವಾಗಲೀ, ನಾನು ಸಮಯದ ಮಿತಿಯನ್ನು ಹೇಳಲಾರೆ. ಇಡೀ ಕರ್ನಾಟಕದಲ್ಲಿ ಈ ಹೈದರಾಬಾದ್ ಕರ್ನಾಟಕ ಏರಿಯಾ ಒಂದು ಸಮೃದ್ಧಿಯಾದ ಪ್ರದೇಶವಾಗುತ್ತದೆ ಎಂಬ ನಂಬಿಕೆ ನನಗೆ ಇದೆ. ಅಲ್ಲಿ ಇರತಕ್ಕಂತಹ ಉತ್ತಮವಾದ ಪ್ರದೇಶ, ಉತ್ತಮವಾದ ಜನರು, ನೀರು ಬೇರೆ ಕಡೆ ಸಿಗುವುದು ಕಷ್ಟವಾಗುತ್ತದೆ ಎಂದು ಹೇಳಲು ನಾನು ಆಶಿಸುತ್ತೇನೆ.

ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಾನು ಈಗ ಕೇಳುವ ಕೆಲವೊಂದು ವಿಷಯಗಳ ಬಗ್ಗೆ ಭರವಸೆಗಳನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹತ್ತಿ ಗಿರಣಿಗಳು ಬಹಳ ತೊಂದರೆಗೆ ಈಡಾಗಿವೆ. ಸುಮಾರು ೩೫ ಸಾವಿರ ಜನರು ತೊಂದರೆಗೆ ಸಿಲುಕಿ ಕೊಳ್ಳುವಂತಹ ಒಂದು ಪರಿಸ್ಥಿತಿ ನಿರ್ಮಾಣ ಆಗುವ ಸಂಭವ ಇದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಸಂಬಂಧಪಟ್ಟ ಗಿರಣಿ ಮಾಲೀಕರನ್ನು ಕರೆಸಿ ಈ ಒಂದು ಸಮಸ್ಯೆಯನ್ನು ಇತ್ಯರ್ಥ ಮಾಡಿ ತೊಂದರೆಗೆ ಒಳಗಾದವರಿಗೆ ಪರಿಹಾರ ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ನಮ್ಮ ರಾಜ್ಯದಲ್ಲಿ ನಗರಸಭೆಯ ನೌಕರರು ಕಳೆದ ೯ ವರ್ಷಗಳಿಂದಲೂ ಅವರ ಬೇಡಿಕೆಗಳ ಬಗ್ಗೆ ಮುಷ್ಕರ ಮಾಡುತ್ತಿದ್ದಾರೆ. ಅದರಿಂದ

ನಾಗರೀಕರಿಗೆ ಬಹಳ ತೊಂದರೆ ಉಂಟಾಗಿ, ಅವರು ಕಾಯಿಲೆಗೆ ತುತ್ತಾಗುವ ಸಂಭವ ಇದೆ. ಆದುದರಿಂದ ಆ ನೌಕರರ ಪ್ರತಿನಿಧಿಗಳನ್ನು ಕೂಡಲೇ ಕರೆಸಿ ಅವರ ಬೇಡಿಕೆಗಳನ್ನು ಈಡೇರಿಸಿ ಮುಷ್ಕರವನ್ನು ಅಂತ್ಯಗೊಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ಬೆಂಗಳೂರಿನಲ್ಲಿ ವೆಂಕಟೇಶ್ವರ ಮಕ್ಕಳ ಮಂದಿರ ವೆಂಬ ಶಾಲೆ ಇದೆ. ಅಲ್ಲಿ ಆ ಶಾಲೆಗೆ ಪೋಲೀಸರು ಬಹಳ ಕಿರುಕುಳ ಕೊಡುತ್ತಿರುವುದಾಗಿ ನನಗೆ ಮನವಿ ಬಂದಿದೆ. ಹಾಗೆಯೇ ಜಮಖಂಡಿಯಲ್ಲಿ ಒಬ್ಬ ವಕೀಲರಿಗೂ ಪೋಲೀಸ್‌ನವರು ಬಹಳ ಕಿರುಕುಳ ಕೊಡುತ್ತಿರುವುದಾಗಿ ನನಗೆ ಮನವಿಯನ್ನು ಕಳುಹಿಸಿದ್ದಾರೆ. ನಾನು ಈ ಮನವಿಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಈ ವಿಚಾರಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೇಳಿದ ಎಲ್ಲಾ ವಿಚಾರಗಳ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಮುನಿಸಿಪಲ್ ಎಂಪ್ಲಾಯೀಸ್ ಬಗ್ಗೆ ನಿನ್ನೆ ನಾನು ಒಂದು ನೋಟೀಸ್ ಕಳುಹಿಸಿದ್ದೇನೆ. ಮಾನ್ಯ ನಗರಾಭಿವೃದ್ಧಿ ಸಚಿವರು ಕೂಡ ಸಭೆಯಲ್ಲಿದ್ದಾರೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳುವುದು ಶ್ರೀ ಲಕ್ಷ್ಮೀಸಾಗರ್‌ರವರು ಪ್ರಿವಿಲೇಜ್ ಮುಖ್ಯಮಂತ್ರಿಗಳು ಅದನ್ನು ಹೇಳಬಾರದು ಸುಮಾರು ೩ ಲಕ್ಷ ಜನರು ಮುಷ್ಕರ ಮಾಡುತ್ತಿದ್ದಾರೆ. ನಮಗೆ ಪರಿಶೀಲನೆ ಬೇಡ ಸ್ಪಷ್ಟವಾದ ಭರವಸೆ ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುತ್ತೇನೆ.

ಶ್ರೀ ಎಸ್. ಪ್ರಭಾಕರ್ ರಾಣೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಾನ್ಯ ಮುಖ್ಯ ಮಂತ್ರಿಗಳು ಕೈಗಾ ಅಣುಸ್ಥಾವರ ವಿಚಾರದಲ್ಲಿ ಎರಡು ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಒಂದು ಅಣುಸ್ಥಾವರ ಮತ್ತೊಂದು ಟೌನ್‌ಶಿಪ್ ಬಗ್ಗೆ. ಮಾನ್ಯ ಮುಖ್ಯಮಂತ್ರಿಗಳು ಟೌನ್‌ಶಿಪ್‌ಗಾಗಿ ಯಾವ ಸ್ಥಳವನ್ನು ಆಯ್ಕೆ ಮಾಡಿದ್ದಾರೆ ಎಂದು ದಯಮಾಡಿ ತಿಳಿಸಬೇಕು.

ಶ್ರೀ ಮಹಬೂಬ್ ಪಟೇಲ್ ಲಾಡ್ಲೆ ಉಸ್ತಾದ್.—ಮಾನ್ಯ ಸದಸ್ಯರೊಬ್ಬರು ನಿನ್ನೆ ಭಾಷಣ ಮಾಡುವಾಗ ವಿರೋಧಪಕ್ಷದ ಸದಸ್ಯರಿಗೆ ಯಾವುದೇ ಕಮಿಟಿಯಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂದು ಹೇಳಿದ್ದಾರೆ. ಇದನ್ನು ನಾನು ಕೂಡ ಒತ್ತಾಯ ಮಾಡುತ್ತೇನೆ ಮತ್ತು ಕಾರ್ ಲೋನ್ (Car Loan) ಬಗ್ಗೆ ನಾನು ಹೇಳಬೇಕಾದ ವಿಚಾರ ಏನೆಂದರೆ ನಮಗೆ ಈಗ ಕಾರ್ ಲೋನ್ ಎಂದು ೩೫ ಸಾವಿರ ರೂ.ಗಳನ್ನು ಕೊಡುತ್ತಿದ್ದಾರೆ. ಈ ಹಣಕ್ಕೆ ಒಂದು ಮೋಟಾರ್ ಸೈಕಲ್ ಕೂಡ ಬರುವುದಿಲ್ಲ. ಒಂದು ಲಕ್ಷಕ್ಕಿಂತ ಕಡಿಮೆಗೆ ಯಾವ ಕಾರು ಸಿಗುವುದಿಲ್ಲ. ಲೋನ್ ಕೊಟ್ಟರೆ ಕಾರ್ ಕೊಳ್ಳಲು ಅನುಕೂಲವಾಗುವಷ್ಟು ಪೂರ್ಣ ಹಣ ಕೊಡಿ ಇಲ್ಲವಾದರೆ ಬೇಡ ಎಂದು ಹೇಳುತ್ತೇನೆ. ಮತ್ತೊಂದು ಮುಖ್ಯ ವಿಚಾರವೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಇತರ ಮಂತ್ರಿಗಳೊಂದಿಗೆ ಬರಗಾಲ ಪರಿಹಾರಕಾರ್ಯಗಳನ್ನು ಅಧ್ಯಯನ ಮಾಡಲು ಬಿಜಾಪುರ ಜಿಲ್ಲೆಗೆ ಭೇಟಿ ನೀಡಿದಾಗ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಅದೇನೆಂದರೆ ೧೯೮೨-೮೩ ರಲ್ಲಿ ಚುನಾವಣಾ ಸಮಯದಲ್ಲಿ ಹಿಸ್ಟಾರಿಕಲ್ ಪ್ರದೇಶವಾದ ಬಿಜಾಪುರ್ ಪಟ್ಟಣದ ರಸ್ತೆಗಳು ಬಹಳ ಕೆಟ್ಟು ಹೋಗಿವೆ, ನಾವು ಅಧಿಕಾರಕ್ಕೆ ಬಂದರೆ ಖಂಡಿತ ಈ ರಸ್ತೆಗಳನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದರು ಇದನ್ನು ನಾನು ಅವರ ಭೇಟಿಯ ಸಮಯದಲ್ಲಿ ಅವರ ಗಮನಕ್ಕೆ ತಂದಾಗ ತಕ್ಷಣವೇ ವಿಶೇಷ ಹಣವನ್ನು ಈ ಉದ್ದೇಶಕ್ಕಾಗಿ ರಿಲೀಸ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಇದುವರೆವಿಗೂ ಏನೂ ಆಗಿಲ್ಲ ಹಾಗೂ ನೀರಿನ ವಿಚಾರದಲ್ಲಿ ಬಿಜಾಪುರದಲ್ಲಿ ಎಲಿವೇಟ್‌ಡ್ ರಿಸರ್ವಾಯರ್ ಬಗ್ಗೆ ಬಹಳ ವರ್ಷಗಳಿಂದ ಡಿಮ್ಯಾಂಡ್ ಇದೆ. ಈ ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ನೀಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾಲ್ಕು ವಿಚಾರಗಳ ಬಗ್ಗೆ ಹೇಳಿದ್ದಾರೆ ಅವುಗಳನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿ ಒಂದೇ ಒಂದು ವಿಚಾರದ ಬಗ್ಗೆ ನಾನು ವಿವರಣೆ ಕೊಡಲು ಇಚ್ಛೆಪಡುತ್ತೇನೆ. ನಾವು ಬಿಜಾಪುರಕ್ಕೆ ಹೋದಾಗ ಅಲ್ಲಿಯ ಒಂದು ಮೀಟಿಂಗ್‌ನಲ್ಲಿ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಹೇಳಿದ್ದು ನಿಜ. ಆದರೆ ಅದರ ಜೊತೆ ನಾನು ಮತ್ತೊಂದು ವಿಚಾರವನ್ನೂ ಹೇಳಿದ್ದೆ. ಬಿಜಾಪುರದ ನಗರ ಸಭೆಯವರು, ಮುನ್ಸಿಪಲ್ ಕೌನ್ಸಿಲ್‌ನವರು ಕೂಡ ಸ್ವಲ್ಪ ಮಟ್ಟಿಗೆ ತಮ್ಮ ರಿಸೋರ್ಸಸ್ ರೈಸ್ ಮಾಡಿದ್ರೆ ನಾವು ಸ್ಪೆಷಲ್ ಗ್ರಾಂಟ್ಸ್ ಕೊಡಬಹುದು ಎಂದು ಹೇಳಿದ್ದೆ. ನಾನು ನನ್ನ

ಮಾತನ್ನು ನಡೆಸಿಕೊಡುತ್ತೇನೆ. ಸ್ಪೆಷಲ್ ಗ್ರಾಂಟ್‌ನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ರಿಲೀಸ್ ಮಾಡುತ್ತೇವೆ ಎಂದು ಹೇಳಲು ಆಶಿಸುತ್ತೇನೆ.

೩–೩೦ ಪಿ.ಎಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ವೃತ್ತಿ ತೆರಿಗೆ ವ್ಯಾಪ್ತಿಯಲ್ಲಿ ಪತ್ರಿಕೋದ್ಯಮಿಗಳು ಬರುತ್ತಾರೆ. ಸಂಬಳ ಸಾರಿಗೆ ತೆಗೆದುಕೊಳ್ಳುವವರದ್ದು ಸಂಬಳದಲ್ಲಿ ಹೊರಟು ಹೋಗುತ್ತದೆ. ಅದರಲ್ಲೇನು ಸಮಸ್ಯೆ ಬರುವುದಿಲ್ಲ ಸ್ವತಂತ್ರವಾಗಿ ಪತ್ರಿಕೋದ್ಯಮ ಮಾಡುತ್ತಿರುವವರು ಯಾವ ರೀತಿ ತೆರಿಗೆ ಕೊಡಬೇಕೆಂಬುದರ ಬಗ್ಗೆ ಕ್ರಮ ಜರುಗಿಲ್ಲ. ಯಾರು ಜರ್ನಲಿಸ್ಟ್ಸ್ ಎಂಬುದನ್ನು ಗುರುತಿಸಿ ೫ ಸಾವಿರ ಜನರನ್ನು ಹಿಡಿಯಬಹುದು. ಸ್ವತಂತ್ರವಾಗಿ ಪತ್ರಿಕೋದ್ಯಮ ಮಾಡತಕ್ಕದ್ದು ಇನ್ನೂ ಶೈಶಾವವಸ್ಥೆಯಲ್ಲಿರುವುದರಿಂದ ಅದು ಸ್ಟೆಬಿಲೈಸ್ ಆದ ಪ್ರೊಫೆಷನ್ ಅಲ್ಲ. ಆ ದೃಷ್ಟಿಯಿಂದ ವೃತ್ತಿ ತೆರಿಗೆ ವ್ಯಾಪ್ತಿಯಿಂದ ಜರ್ನಲಿಸಂ ಅನ್ನು ಹೊರಗೆ ಹಾಕತಕ್ಕದ್ದು, ಅದಕ್ಕೆ ವಿನಾಯಿತಿ ನೀಡ ತಕ್ಕದ್ದು ಸೂಕ್ತವೆಂದು ಒತ್ತಾಯಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಈಗ ತಾನೇ ಈಸ್ಟ್ ಇಂಡಿಯ ಕಂಪನಿಯವರನ್ನು ರೆಪ್ರೆಸೆಂಟ್ ಮಾಡುವವರು ಯಾರು ಎಂದು ಸೂಚನೆ ಮಾಡಿದ್ದರು. ಮಾನ್ಯ ಸದಸ್ಯರ ಸೂಚನೆ ಜರ್ನಲಿಸ್ಟ್ಸ್‌ಗೆ ಅನ್ವಯವಾಗುವುದಾದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಬಜೆಟ್ಟನ್ನು ಒಂದು ವರ್ಷಕ್ಕೆ ಮಂಜೂರ್ಮಾಡಿ ಕೊಡುತ್ತೇವೆ. ಮಾರ್ಚಿ ತಿಂಗಳಲ್ಲಿ ಎಲ್ಲಾ ಹಣವನ್ನು ಖರ್ಚು ಮಾಡಲಿಕ್ಕೆ ಒಪ್ಪಿಗೆ ಕೊಡುತ್ತೇವೆ. ಈಗ ಬಿ.ಬಿ. ಸಿಂಗ್ ಅವರು ಒಂದು ಹೊಸ ಯೋಜನೆಯನ್ನು ತಂದಿದ್ದಾರೆ. ತಿಂಗಳಿಗೋಸ್ಕರ ಇಂಥಿಂಥ ಬಾಬಿಗೆ ಇಷ್ಟಿಷ್ಟು ಹಣವೆಂದು ಮಂಜೂರ್ಮಾಡಿ ಕೊಡುವುದು, ನಂತರ ೩ ತಿಂಗಳಲ್ಲಿ ಖರ್ಚು ಮಾಡತಕ್ಕದ್ದನ್ನು ಪರಿಶೀಲಿಸಿ ಮುಂದಿನ ೩ ತಿಂಗಳಿಗೆ ಪುನಃ ಹಣವನ್ನು ಕೊಡತಕ್ಕದ್ದು. ಈ ರೀತಿ ಹಣಕಾಸಿನ ಮೇಲೆ ಹತೋಟಿ ಯನ್ನಿಟ್ಟುಕೊಂಡರೆ ಚೆನ್ನಾಗಿ ಖರ್ಚಾಗುತ್ತದೆಂದು ಹೇಳಿದ್ದಾರೆ ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ? ಖರ್ಚಿನ ಬಾಬ್ತು ಶಾಖೆಗಳು ಏನಿವೆ ಅವು ಕೋಟ್ಯಾಂತರ ರೂಪಾಯಿಗಳನ್ನು ಅಪವ್ಯಯ ಮಾಡಿ ಸಿಕ್ಕಿಹಾಕಿಕೊಂಡಿವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅವರನ್ನು ತಪ್ಪಿತಸ್ಥರು ಎಂದು ತೀರ್ಮಾನಿಸುತ್ತಾರೆ. ಅದರ ಪ್ರಕಾರ ಕ್ಯಾಬಿನೆಟ್‌ನವರು ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳ ಬೇಕು. ಇದುವರೆಗೆ ನೀವು ಒಬ್ಬ ಅಧಿಕಾರಿಯನ್ನೂ ಶಿಕ್ಷಿಸಿದ್ದನ್ನು ನೋಡಲಿಲ್ಲ. ಹಿಂದಿನ ಸರ್ಕಾರವನ್ನು ಬಿಡಿ. ತಾವು ಸತ್ಯವಾಗಿ ಆಡಳಿತ ನಿರ್ವಹಣೆ ಮಾಡತಕ್ಕವರು. ಇದರ ಬಗ್ಗೆ ಏನು ಮಾಡಿದ್ದೀರಿ ? ಪೌರ ಕಾರ್ಮಿಕರು ಇವತ್ತಿನ ದಿವಸ ಮುಷ್ಕರ ಮಾಡುತ್ತಿದ್ದಾರೆ. ಎಲ್ಲಾ ಕಡೆ ಮುಷ್ಕರವನ್ನು ಮುಂದು ವರಿಸಿದ್ದಾರೆ, ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದಕ್ಕೆ ಮಾನ್ಯ ಲಕ್ಷ್ಮೀಸಾಗರ್‌ರವರು ಪರಿಶೀಲನೆ ಮಾಡುತ್ತೇವೆ, ಜಗ್ರತೆ ತೀರ್ಮಾನ ಮಾಡುತ್ತೇವೆಂದು ಹೇಳಿದರು. ನಾನು ಪೌರಾಡಳಿತ ಮಂತ್ರಿ ಯಾಗಿದ್ದಾಗ ಅವರಿಗೆ ಏನೇನು ಸೌಲಭ್ಯಗಳನ್ನು ಕೊಡ ಬೇಕಾಗಿತ್ತೋ ಅದನ್ನು ಕೊಟ್ಟೆವು, ಆದರೆ ಬಹಳ ಕೊಡುವುದಕ್ಕೆ ಆಗಲಿಲ್ಲ. ಬೇರೆಯವರು ಮುಷ್ಕರ ಮಾಡಿದಾಗ ಬಡ್ತಿ, ಭತ್ಯಗಳನ್ನು ಹೆಚ್ಚು ಮಾಡಿ ಹೇಗೆ ಅನುಕೂಲ ಮಾಡಿಕೊಡುತ್ತೀರಿ ಅದೇ ರೀತಿ ಇವರಿಗೂ ಮಾಡಿಕೊಡಬೇಕೆಂದು ಹೇಳುತ್ತೇನೆ. ಇವರು ಎಂದೂ ಮುಷ್ಕರ ಮಾಡಿಲ್ಲ, ಈಗ ಹೊಸದಾಗಿ ಮಾಡಿದ್ದಾರೆ. ಪುನಃ ಮಾಡಲಿಕ್ಕೆ ಅವಕಾಶ ಇಲ್ಲದಂತೆ ಅವರ ಬೇಡಿಕೆಗಳನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಪೌರ ಕಾರ್ಮಿಕರ ವಿಚಾರದಲ್ಲಿ ಆಗಲೇ ಹೇಳಿದ್ದೇನೆ. ಅವರ ಪ್ರತಿ ನಿಧಿಗಳೂ ಬಂದಿದ್ದರು. ಅವರ ಹತ್ತಿರ ನಾನು ೨ ನಿಮಿಷ ಮಾತನಾಡಿದ್ದೇನೆ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಇದರಲ್ಲಿ ಆಸಕ್ತಿ ವಹಿಸಿದ್ದಾರೆ. ನಗರಾಭಿವೃದ್ಧಿ ಮಂತ್ರಿಗಳು ಈ ಸದನದ ಕಾರ್ಯ ಕಲಾಪ ಮುಗಿದ ಮೇಲೆ ಅವರನ್ನು ಭೇಟಿಯಾಗಿ ಅವರ ಸಮಸ್ಯೆಗಳನ್ನು ತಿಳಿದುಕೊಳ್ಳುತ್ತಾರೆ. ಬಹುಶಃ ಅವರು ಇವತ್ತು ತಮ್ಮ ಮುಷ್ಕರವನ್ನು ಮುಗಿಸುತ್ತಾರೆಂಬ ಆಸೆ ನನಗಿದೆ. ಕ್ವಾರ್ಟರ್ಲಿ ಹಣ ರಿಲೀಸ್ ಮಾಡಬೇಕೆಂದರಲ್ಲದೆ ಕೇಂದ್ರ ಸರ್ಕಾರದವರು ಈ ವರ್ಷದಿಂದ ಮಾಡುತ್ತಾರೆಂದು ಹೇಳಿ ದ್ದಾರೆ. ನಾವು ಕಳೆದ ಎರಡು ವರ್ಷಗಳ ಹಿಂದೆಯೇ ಈ ಕಾರ್ಯಕ್ರಮವನ್ನು ಜಾರಿಯಲ್ಲಿ ತಂದಿದ್ದೇವೆ. ಮತ್ತು ಪ್ರತಿ ೩ ತಿಂಗಳಿಗೊಮ್ಮೆ ವಿಮರ್ಶೆ ಮಾಡುತ್ತೇವೆ. ಎಷ್ಟು ಹಣ ಖರ್ಚಾಯಿತು, ಎಷ್ಟು ಗುರಿ ಸಾಧನೆಯಾಯಿತು ಎಂಬುದನ್ನು ನೋಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಉತ್ತರ ಮತ್ತು ವಿವರಣೆ ಮುಗಿಯಿತು. ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ,

ಪ್ರಸ್ತಾವವೇನೆಂದರೆ :

"೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೬ ೪೮ ೧೫ ೧೬ ೧೭ ೧೮ ೨೦ ೩೮ ೩೯ ೪೦ ೪೧ ಮತ್ತು ೪೨ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರ್ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರ್ಮಾಡಲಾಯಿತು.

(ಈ ಹಂತದಲ್ಲಿ ಸ್ಪಷ್ಟೀಕರಣಕ್ಕೆ ಅವಕಾಶ ನೀಡಿಲ್ಲವೆಂದು ಶ್ರೀ ಕೆ.ಬಿ. ಶಾಣಪ್ಪನವರು ಪ್ರತಿಭಟನೆ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು).

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯೋಚನೆ ಕ್ರಮಾಂಕ-೬-ಗಣಿಗಳು ಮತ್ತು ಭೂ ವಿಜ್ಞಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೯೬,೯೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು."

ಅಭಿಯೋಚನೆ ಸಂಖ್ಯೆ-೪೮-ವಿದ್ಯುಚ್ಛಕ್ತಿ ಯೋಜನೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩ ೯೩ ೮೨ ೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧.೪೮,೦೫ ೩೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು"

ಅಭಿಯೋಚನೆ ಕ್ರಮಾಂಕ – ೧೫ – ವರಮಾನ ತೆರಿಗೆ, ವೃತ್ತಿಗಳು. ಮಾರಾಟ ಮತ್ತು ಇತರೆ ಸೇವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೦,೩೫,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು"

ಅಭಿಯೋಚನೆ ಕ್ರಮಾಂಕ-೧೬-ವಿಮೆ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೫೬,೧೬.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು."

ಅಭಿಯೋಜನೆ ಕ್ರಮಾಂಕ - ೧೭ - ವಿಶ್ರಾಂತಿ ವೇತನ ಮತ್ತು
ಇತರ ನಿವೃತ್ತಿ ಸೌಲಭ್ಯಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೦೦,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು."

ಅಭಿಯೋಜನೆ ಕ್ರಮಾಂಕ – ೧೮ – ಸರಕಾರಿ ನೌಕರರಿಗೆ ಸಾಲಗಳು ಮತ್ತು
ವಿವಿಧ ಸಾಲಗಳು

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬಂಡವಾಳ ಖಾತೆಯಲ್ಲಿ ೩೨,೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು''

ಅಭಿಯೋಜನೆ ಕ್ರಮಾಂಕ-೨೦-ವಿವಿಧ ಸಾಮಾನ್ಯ ಸೇವೆಗಳು

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿವಿಧ ಸಾಮಾನ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೭೦,೩೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತು ಬಂಡವಾಳ ಖಾತೆಯಲ್ಲಿ ೩,೭೫,೦೦,೦೦೦ ರೂ. ಗಳಿತಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು''

ಅಭಿಯೋಜನೆ ಕ್ರಮಾಂಕ-೩೮-ಚುನಾವಣೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೮,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು"

ಅಭಿಯೋಜನೆ ಕ್ರಮಾಂಕ – ೩೯ – ರಾಜ್ಯಪಾಲರು, ಮಂತ್ರಿಗಳು ಮತ್ತು
ಲೋಕಸೇವಾ ಆಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೪೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು''

ಅಭಿಯೋಜನೆ ಕ್ರಮಾಂಕ – ೪೦ – ಸಚಿವಾಲಯ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦, ೨೩, ೮೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.'

ಅಭಿಯಾಚನೆ ಕ್ರಮಾಂಕ — ೪೧ ಜಿಲ್ಲಾಡಳಿತ

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫, ೭೬, ೮೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.'

ಅಭಿಯಾಚನೆ ಕ್ರಮಾಂಕ — ೪೨ ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯, ೫೨, ೪೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.'

Supplementary Estimates for the Year-1985-86.

Sri A. LAKSHMISAGAR (Minister for Urban Development, Law and Parliamentary Affairs). Sir, On behalf of the Hon. Chief Minister I beg to move the Supplementary Demands for Grants (2nd Instalment) for the year 1985-86 for taken into consideration.

The question was proposed

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೮೫-೮೬ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳನ್ನು ಸಭೆಯ ಮುಂದಿಟ್ಟಿದ್ದೇನೆ. ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಲಕ್ಷ್ಮೀಸಾಗರ್‌ರವರು ಅಂದಾಜುಗಳನ್ನು ಮತಕ್ಕೆ ಹಾಕಿ ಎಂದು ಹೇಳಿದ ಹಾಗೆ ಆಯಿತು. ಒಂದೇ ಸಾರಿ ಸಪ್ಲಿಮೆಂಟರಿ ಡಿಮ್ಯಾಂಡನ್ನು ಇಟ್ಟು ಮತಕ್ಕೆ ಹಾಕಿ ಎಂದು ಹೇಳುವ ಪದ್ಧತಿ ಒಳ್ಳೆಯದಲ್ಲ. ಸಂಸದೀಯ ಸಚಿವರ ಸೂಚನೆ ಏನಿದೆ ಅದು ಒಳ್ಳೆಯ ಸಂಪ್ರದಾಯವೂ ಅಲ್ಲ ಹಾಗೂ ಒಳ್ಳೆಯ ನೀತಿಯೂ ಅಲ್ಲ, ನ್ಯಾಯವೂ ಅಲ್ಲ. ಹೊಟ್ಟೆ ಹಸಿದಿದ್ದರೆ ಊಟ ಮಾಡಿ ಬನ್ನಿ, ಆ ಪ್ರಶ್ನೆ ಬೇರೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾತನಾಡುವವರು ಇದ್ದರೆ ಮಾತನಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಮಧ್ಯದಲ್ಲಿ ತೂರಿಸುವ ಬುದ್ಧಿ ಬೇಡ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.— ಏತಕ್ಕೆ ಆ ರೀತಿ ಹೇಳುತ್ತಾರೆಂದು ಗೊತ್ತಾಗಲಿಲ್ಲ. ಪ್ರತಿಭಟನಾ ರೂಪವಾಗಿ ಶ್ರೀ ರಾಮಪ್ಪನವರು ಮತ್ತು ಆರ್. ಎನ್. ನಾಯಕ್ ಅವರು ಸಭಾತ್ಯಾಗ ಮಾಡಿದರು.

ಶ್ರೀ ಜಿ. ನಾರಾಯಣ ಕುಮಾರ್.— ನಮಗೂ ಅವಕಾಶ ಸಿಕ್ಕಿಲ್ಲ.

† ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).— ಮಾನ್ಯ ಅಧ್ಯಕ್ಷರೆ, ಸರ್ಕಾರದವರು ೧೯೮೫-೮೬ನೇ ಸಾಲಿಗೆ ಸಂಬಂಧಿಸಿದಂತೆ ಪೂರಕ ಬೇಡಿಕೆಗಳನ್ನು ಸದನದ ಒಪ್ಪಿಗೆಗಾಗಿ ಮಂಡನೆ ಮಾಡಿದ್ದಾರೆ. ಒಟ್ಟು ೨೦೧ ಕೋಟಿ ೩೮ ಲಕ್ಷ ರೂಪಾಯಿ ಈ ಒಂದು ಪೂರಕ ಅಂದಾಜಿನಲ್ಲಿ ಇದ್ದರೆ ಅದರಲ್ಲಿ ೭೪.೪೩ ಕೋಟಿ ರೂಪಾಯಿ ಕೇಂದ್ರ ಸರ್ಕಾರದ ಸಹಾಯಧನವಾಗಿದೆ. ೪೩.೪೬ ಕೋಟಿ ರೂಪಾಯಿಗಳು ಅಕೌಂಟ್ಸ್ ಅಡ್ಜಸ್ಟ್‌ಮೆಂಟಿಗೆ ಬರುತ್ತದೆ. ೨ ಕೋಟಿ ೪ ಲಕ್ಷ ರೂಪಾಯಿ ಬೇರೆ ಬರುತ್ತದೆ. ನೆಟ್ ಔಟ್‌ಗೋ ಫ್ರಂ ಜನರಲ್ ರೆವಿನ್ಯೂಸ್ ೯೧.೪೫ ಕೋಟಿ ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.